ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

ಬೆಲೆ: ಎರಡು ಆಣೆ

ಕರ್ಮವೀರ

KARMAVEER
WEEKLY
HUBLI
JULY 22
1946

ಸಂಪಾದಕರು : ಹ. ರಾ. ಪುರೋಹಿತ, ಎಂ. ಎ.]
ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ
[Editor : H. R. Purohit, M. A.

ಸಂಪುಟ ೧೮] ೨೯
ಹುಬ್ಬಳ್ಳಿ ಸೋಮವಾರ ತಾರೀಖು ೨೨ — ೭ — ೧೯೪೬
೨೯ [ಸಂಚಿಕೆ ೦೮

ನಡುಗಾಲ ಸರಕಾರ ರಚನೆಗೆ ಕಾಂಗ್ರೆಸ್ಸನ್ನು ಕರೆಯಿರಿ

ಸತ್ವಪರೀಕ್ಷೆಯಲ್ಲಿ ಮುಸ್ಲಿಂ ಲೀಗಿನ ಸೋಲು : ವೇವೆಲ್ಲರ ಕರ್ತವ್ಯ

ಅಮೇರಿಕನ್ ಲೇಖಕ ಲುಯಿ ಫಿಶರರಿಂದ

ಪುಣೆಯಲ್ಲಿ ಮಹಾತ್ಮಾ ಗಾಂಧಿ, ಪಂಡಿತ ನೆಹರೂ ಮುತ್ತಿತರರೊಡನೆ ಸಂಭಾಷಣೆಗಳನ್ನು ನಡೆಸುತ್ತ ನಡುವೆ ಬ್ರಿಟಿಶ ರಾಯಭಾರದವರ ಮಾತುಕತೆಗಳಿಗೆ ಸಂಬಂಧಿಸಿದ ಪತ್ರ-ಲೇಖಗಳನ್ನು ಅಭ್ಯಸಿಸುತ್ತಿದ್ದೆನು. ಕಳೆದ ಕೆಲ ತಿಂಗಳುಗಳಲ್ಲಿ ಹಿಂದುಸ್ತಾನದಲ್ಲಿ ಸಂಭವಿಸಿದ್ದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಅದನ್ನು ತಿಳಿದುಕೊಳ್ಳಲು ಸಮರ್ಥನಾದರೆ ಭವಿತವ್ಯದ ಗರ್ಭದಲ್ಲಿ ಬುದ್ಧಿಯನ್ನು ಚಾಚಿ ಮುಂದೆ ರೂಪುಗೊಳ್ಳಬಹುದಾದ ಘಟನೆಗಳನ್ನು ಊಹಿಸಲು ಸಾಧ್ಯವಾದೀತು.

ಈಗ ಹಿಂದೀ ರಾಜಕಾರಣದಲ್ಲಿ ಅತ್ಯಂತ ಅಪೇಕ್ಷಣೀಯವೂ ಕಲ್ಯಾಣಕರವೂ ಆದ ಸಂಗತಿ ಜರಗಿದೆಯೆಂದು ನನಗೆ ತೋರುತ್ತದೆ: ಪರಸ್ಪರ ವಾದ ವಿವಾದ, ಸೂಕ್ಷ್ಮ ಕಾಯಿದೆವಿಷಯಕ ಚರ್ಚೆಗಳ ರಂಗದಿಂದ ನಿಜವಾದ ಶಕ್ತಿಪರೀಕ್ಷೆಯ ಕ್ಷೇತ್ರಕ್ಕೆ ಎಳೆತರಲ್ಪಟ್ಟಿದೆ. ಮಂತ್ರಿ ರಾಯಭಾರಿಗಳ ಮತ್ತು ವಾಯಿಸರಾಯರ ಸಂಗಡ ನಡೆದ ಚರ್ಚೆಗಳು ವ್ಯಾವಹಾರಿಕ ರಾಜಕಾರಣರಂಗದಲ್ಲಿ ಪರೀಕ್ಷಾರೂಪದವಾಗಿದ್ದವು. ಈ ಚರ್ಚೆಗಳಿಂದ ಹೊರಪಟ್ಟ ಅತ್ಯಂತ ಮಹತ್ವದ ಸಂಗತಿಯೆಂದರೆ, ಕಾಂಗ್ರೆಸ್ಸನ್ನು ಬಿಟ್ಟು ತಾತ್ಪೂರ್ತಿಕ ಸರಕಾರವನ್ನು ಸ್ಥಾಪಿಸಲು ಮುಂದುವರಿಯುವದು ತಮಗೆ ಸಾಧ್ಯವಿಲ್ಲವೆಂದು ಬ್ರಿಟಿಶರಿಗೆ ಮನವರಿಕೆಯಾದುದು.

ಗುಟ್ಟು ಹೊರಬಿತ್ತು

ಕಾಂಗ್ರೆಸ್ಸು ಸಹಕರಿಸಲು ಒಪ್ಪದಿದ್ದರೆ ಮುಸ್ಲಿಂ ಲೀಗಿನೊಡನೆ ನಡುಗಾಲ ಸರಕಾರವನ್ನು ಸ್ಥಾಪಿಸುವದೇ ಬ್ರಿಟಿಶ ಸರಕಾರದವರ ಉದ್ದೇಶವಾಗಿತ್ತೆಂಬ ಮಾತು ಪ್ರಕಟಿಸಲ್ಪಟ್ಟಿರುವ ಹೇಳಿಕೆಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಕನಿಷ್ಠ ಪಕ್ಷ, ಹಾಗೆ ತಾವು ಮಾಡಲಿರುವೆವೆಂಬ ಭಾವನೆಯನ್ನು ಹುಟ್ಟಿಸಲು ಬ್ರಿಟಿಶರು ಬಯಸಿದ್ದರೆಂಬದು ನಿಶ್ಚಯ. ಆದರೆ ಅವರು ಹಾಗೆ ಮಾಡಲಿಲ್ಲ. ಹಾಗೆ ಮಾಡುವದು ಸಾಧ್ಯವಿಲ್ಲೆಂದೂ ಈಗ ಅವರಿಗೆ ಗೊತ್ತಾಗಿದೆ. ಅದೇ ಪ್ರಕಾರ ಜಿನ್ನಾ ಸಾಹೇಬರಿಗೆ ಹಿಂದೇಟು ಕೊಟ್ಟರೆ ಅಥವಾ ಅವರನ್ನು ಸೋಲಿಸಿದರೆ ಕೂಡ ಅವರು ಹಿಂದುಸ್ತಾನವನ್ನು ಯಾದವೀಕಲಹದಲ್ಲಿ ಕೆಡಹಲಾರರೆಂಬ ಮಾತನ್ನೂ ಬ್ರಿಟಿಶರು ಕಂಡುಕೊಂಡರು.

ಹಿಂದುಸ್ತಾನದ ಪರಿಚಯ ಚನ್ನಾಗಿರುವ ಬ್ರಿಟಿಶ ಅಧಿಕಾರಿಗಳಿಗೆ ಮುಸ್ಲಿಂ ಲೀಗದ ಶಕ್ತಿಸಾಮರ್ಥ್ಯಗಳ ಸರಿಯಾದ ಅಳವು ಬಹಳ ಹಿಂದಿನಿಂದಲೇ ತಿಳಿದಿತ್ತೆಂದು ತೋರುತ್ತದೆ. ಆದರೆ ಜಿನ್ನಾ ಸಾಹೇಬರು ಸಿಕ್ಕಸಿಕ್ಕಂತೆ ಕೊಚ್ಚಿಕೊಳ್ಳುತಿದ್ದಾಗ ಎದುರಾಡದಿರುವದೇ ತತ್ಕಾಲಕ್ಕೆ ಅವರಿಗೆ ಸಾಧಕವಾಗಿತ್ತು. ಒಮ್ಮೊಮ್ಮೆ ಜಿನ್ನಾರ ಬೇಡಿಕೆಗಳಿಗೂ ಬೆದರಿಕೆಗಳಿಗೂ ಅವರು ಗೋಣು ಹಾಕಿದ್ದೂ ಉಂಟು, ಇಂದು, ಈ ಮಾತುಕತೆಗಳಿಂದ ಸತ್ವಪರೀಕ್ಷೆಯಾಗಿ ಬಿಟ್ಟಿದೆ. ಅದರಿಂದ ಅಧಿಕಾರಿಗಳ ಕಾಲಡಿಯಿಂದ ನೆಲೆಯೆ ಹಾರಿಹೋದಂತಾಗಿದೆ. ಇನ್ನುಮೇಲೆ ಅವರು ಜಿನ್ನಾರನ್ನು ಸಂತುಷ್ಟಗೊಳಿಸಬೇಕೆಂದು ವಾದಿಸಿದರೆ ಯಾರು ಕೇಳುವರು ?

ಇದು ಹಿಂದೀ ಸ್ವಾತಂತ್ರ್ಯಪಥದಲ್ಲಿ ಮುನ್ನಡೆಯೇ ಸೈ.

ಬ್ರಿಟಿಶ ಯೋಜನೆಯನ್ನು ಬಹಳ ಜನ ಹಿಂದೀಯರು ಸಾಹಿತ್ಯದ ಅಥವಾ ಕಾಯಿದೆಯ ಮಾನದಂಡದಿಂದ ಅಳೆಯುತ್ತಿರುವದು ಸರಿಯಲ್ಲವೆಂದು ನನ್ನೆಣಿಕೆ. ಈ ಯೋಜನೆಯೊಂದು "ತೀರ್ಪು", ಅದರಿಂದ ಅದನ್ನು ತಿರಸ್ಕರಿಸಬೇಕು, ಎಂಬದು ಅವರ ವಾದ. ಈ ವಾಕ್ಯ ಕೆಟ್ಟ, ಆ ವಾಕ್ಯ ಅದಕ್ಕೂ ಅತ್ತತ್ತ ಎಂದು ಅವರು ಹಟ ಮಾಡುತ್ತಾರೆ.

ನನ್ನ ಒರೆಗಲ್ಲು ಬೇರೆಯೆ ,ಬಗೆಯದು: ಈ ಸೂಚನೆಗಳಿಂದ ಹಿಂದೀ ಸ್ವಾತಂತ್ರ್ಯದ ಪ್ರತಿಪಾದಕರಿಗೆ ತಾವು ಸ್ವಾತಂತ್ರ್ಯವಿರೋಧಿಗಳಿಗಿಂತ ಬಲಿಷ್ಠರಿರುವದನ್ನು ಸಿದ್ಧಮಾಡಿ ತೋರಿಸಲು ಅವಕಾಶ ದೊರೆಯುತ್ತದೆಯೆ ?

ಕಾಂಗ್ರೆಸ್ಸಿನ ಶಕ್ತಿ

ಈಗಾಗಲೆ ಈಚೆಗಿನ ತಿಂಗಳುಗಳಲ್ಲಿ ಸ್ಪಷ್ಟವಾದ ಘಟನೆಗಳು ಕಾಂಗ್ರೆಸ್ಸಿನ ಜನಬೆಂಬಲದ ಶಕ್ತಿ ಜಿನ್ನಾರ ಶಕ್ತಿಗಿಂತ ಪ್ರಬಲವಾದುದೆಂದು ಪ್ರದರ್ಶಿಸಿವೆ. ಇನ್ನೂ ಹಲವು ಸತ್ವಪರೀಕ್ಷೆಗಳಾಗುವದು ಅವಶ್ಯವೆಂದು ತೋರುತ್ತದೆ.

" ಬ " ಮತ್ತು " ಕ " ಗುಂಪುಗಳ ಘಟನಾ ಸಮಿತಿಗಳನ್ನು ಇನ್ನೂ ಕೆಲ ಸತ್ವಪರೀಕ್ಷೆಗಳಿಗೆ ದಾರಿ ಹಾಕಿಕೊಡುವವು. " ಬ " ಗುಂಪಿನ ಘಟನಾ ಸಮ್ಮೇಲನದಲ್ಲಿ ಸ್ವಾತಂತ್ರ್ಯವಾದಿಗಳು ವಿಚ್ಛೇದವಾದಿಗಳನ್ನು ಸೋಲಿಸಿದರೆ ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟವನ್ನು ಗೆದ್ದಂತೆಯೆ ಆಯಿತು.

ಮೇ ೧೬ ರ ಬ್ರಿಟಿಶ ಸೂಚನೆಗಳು ಹಿಂದೀ ರಾಷ್ಟ್ರೀಯ ವಾದಿಗಳ ವಿಜಯಕ್ಕೆ ಪ್ರತಿಕೂಲವಾದ ವಾತಾವರಣವನ್ನು ಕಲ್ಪಿಸಿದೆಯೆಂದು ವಾದಿಸುವವರ ವಾದ ಪ್ರಬಲವಾದುದು ನಿಜ. ಆದರೂ ರಾಜಕೀಯ ಹೋರಾಟ ನಡೆದೇ ಹೋಗಲಿ. ಈ ಪ್ರತಿಕೂಲ ವಾತಾವರಣದಲ್ಲಿಯೂ ರಾಷ್ಟ್ರೀಯತೆಯ ವಿರೋಧಿಗಳನ್ನು ರಾಷ್ಟ್ರೀಯರು " ಬ " ಗುಂಪಿನಲ್ಲಿ ಕೂಡ ಸೋಲಿಸಬಲ್ಲರಾದರೆ ಅದು ಸ್ವತಂತ್ರ, ಅಖಂಡ ಹಿಂದುಸ್ತಾನವಿರಬೇಕೆಂಬದಕ್ಕೆ ಪರಮ ಪ್ರಮಾಣವಾಗುವದು.

ರಾಷ್ಟ್ರೀಯ ಮುಸ್ಲಿಮರು

ಕಾಂಗ್ರೆಸ್ಸು ಎಷ್ಟೆಷ್ಟು ಬಲ ತೋರಿಸುವದೋ ಅಷ್ಟಷ್ಟು ಅದರ ಬಲ ಹೆಚ್ಚುತ್ತ ಹೋಗುವದು. ಈ ವರೆಗೆ ಮುಸ್ಲಿಂಲೀಗೊಂದನ್ನು ಬಿಟ್ಟು ಬೇರೆಲ್ಲ ಹಿಂದೀ ಪಕ್ಷಗಳು, ಮತ್ತು ಸಂಸ್ಥಾನಗಳು ಕೂಡ, ಕಾಂಗ್ರೆಸ್ಸಿನೊಡನೆ ಸಹಕರಿಸುವ ಒಲವನ್ನು ತೋರಿಸುತ್ತಿವೆ. ಇದು ಮಹತ್ವದ ರಾಜಕೀಯ ವಿದ್ಯಮಾನ. ಈಗಿರುವದೆಂದರೆ, ಮುಸ್ಲಿಂರೊಳಗೆ ಇರುವ ಭಿನ್ನತೆ ಮಾತ್ರ. ರಾಷ್ಟ್ರೀಯತಾ ವಿರೋಧಿ ಮುಸ್ಲಿಮರ ವಿರುದ್ಧ ರಾಷ್ಟ್ರೀಯ ಮುಸ್ಲಿಮರನ್ನು ಬಲಗೊಳಿಸಲು ಕೃತಿಗಳು ಅವಶ್ಯವಾಗಿವೆ. ಇದನ್ನು ಮಾಡಿ ಇಂಗ್ಲಂಡಿಗೆ ನಿಜವಾಗಿ ಹಿಂದುಸ್ತಾನದ ಸ್ವಾತಂತ್ರ್ಯ ಬೇಕಾಗಿದೆಯೆಂದು ತೋರಿಸಿಕೊಡುವದು ಲಾರ್ಡ ವೇವೆಲ್ ಮತ್ತು ಬ್ರಿಟಿಶ ಮಂತ್ರಿಮಂಡಲ ಇವರಿಗೆ ಸೇರಿದ ಮಾತು.

ಲಾರ್ಡ ವೇವೆಲ್ಲರು ತಾವು ಹಿಂದುಸ್ತಾನದ ಸ್ವಾತಂತ್ರ್ಯಪಥದಲ್ಲಿ ಅಡೆತಡೆಗಳನ್ನೊಡ್ಡುತಿರುವದಿಲ್ಲವೆಂಬುದಕ್ಕೆ ಸ್ಫುಟವಾದ ಪ್ರಮಾಣವನ್ನು ಒದಗಿಸಬೇಕೆಂದು ನಾನು ಬಿನ್ನವಿಸುತ್ತೇನೆ. ಸಮ್ಮಿಶ್ರ ತಾತ್ಪೂರ್ತಿಕ ಸರಕಾರವನ್ನು ರಚಿಸಲು ಕಾಂಗ್ರೆಸ್ಸನ್ನು ಆಮಂತ್ರಿಸಿ ವೇವೆಲ್ಲರು ಆ ಪ್ರಮಾಣವನ್ನು ಒದಗಿಸಬಲ್ಲರು. ಒಂದು ರಾಷ್ಟ್ರದ ಹಣೆಬರಹವೆ ಪಣಕ್ಕೆ ಬಿದ್ದಿರುವಾಗ ಶಬ್ದಗಳಿಗೆ ಜಿಪುಣತನ ತೋರಿಸುವದರಲ್ಲೇನು ಅರ್ಥವಿದೆ ? ಸತ್ಯವಾದ ಜಾಣತನದ್ದಲ್ಲದಿದ್ದ ಸಂದರ್ಭಗಳಲ್ಲಿ ಸಹಿತ ಸತ್ಯವನ್ನೇ ಆಡುವದರಲ್ಲಿ ನಾನು ವಿಶ್ವಾಸವಿಟ್ಟಿದ್ದೇನೆ. ಲಾರ್ಡ ವೇವೆಲ್ಲರಲ್ಲಿ ಹಿಂದೀ ಸ್ವಾತಂತ್ರ್ಯದ ಬಗ್ಗೆ ಇರಬೇಕಾದಷ್ಟು ಸಹಾನುಭೂತಿಯಿಲ್ಲ. ಅಟ್ಲಿಯವರ ಮಂತ್ರಿಮಂಡಲದ ಕೆಲ • ಸದಸ್ಯರಲ್ಲಿರುವಷ್ಟು ಸಹಾನುಭೂತಿ ಕೂಡ ಅವರಲ್ಲಿಲ್ಲ ಎಂದು ಸಂದೇಹಪಡುವ ಹಿಂದೀಯರು ಎಷ್ಟೋ ಜನ ಇರುವರು. ಈ ಹೇಳಿಕೆ ಸರಿಯೋ ತಪ್ಪೋ ನಾನರಿಯೆ. ಆದರೆ ಇಂಥ ಭಾವನೆಯಿದೆಯೆಂದು ನನಗೆ ತಿಳಿದಿದೆ. ಬ್ರಿಟಿಶ ಧೋರಣೆಯ ಬಗ್ಗೆ ಹಿಂದೀಯರ ನಿಲುವೆಯಲ್ಲಿ ಆ ಭಾವನೆಯ ಪ್ರಭಾವ ಆಗುತ್ತಿದೆ.

ವೇವೆಲ್ಲರ ಕರ್ತವ್ಯ

೧೯೪೩ ರಲ್ಲಿ ನಾನು ಲಾರ್ಡ ವೇವೆಲ್ಲರೊಡನೆ ಅನೇಕ ಸ್ನೇಹಮಯ ಸಂಭಾಷಣೆಗಳನ್ನು ನಡೆಸಿದ್ದೇನೆ: ಜಾಗತಿಕ ವಿಷಯಗಳಲ್ಲಿ ವಿಶಾಲವಾದ ದೃಷ್ಟಿಕೋನವುಳ್ಳ ಸುಸಂಸ್ಕೃತ ಮಾನವ ಪ್ರಾಣಿ ಅವರೆಂದು ನನಗೆ ಮನವರಿಕೆಯಾಗಿದೆ. ಹಿಂದುಸ್ತಾನದ ಶಾಂತಿಮಯ ವಿಮೋಚನೆಯ ದಿನವನ್ನು ಶೀಘ್ರಗೊಳಿಸುವ ಶಕ್ತಿ ಇಂದು ಅವರ ಕೈಯಲ್ಲಿದೆ. ನಡುಗಾಲ ಸರಕಾರವೊಂದನ್ನು ಸಂಘಟಿಸುವಗೋಸುಗ ಬೇಕಾದ ಕ್ರಮ ಕೈಕೊಳ್ಳಲು ಅವರು ಈಗ ಸನ್ನದ್ಧರಾಗಿದ್ದಾರೆ.

ಇಂಗ್ಲಂಡಿನಲ್ಲಿ, ಫ್ರಾನ್ಸಿನಲ್ಲಿ ಮತ್ತು ಕ್ಯಾಬಿನೆಟ್ ಪದ್ಧತಿಯ ಸರಕಾರವಿರುವ ಎಲ್ಲ ದೇಶಗಳಲ್ಲಿ ಸಾಮಾನ್ಯವಾಗಿರುವ ಪ್ರಜಾತಂತ್ರಾತ್ಮಕ ಪದ್ಧತಿಯನ್ವಯ ರಾಷ್ಟ್ರದ ಅಧಿಪತಿಯಾಗಿರುವವನು ಅತಿ ದೊಡ್ಡ ಪಕ್ಷಕ್ಕೆ ಮಂತ್ರಿಮಂಡಲ ರಚಿಸಲು ಆದೇಶ ಕೊಡುತ್ತಾನೆ. ಲಾರ್ಡ ವೇವೆಲ್ಲರು ಕಾಂಗ್ರೆಸ ಪಕ್ಷಕ್ಕೆ ಅಂಥ ಆದೇಶವನ್ನು ಕೊಡುವವರಾಗಲಿ. ಹಾಗೆ ಮಾಡಿದಲ್ಲಿ ಕಾಂಗ್ರೆಸ್ಸು ಬಹಳ ವಿವೇಕದಿಂದ, ಔದಾರ್ಯದಿಂದ, ಮತ್ತು ಸಮನ್ವಯದಿಂದ ಸಾಗಬೇಕಾಗುವದು. ಕಾಂಗ್ರೆಸ್ಸು ಯಾವ ಅಲ್ಪಸಂಖ್ಯಾಕರ ಹಿತಕ್ಕೂ ಹಾನಿ ಮಾಡಲಾರದೆಂದು ನನ್ನ ಮನಸ್ಸು ಖಚಿತವಾಗಿ ಹೇಳುತ್ತದೆ. ಅಲ್ಪಸಂಖ್ಯಾಕರೆಂದು ಕರೆಸಿಕೊಳ್ಳಲಾರದಷ್ಟು ದೊಡ್ಡ ಜಾತಿಯಾದ ಮುಸ್ಲಿಮರ ಹಿತವನ್ನಂತೂ ಅದು ಅಲಕ್ಷಿಸಲೇ ಅರದು. ಕಾಂಗ್ರೆಸ್ಸು ನಡುಗಾಲ ಸರಕಾರದಲ್ಲಿ ನ್ಯಾಯವಾದ ಪ್ರಮಾಣದಲ್ಲಿ ಮುಸ್ಲಿಂ ಲೀಗದವರನ್ನೂ ಸೇರಿಸಿಕೊಳ್ಳುವದೆಂದು ನನಗೆ ಭರವಸೆಯಿದೆ. ಸಾಮಾನ್ಯವಾಗಿ ನಿರೀಕ್ಷಿಸಬಹುದಾದುದಕ್ಕಿಂತ ಹೆಚ್ಚು ಜನ ಮುಸ್ಲಿಂ ಲೀಗದವರನ್ನು ಸೇರಿಸಿಕೊಳ್ಳುವದು ಹಿತಕರವಾಗಬಹುದು.

ಬ್ರಿಟಿಶರು ಹಿಂದೆ ಸರಿಯಲಿ

ನಡುಗಾಲ ಸರಕಾರದ ರಚನೆ ಬ್ರಿಟಿಶರಿಗೆ ಹಿಂದುಸ್ತಾನವನ್ನು ಬಿಡುಗಡೆ ಮಾಡುವ ಆತುರವಿದೆಯೆಂಬುದಕ್ಕೆ ಪ್ರಮಾಣವೊದಗಿಸಲು ಚಿರಿತ್ರಾರ್ಹವಾದ ಅವಕಾಶವನ್ನು ಒದಗಿಸಿದೆ. ಬ್ರಿಟಿಶ—ಕಾಂಗ್ರೆಸ—ಮುಸ್ಲಿಂ ಲೀಗ ತ್ರಿಕೋಣವನ್ನು ಒಡೆದು ತ್ರಿಕೋಣದಿಂದ ಬ್ರಿಟಿಶರು ಹಿಂದೆ ಸರಿದರೆ ಆ ಆತುರದ ಪ್ರಮಾಣ ಒದಗಿಸಿದಂತಾಯಿತು. ಬ್ರಿಟಿಶರು ಈ ತ್ರಿಕೋಣದಿಂದ ಹಿಂದೆ ಸರಿದು ಹೋದ ಕೂಡಲೆ ಹಿಂದೀ ರಾಷ್ಟ್ರೀಯ ಸರಕಾರದಲ್ಲಿ ಸೇರಲು ಅಧಿಕಾಧಿಕ ಸಂಖ್ಯೆಯಲ್ಲಿ ಮುಸ್ಲಿಮರು ಮುಂದೆ ಬರುವರು.

ಬಹುಸಂಖ್ಯಾಕರು ಅಲ್ಪ ಸಂಖ್ಯಾಕರ ಮೇಲೆ ಸವಾರಿ ಮಾಡಲು ಪ್ರಯತ್ನಿಸಿದರೆ ಹಿಂದುಸ್ತಾನದಲ್ಲಿ ಆಂತರಿಕ ಶಾಂತಿ ಅಸಾಧ್ಯವಾಗುವದು. ಅದೇ ಪ್ರಕಾರ ಅಲ್ಪಸಂಖ್ಯಾಕ ಪಕ್ಷವೊಂದು ವಿದೇಶೀ ಆಕ್ರಮಣಶಕ್ತಿಯೊಂದರ ಸಹಾಯದಿಂದ ಬಹುಸಂಖ್ಯಾಕರನ್ನು ಗದರಿಸ ಹೊರಟರೂ ಶಾಂತಿ ಸಾಧ್ಯವಿಲ್ಲ.

ಹಿಂದುಸ್ತಾನದ ಐಕ್ಯ, ಸ್ವಾತಂತ್ರ್ಯಗಳ ಬಗ್ಗೆ ಬ್ರಿಟಿಶರು ಬರಹ ಮೂಲಕ ವಾಗ್ಬದ್ಧರಾಗಿದ್ದಾರೆ. ಹಿಂದೀ ಸರಕಾರವಿಲ್ಲದೆ ಹಿಂದೀ ಸ್ವಾತಂತ್ರ್ಯ ಕೈಗೂಡುವ ಬಗೆ ಹೇಗೆ? ಒಂದು ಅಲ್ಪಸಂಖ್ಯಾಕ ಪಕ್ಷದ ಸಮ್ಮತಿಗೊಳಪಟ್ಟು ರಚಿಸಲ್ಪಡುವ ಮತ್ತು ಅದರ ಸಮ್ಮತಿಗೊಳಪಟ್ಟು ಕೆಲಸ ಸಾಗಿಸದೇಕಾದ ಯಾವದೇ ಸರಕಾರದಲ್ಲಿ ಸೇರಲು ಕಾಂಗ್ರೆಸ್ಸು ಒಪ್ಪುವದಿಲ್ಲ. ಆದುದರಿಂದ ಹಿಂದೀ ರಾಷ್ಟ್ರೀಯ ಸರಕಾರವನ್ನು ಅಸ್ತಿತ್ವಕ್ಕೆ ತರುವ ಒಂದೇ ಉಪಾಯವೆಂದರೆ ಕಾಂಗ್ರೆಸ್ಸಿಗೆ ಆದೇಶವೀಯುವದು. ಕಾಂಗ್ರೆಸ್ಸು ಹಿಂದುಸ್ತಾನವನ್ನು ಆಳಬಲ್ಲದೋ ಇಲ್ಲವೋ ಎಂದು ಇಂಗ್ಲಂಡೂ ಜಗತ್ತೂ ಆಗ ನೋಡಬಹುದು.

ರಾಷ್ಟ್ರೀಯ ಸರಕಾರವೊಂದು ಉಂಟಾದೊಡನೆ ಬ ಮತ್ತು ಕ ಗುಂಪಿನ ತೊಡಕುಗಳು ಮಾಯವಾಗುವವು. ಕೇಂದ್ರದಲ್ಲಿ ಸಂಮಿಶ್ರ ಸರಕಾರವಾದರೆ ಘಟನೆಯನ್ನು ಸಿದ್ಧಗೊಳಿಸುವ ಕೆಲಸ ಸುಗಮವಾಗುವದು. ಅದರ ಕೇವಲ ಅಸ್ತಿತ್ವದಿಂದಲೇ ಈಗ ಅಪರಿಹಾರ್ಯವೆಂದು ತೋರುವ ಅನೇಕ ಘಟನಾತ್ಮಕ ಸಮಸ್ಯೆಗಳು ಬಗೆಹರಿಯುವವು.

ಬ್ರಿಟಿಶ ಸೂಚನೆಗಳ ಫಲವಾಗಿ, ಬ್ರಿಟಿಶ ಸಾಮ್ರಾಜ್ಯಾಧಿಕಾರಿಗಳೊಡನೆ ಹಿಂದುಸ್ತಾನ ಪರೀಕ್ಷೆಗೆ ನಿಂತಿದೆ. ಅವರು ಹಿಂದುಸ್ತಾನದಿಂದ ಹೊರಬಿದ್ದು ಹೋಗುವರೆ ? ನಡುಗಾಲ ಸರಕಾರದ ಬಗ್ಗೆ ಲಾರ್ಡ ವೇವೆಲ್ಲರು ವಹಿಸುವ ನೀತಿಯೇ ಇದಕ್ಕೆ ಉತ್ತರ ಕೊಡುವದು. ಆಗ ನಿಜವಾದ ಸ್ಥಿತಿಯ ಅರಿವು ನಮಗಾಗುವದು.

ಕರ್ನಾಟಕದ ಜವಳಿ ವ್ಯವಸಾಯ

ಅಭಿವೃದ್ಧಿ ಪಡೆಸುವದೆಂತು ?

ಲೇ:— ಎಸ್. ವಿ. ಪೂಜಾರ ಗೋಕಾಕ ಮಿಲ್ಸ

ಕರ್ನಾಟಕ ಹತ್ತಿ ಬೆಳೆವ ಕ್ಷೇತ್ರವು ಪ್ರತಿವರ್ಷಕ್ಕೂ ಕಡಿಮೆಯಾಗಿ ಅದರ ಉಚ್ಚತರಗತಿಯು ಏರಹತ್ತಿದೆ. ಸಣ್ಣ ಎಳೆಯ ಹತ್ತಿಯನ್ನು ಬಿತ್ತಲಿಕ್ಕೆ ಸರಕಾರದಿಂದ ಅಪ್ಪಣೆ ದೊರೆಯುವದಿಲ್ಲ. ಜಯವಂತ ಹತ್ತಿಯನ್ನೇ ಬಿತ್ತಬೇಕೆಂದು ಅದರಂತೆ ಕಾಳುಗಳನ್ನು ರೈತರಿಗೆ ಹಂಚುವ ಯೋಜನೆಯನ್ನು ಮಾಡಿದ್ದಾರೆ. ಇದು ಸ್ತುತ್ಯ.

ತಂಬಾಕದ ಬಿರುಗಾಳಿ

ಇಂತಿಷ್ಟೇ ಎಕರೆ ಆಹಾರ ಧಾನ್ಯಗಳನ್ನು ಮತ್ತು ಹತ್ತಿ ಅಥವಾ ಇತರ ಪೀಕುಗಳನ್ನು ಬೆಳೆಯಬೇಕೆಂದು ಸರಕಾರದ ಯೋಜನೆಯಿದೆ. ಅದರ ಈ ಯೋಜನೆಯಂತೆ, ನಡೆದರೆ ಹತ್ತಿ ಬೆಳೆಯು ಕೆಲವೇ ವರ್ಷಗಳಲ್ಲಿ ಅಧೋಗತಿಗೆ ಹೋಗಬಹುದು. ಯಾಕಂದರೆ ಅರಳೆಯ ಕನಿಷ್ಟ ಹಾಗೂ ಉಚ್ಚ ಬೆಲೆಯನ್ನು ನಿರ್ದಿಷ್ಟಗೊಳಿಸುವದು ಸರಕಾರವನ್ನೇ ಅವಲಂಬಿಸಿವೆ. ಇದರಿಂದ ಹತ್ತಿ ಬೆಳೆಯುವ ರೈತನಿಗೆ ವಿಶೇಷ ಲಾಭವಾಗಲಾರದು. ಕರ್ನಾಟಕದಲ್ಲಿ ವಿಜಾಪೂರ, ಬಳ್ಳಾರಿ, ರಾಯಚೂರ ಭಾಗಗಳನ್ನು ಬಿಟ್ಟರೆ ಸಣ್ಣ ಎಳೆಯ ಹತ್ತಿಯ ಕ್ಷೇತ್ರವು ಕಡಿಮೆ. ಇಂಥ ಕ್ಷೇತ್ರದಲ್ಲಿ ಆಹಾರ ಧಾನ್ಯದ ಬಿತ್ತಿಗೆಯಾದರೆ ಜನರಿಗೆ ಈಗಿನ ಕೊರತೆಯ ಕಾಲದಲ್ಲಿ ಬಹಳ ಸಹಾಯವಾಗುವದರಲ್ಲಿ ಸಂಶಯವಿಲ್ಲ.

ಉಳಿದ ಉತ್ತಮ ತರಗತಿಯ ಬೆಳೆಯ ಕ್ಷೇತ್ರದಲ್ಲಿ, ಇಂತಿಷ್ಟೇ ಕ್ಷೇತ್ರದಲ್ಲಿ ಹತ್ತಿಯನ್ನು ಬಿತ್ತಬೇಕೆಂಬ ಕಟ್ಟಳೆ ಇದ್ದ ಕಾರಣ ಮೊದಲಿನ ೧/೪ ಕ್ಷೇತ್ರದಲ್ಲಿ ಬಿತ್ತುವರು. ಆದರೆ ಆ ಕ್ಷೇತ್ರದಲ್ಲಿ ಹತ್ತಿಯನ್ನೇ ಬಿತ್ತಬೇಕೆಂಬ ಒತ್ತಾಯವಿಲ್ಲ ಆದ್ದರಿಂದ ಇಂಥ ಉತ್ತಮ ಕ್ಷೇತ್ರದಲ್ಲಿ ಹತ್ತಿ ಬಿತ್ತದೆ ತಂಬಾಕವನ್ನು ಬಿತ್ತಲಿಕ್ಕೆ ಪ್ರಾರಂಭವಾಗಿದೆ. ಹತ್ತಿಯನ್ನು ಬಿತ್ತುವ ರೈತನಿಗೆ ಅನೇಕ ಅಡಚಣಿಗಳುಂಟಾಗುವದರಿಂದ ತಂಬಾಕ ಬಿತ್ತಿ ಕೈತುಂಬ ಹಣ ಪಡೆಯುವದು ಅವರಿಗೆ ಹಗುರಾಗುವದು. ಒಂದು ಎಕರೆ ಜಯವಂತಿ ಹತ್ತಿಯನ್ನು ಬಿತ್ತಿದರೆ ೧೦೦ ರೂ. ಬರಬಹುದು. ಆದರೆ ಅದೇ ಒಂದು ಎಕರೆ ತಂಬಾಕ ಬಿತ್ತಿ ೩೦೦—೪೦೦ ರೂ. ಗಳಿಸಿದ ಉದಾಹರಣೆ ಅನೇಕ ಇವೆ. ಆದ್ದರಿಂದ ಕರ್ನಾಟಕದಲ್ಲಿ ಉತ್ತಮ ಹತ್ತಿ ಬೆಳೆಯುವ ಕ್ಷೇತ್ರದಲ್ಲಿ ತಂಬಾಕ ವ್ಯಾಪಿಸುವದೆಂಬ ಭೀತಿಯುಂಟಾಗಿದೆ.

ಇನ್ನು ನೀರಾವರಿಯಿಂದ ಹತ್ತಿ ಬೆಳೆಯುವ ಕ್ಷೇತ್ರವೆಂದರೆ ಗೋಕಾಕ ಭಾಗವೊಂದೇ. ಇಂಥ ಭಾಗದಲ್ಲಿ ಬೆಲ್ಲ ಕಾಳುಗಳಿಂದ ವಿಶೇಷ ಲಾಭವಾಗುವದರಿಂದ, ಹತ್ತಿಯನ್ನು ಬಿತ್ತುವ ಹವ್ಯಾಸಕ್ಕೇ ಹೋಗಲೊಲ್ಲರು. ಕೆಂಬೋಡಿಯಾ, ಅಮೇರಿಕನ್ ಕಾಳುಗಳನ್ನು ಬೆಳೆಯುವ ಕ್ಷೇತ್ರವನ್ನು ಬೆಳೆಸಿದರೆ ಅದರ ಮಟ್ಟವು ಏರಬಹುದು. ೧೦-೧೫ ಸಾವಿರ ಗಂಟುಗಳು ಬೆಳೆಯುವ ಕ್ಷೇತ್ರದಲ್ಲಿ ೧ ಸಾವಿರ ಗಂಟುಗಳು ದೊರೆಯುವದು ದುರ್ಲಭವಾಗಿದೆ. ಕುಡಚಿ, ಕಾಗವಾಡ, ಸಂಕೇಶ್ವರ ಭಾಗಗಳಲ್ಲಿ ಹತ್ತಿಯನ್ನು ಬಿತ್ತುವದರ ಬದಲು ತಂಬಾಕವನ್ನೇ ಪ್ರಾರಂಭ ಮಾಡಿರುವದರಿಂದ, ಅಲ್ಲಿಯ ಹತ್ತಿಯ ಕಾರಖಾನೆಗಳು ನಿಂತು ಹೋಗಿವೆ.

ಹುಬ್ಬಳ್ಳಿ, ಸವಣೂರ, ಗದಗ ಭಾಗಗಳಲ್ಲಿಯೂ ತಂಬಾಕವು ತಲೆದೋರಹತ್ತಿದೆ. ಲಕ್ಷಗಟ್ಟಲೆ ಗಂಟುಗಳ ಕ್ಷೇತ್ರಗಳು ತೀರ ಕಡಿಮೆಯಾಗಹತ್ತಿವೆ. ತಂಬಾಕವು ಬಾಗಿಲಕೋಟೆ, ಹಾಗೂ ಬೈಲಹೊಂಗಲದ ಭಾಗದಲ್ಲಿ ಅಷ್ಟೊಂದು ಕಾಲು ಚಾಚಿಲ್ಲ. ಆದ್ದರಿಂದ ಅಲ್ಲಿ ಸ್ವಲ್ಪವಾದರೂ ಹತ್ತಿಯ ಬೆಳೆಯು ಗೋಚರಿಸಬಹುದು. ಹತ್ತಿಯ ಧಾರಣೆಯು ಇಷ್ಟಕ್ಕೆ ನಿಂತಲ್ಲಿ ಜನರು ಹತ್ತಿಯನ್ನ ಬೆಳೆಯದೆ ತಂಬಾಕವನ್ನೆ ಬೆಳೆಯುವದರಲ್ಲಿ ಯಾವ ಸಂದೇಹವೂ ಇಲ್ಲ.

ನೀರಿನ ಅಭಾವ

ಕರ್ನಾಟಕದಲ್ಲಿ ನೀರಾವರಿ ಯೋಜನೆಯು ಕನಿಷ್ಟ ಸ್ಥಿತಿಯಲ್ಲಿರುವದರಿಂದ, ನೀರು ಹಾಯಿಸಿ ಬೆಳೆಸುವ, ಕೆಂಬೋಡಿಯಾ, ಜಿರಿಲ್ಲಾ, ಹತ್ತಿಯು ಹೇಳಿಕೊಳ್ಳುವಷ್ಟು ಬೆಳೆಯುವದಿಲ್ಲ. ನೀರಾವರಿ ಇದ್ದ ಪ್ರದೇಶಗಳಲ್ಲಿ ಹತ್ತಿಯ ಬದಲಾಗಿ ಆಹಾರ ಧಾನ್ಯವನ್ನು ಬೆಳೆದರೆ ಬಡತನದಿಂದ ಬಳಲಿ ಉಪವಾಸ ಸಾಯುವ ಹಿಂದುಸ್ಥಾನದ ಜನರಿಗೆ ಒಳ್ಳೆ ಸಹಾಯವಾಗುವದು. ಆದರೆ ಅದರ ಬದಲಾಗಿ ಕಬ್ಬು ಇಲ್ಲವೆ ತಂಬಾಕ ಬಿತ್ತಿದರೆ ಹತ್ತಿಯ ಬೆಳೆಗೆ ದೊಡ್ಡ ಆಘಾತವಾಗುವದಲ್ಲದೆ, ದೇಶದ ಅನ್ನ ಪರಿಸ್ಥಿತಿಗೂ ಹಾನಿಯಾಗುವದು.

ಕರ್ನಾಟಕಸ್ಥರ ಉದಾಸೀನತೆ

ಪುರಾತನ ಕಾಲದಿಂದಲೂ ಹತ್ತಿಯು ಸಾಕಷ್ಟಾಗಿ ಕರ್ನಾಟಕದಲ್ಲಿ ಬೆಳೆಯುತ್ತಿರುವದು ಬಳ್ಳಾರಿ, ಆದವಾನಿ, ಹುಬ್ಬಳ್ಳಿ, ಗದಗ, ಬಾಗಿಲಕೋಟೆ, ದಾವಣಗೆರೆ, ಕೊಟ್ಟೂರ, ಮುಂತಾದ ಪಟ್ಟಣಗಳು ಹತ್ತಿ ವ್ಯಾಪಾರದ ಕೇಂದ್ರಗಳಾಗಿವೆ. ಮೊದಲಿನ ಹುಬ್ಬಳ್ಳಿಯ ವ್ಯಾಪಾರಸ್ಥರು ಕೆಲವೇ ವರ್ಷ ವ್ಯಾಪಾರದ ಮೇಲೆ ತಮ್ಮ ಸ್ವಾಮಿತ್ವವನ್ನು ಇಟ್ಟುಕೊಂಡಿದ್ದರು. ಆದರೆ, ಅವರ ಉದಾಸೀನತೆ, ಹಾಗೂ ಅಧಿಕಾರ ಲಾಲಸೆಗಾಗಿ ವ್ಯಾಪಾರವು ಅವರ ಕೈಬಿಟ್ಟು ಗುಜರಾತದವರ ಕೈಸೇರಿತು. ಹುಬ್ಬಳ್ಳಿಯಲ್ಲಿ ನಗರ ಸಭೆಯ ಅಧಿಕಾರಕ್ಕಾಗಿ ತೋರಿಸಿದಷ್ಟು ಹುರುಪನ್ನು ಅಲ್ಲಿಯ ವ್ಯಾಪಾರಸ್ಥರು ಉದ್ಯೋಗಾಭಿವೃದ್ಧಿಗಾಗಿ ತೋರಿಸಿದ್ದರೆ, ಹುಬ್ಬಳ್ಳಿಯಲ್ಲಿ ನಮ್ಮ ಜನರವೇ ೧೦—೨೦ ಗಿರಣಿಗಳು ತಲೆದೋರುವದರಲ್ಲಿ ಸಂದೇಹವಿರಲಿಲ್ಲ. ಇದ್ದೊಂದು ಗಿರಣಿ ಪರಪ್ರಾಂತದವರದೇ. ಇನ್ನಾದರೂ ವ್ಯಾಪಾರಿ ಬಂಧುಗಳು ಬರೇ ಬ್ರಾಹ್ಮಣ ಬ್ರಾಹ್ಮಣೇತರ ಚಳವಳಿಯನ್ನದೆ, ಉದ್ಯೋಗ, ವ್ಯಾಪಾರದಲ್ಲಿ ಬಂಡವಲ ತೊಡಗಿಸಿ, ನಮ್ಮ ಜನರನ್ನು ಉದ್ಯೋಗಕ್ಕೆ ಹಚ್ಚಿದರೆ ಹುಬ್ಬಳ್ಳಿಯಲ್ಲಿ ಗಿರಣಿಗಳನ್ನು ಸ್ಥಾಪಿಸಿದರೆ ನಮ್ಮ ಪ್ರಾಂತಕ್ಕೆ ಸುಖವಾಗುವದು ಹಾಗೂ ಭಾವೀ ಕರ್ನಾಟಕ ಪ್ರಾಂತವು ಬಲವಾಗುವದು.

ಗದುಗಿನಲ್ಲಿಯಾದರೂ ಇದೇ ಹಾಡು. ಯುದ್ಧಪೂರ್ವದಲ್ಲಿ ನಾರಾಯಣ ಮಿಲ್ಸ ಎಷ್ಟೋವರ್ಷ ಬಂದು ಬಿದ್ದಿತ್ತು. ಅದನ್ನು ನಡಿಸಿಕೊಂಡು ಹೋಗುವ ಧೈರ್ಯ ಗದುಗಿನ ಶ್ರೀಮಂತ ಜನರಿಗಾಗಲಿಲ್ಲ. ಗದುಗಿನಲ್ಲಿ ಶ್ರೀಮಂತರೇನೂ ಕಡಿವೆಯಿಲ್ಲ ಪ್ರತಿಬಬ್ಬ ಶ್ರೀಮಂತರು ಒಂದು ಗಿರಣಿಯನ್ನು ನಡಿಸುವ ಯೋಗ್ಯತೆಯವರಿದ್ದಾರೆ. ಆದರೆ ಕರ್ನಾಟಕದಲ್ಲಿ ಧೈರ್ಯದಿಂದ ಮುಂದೆ ಬಂದು ಬಂಡವಲ ಹಾಕಿ ಬಡವರಿಗೆ ಉದ್ಯೋಗ ಕಲ್ಪಿಸಿ ಕೊಡುವ ವಿಚಾರವೇ ಕಡಮೆ.

ಬಾಗಿಲಕೋಟೆಯಲ್ಲಿ ಒಂದು ಗಿರಣಿಯನ್ನು ಸ್ಥಾಪಿಸಬೇಕೆಂಬ ಪೂರ್ವತಯಾರಿ ನಡೆದ ಕಡೆಗೆ ಅದು ಹಾಗೇ ಉಳಿಯಿತು. ಇದರಂತೆ ಬಳ್ಳಾರಿ ಆದವಾನಿ ಪರಿಸ್ಥಿತಿ.

ಬಹುಸಂಖ್ಯಾಕ ಲಿಂಗಾಯತ ಪ್ರಾಂತದಲ್ಲಿ ಉದ್ಯೋಗಕ್ಕೆ ಅವರು ಎಷ್ಟು ಮಹತ್ವ ಸ್ಥಾನ ಕೊಡಬೇಕೋ ಅಷ್ಟು ಕೊಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಕರ್ನಾಟಕದಿಂದ ಮುಂಬಯಿಯಲ್ಲಿ ವ್ಯಾಪಾರೋತ್ತೇಜಕ ಸಂಸ್ಥೆಗಳಾವೂ ಬಯಲಿಗೆ ಬರಲಿಲ್ಲ. ಆದರಿಂದ ಮುಂಬಯಿಯಲ್ಲಿ ಕರ್ನಾಟಕ ವ್ಯಾಪಾರವು ಪರಪ್ರಾಂತದವರನ್ನೇ ಅವಲಂಬಿಸಿತು. ಆದ್ದರಿಂದ ಅವರು ನಮ್ಮ ಪ್ರಾಂತದ ಉಳಿದ ಮುಖ್ಯ ಪಟ್ಟಣಗಳಲ್ಲಿ ತಳವೂರಹತ್ತಿದರು.

ಉದ್ಯೋಗ ಶಿಕ್ಷಣ ಸಂಸ್ಥೆಗಳು ಈಗಲೂ ಇಲ್ಲ. ಬರೇ ಆರ್ಟ್ಸ ಕಾಲೇಜನ್ನು ಸ್ಥಾಪಿಸುವ ಹವ್ಯಾಸಕ್ಕೆ ಹೋಗದೆ, ಬಾಗಿಲಕೋಟೆ, ವಿಜಾಪುರದವರು, ಶೇತಕಿ ಹಾಗು ಎಂಜನಿಯರಿಂಗ ಸಂಸ್ಥೆಗಳನ್ನು ಸ್ಥಾಪಿಸಿದ್ದರೆ ಚನ್ನಾಗುತ್ತಿತ್ತು.

ಸರಕಾರಿ ಅಧಿಕಾರಕ್ಕಾಗಿ ಬಡದಾಡದೆ ಉದ್ಯೋಗವನ್ನು ಬೆಳೆಯಿಸುವ ಯೋಜನೆಯನ್ನು ಕೈಕೊಳ್ಳುವದರಿಂದ ಪ್ರಾಂತದಲ್ಲಿ ಬಡತನ ಹಿಂಗುವದಲ್ಲದೆ ಜನರಿಗೆ ಹೊಟ್ಟೆ ತುಂಬ ಆಹಾರ ಬಟ್ಟೆ ದೊರೆಯುವವು.

ನೇಕಾರರ ಗೋಳು

ಇಷ್ಟು ಉತ್ತಮ ತರಗತಿಯ ಹತ್ತಿ ಬೆಳೆದರೂ ನೇಕಾರರಿಗೆ ನೂಲು ದೊರೆಯದೆ ನಿರುದ್ಯೋಗಿಗಳಾಗಿರುವದಕ್ಕೆ ಕರ್ನಾಟಕದ ಶ್ರೀಮಂತರೇ ಹೊಣೆಗಾರರಲ್ಲದೆ ಮತ್ತಾರು ? ಲಕ್ಷಗಟ್ಟಲೆ ಹಣವನ್ನು ನೆಲಮನೆಯಲ್ಲಿ ಕಾಣಿಸಿ ಒಂದಾದರೂ ಗಿರಣಿಯನ್ನು ಸ್ಥಾಪಿಸದ್ದರಿಂದ ಅಲ್ಲಲ್ಲಿಯ ನೇಕಾರರಿಗೆ ನೂಲು ಸಿಗದಾಗಿದೆ. ಜಮಖಂಡಿ ರಾಜೇಸಾಹೇಬರು ಸಕ್ಕರಿ ಕಾರಖಾನೆಯನ್ನು ಸ್ಥಾಪಿಸುವ ಹವ್ಯಾಸಕ್ಕೆ ಹೋಗುವದರ ಬದಲು ಒಂದು ನೂಲುವ ನೇಯುವ ಗಿರಣಿಯನ್ನು ಪ್ರಾರಂಭ ಮಾಡಿದರೆ ಬಡಜನರಿಗೆ ತುಂಬಾ ಕಲ್ಯಾಣವಾಗುವದು. ಇದರಂತೆ ಸವಣೂರಲ್ಲಾದರೂ ಇದರ ಅಭಾವವಿದೆ. ಸಂಸ್ಥಾನದ ಹದ್ದಿನಲ್ಲಿ ಖಾಸಗಿ ಶ್ರೀಮಂತರು ಗಿರಣಿಗಳನ್ನು ತೆರೆಯಲಿಕ್ಕೆ ಅಂಜುತ್ತಾರೆ. ಆದ್ದರಿಂದ ಅಲ್ಲಿಯ ಅಧಿಪತಿಗಳೇ ಮುಂದೆ ಬಂದು ಶೇರುಗಳನ್ನು ತೆಗೆದು ಉದ್ಯೋಗಗಳನ್ನು ತೆರೆದರೆ ಒಳ್ಳೇದು.

ಸಂಸ್ಥೆಗಳ ಭದ್ರತೆ

ಕರ್ನಾಟಕದಲ್ಲಿ ಸಂಸ್ಥೆಗಳ ಚಾಲಕರು ಜನರ ವಿಶ್ವಾಸಕ್ಕೆ ಪಾತ್ರರಾಗಿರುವದು ಕಡಿಮೆ. ಸಂಸ್ಥೆಗಳ ಸ್ಥಾಪನೆಯ ಮೊದಲೇ ಹೆಚ್ಚಿಗೆ ಖರ್ಚು ತೋರಿಸಿ, ಸಂಸ್ಥೆಗಳನ್ನು ಹೀಚಿನಲ್ಲಿಯೇ ಚಿವುಟಿ ಬಿಡುವ ಅನೇಕ ಪ್ರಸಂಗಗಳಾಗಿವೆ. ಇದಕ್ಕೆ ವ್ಯಾಪಾರೀ ಶಿಕ್ಷಣದ ಅಭಾವವೇ ಕಾರಣ. ಬಿ. ಕಾಮ ಬಿ ಇ. ಜನರು ಇದ್ದಲ್ಲಿ ಅನೇಕ ಜನರಿಗೆ ಅದರ ಕಲ್ಪನೆಗಳನ್ನು ಮಾಡಿಕೊಡುವರು. ಆದರೆ ಅಂಥ ವಿದ್ಯೆ ಸಿಗುವದು ಕರ್ನಾಟಕಕ್ಕೊಂದು ವಿಶ್ವಪ್ರಯತ್ನವಾಗಿದೆ. ಇಂಥ ಶಿಕ್ಷಣ ಸಂಸ್ಥೆಗಳನ್ನು ತೆರೆಯಲಿಕ್ಕೆ ಸರಕಾರವನ್ನೇ ಒತ್ತಾಯ ಪಡಿಸಬೇಕು.

ಯುದ್ಧೋತ್ತರ ಯೋಜನೆ

ಯುದ್ಧೋತ್ತರ ಯೋಜನೆಗಳಲ್ಲಿ ದಕ್ಷಿಣ ಹಿಂದುಸ್ಥಾನಕ್ಕೆ ಕೆಲವು ರಾಟೆಗಳನ್ನು (spindles) ಹಂಚುವ ಯೋಜನೆಯಾಗಿದೆ. ಆದ್ದರಿಂದ, ದೊಡ್ಡ ಜಿನಿಂಗ ಹಾಗೂ ಪ್ರೆಸಿಂಗ ಮಾಲಕರು ಮುಂದೆ ಬಂದು ಸಣ್ಣ ಪ್ರಮಾಣದಲ್ಲಿಯಾದರೂ ನೂಲುವ ಗಿರಣಿಗಳನ್ನು ಆರಂಭಿಸಿದರೆ ಒಳಿತು. ಸಾಂಗಲಿಯ ಗಜಾನನ ಮಿಲ್ಸ, ಹಾಗೂ ಮಿರಜಿಯ ಮಿಲ್ಸ ಸಣ್ಣ ಪ್ರಮಾಣದ ಮೇಲೆ ಪ್ರಾರಂಭವಾಗಿ ತುಂಬಾ ಲಾಭ ಮಾಡಿಕೊಂಡರು. ಸವಣೂರಲ್ಲಿ ಮುಹಬೂಬ ಕಾರಖಾನೆಗೆ ಗಿರಣಿಯಾಗಲಿಕ್ಕೆ ತುಂಬಾ ಅನುಕೂಲತೆಗಳಿವೆ. ಗದಗ, ಹುಬ್ಬಳ್ಳಿಗಳಲ್ಲಿಯೂ ದೊಡ್ಡ ಕಾರಖಾನೆಗಳನ್ನು ರೂಪಾಂತರಿಸಲಿಕ್ಕೆ ಬರುತ್ತದೆ. ಈಗಿನ ಹತ್ತಿಯ ಅಭಾವದ ಯುಗದಲ್ಲಿ, ೧೫ ದಿವಸದ ಕೆಲಸ ಕೂಡ ಆ ಕಾರಖಾನೆಗಳಿಗೆ ದೊರೆಯುವದಿಲ್ಲ. ಆದ್ದರಿಂದ ಅವುಗಳ ಮಾಲಕರು ಮುಂದೆ ಬಂದು ಪ್ರಯತ್ನ ಮಾಡಿದರೆ ಅಲ್ಲಲ್ಲಿ ಜವಳಿ ಗಿರಣಿಗಳು ತಲೆದೋರಬಹುದು, ಮತ್ತು ಜವಳಿ ವ್ಯವಸಾಯವು ಈಗಿನ ದಿವಸಗಳಲ್ಲಿ ಸ್ವಲ್ಪವಾದರೂ ಹಾನಿಕರವಲ್ಲ.

ಆದ್ದರಿಂದ, ಗದಗ, ಹುಬ್ಬಳ್ಳಿ, ಬಾಗಲಕೋಟೆ, ಬಳ್ಳಾರಿ, ಆದವಾನಿ, ಬೈಲಹೊಂಗಲ, ವ್ಯಾಪಾರಸ್ಥರು ಪ್ರಯತ್ನಮಾಡಿ ಸರಕಾರದವರಿಂದ ಯುದ್ಧೋತ್ತರ ಯೋಜನೆಯಲ್ಲಿಯ ಜವಳಿ ವ್ಯವಸಾಯದ ಅನುಕೂಲತೆಗಳನ್ನು ಪಡೆದು ಮೇಲೆ ಕಾಣಿಸಿದ ಊರುಗಳಲ್ಲಿ ಹೊಸ ಜವಳಿ ಗಿರಣಿಗಳನ್ನು ತೆರೆಯುವ ಪ್ರಯತ್ನವನ್ನು ಮಾಡುವದು ಕರ್ನಾಟಕಕ್ಕೆ ಲಾಭದಾಯಕವೂ ಮಾನ್ಯವೂ ಆಗುವದು.

ಈ ವ್ಯವಸಾಯದಲ್ಲಿ ತರಬೇತು ಹೊಂದಲಿಕ್ಕೆ ತಮ್ಮ ಜಾಣ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಜನರಲ್ಲಿ ಅವುಗಳ ಬಗ್ಗೆ ಕಲ್ಪನೆಯಾಗುವಂತೆ ಮಾಡಬೇಕು. “ಸಾಕು ನಮ್ಮ ಹುಡುಗ ಪತ್ರ ಬರಿಯುವ ಮಟ್ಟಿಗೆ ಇಂಗ್ರೇಜಿ ಕಲಿತರೆ” ಎಂಬ ರೂಢಿಯನ್ನು ಹೊಡೆದುಹಾಕಬೇಕು. ಮುಂದೆ ಯಾರಾದರೂ ಜವಳಿ ವ್ಯವಸಾಯವು ಪರಪ್ರಾಂತದವರ ಕೈಸೇರದಂತೆ ಎಚ್ಚರದಿಂದಿರಬೇಕು.

ಜಗತ್ತು ಮುಂದೋಡುತ್ತಿರುವಾಗ ಕರ್ನಾಟಕವು ಹಿಂದೋಡುತ್ತಿದೆ. ರಾಜಕಾರಣವನ್ನು, [illegible]ಗಳನ್ನು ವ್ಯವಹಾರದಲ್ಲಿ ತೊಡಗಿಸುವ ಕ್ರಮವು ದೇಶಕ್ಕೆ ಅಘಾತವೇ.

ವ್ಯವಹಾರ ಚತುರ ಪಂಥವು ,ಸರಕಾರಿ ಅಧಿಕಾರದ ಮೋಹಕ್ಕೆ ಬೀಳದೆ, ವ್ಯವಹಾರವನ್ನು ಅಂಕಿತದಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡಬೇಕು. ಅದರಂತೆ ಶ್ರೀಮಂತ ಜನರು ಮುಂದೆ ಬಂದು, ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ಜನರಲ್ಲಿ ಹೊಸ ಹೊಸ ವಿಚಾರಗಳ ಕಲ್ಪನೆ ಮಾಡಿಕೊಡಬೇಕು. ನಮ್ಮೊಳಗಿನ ಜಗಳವು ಪರರಿಗೆ ಅಪಾಯವಾಗದಂತೆ ಕರ್ನಾಟಕದ ಶ್ರೀಮಂತರು ಅರಿತು ತನು ಮನ ಧನದಿಂದ ಕರ್ನಾಟಕದ ಅಭಿವೃದ್ಧಿಗೆ ಸಹಾಯ ಮಾಡಬೇಕು.

ಉದಯಗೀತ

ಕೆರೆಯು ಸರಿಸಿ ಮುಗಿಲ ತೋರು ಸಗ್ಗಸಿರಿಯು [illegible]
ಕೆರೆದು ನೆಲವೆ ಪ್ರಕೃತಿಗೂಢ ಧರ್ಮಸೂತ್ರ [illegible]
ಬರೆಯಲಿರುವ ನಾಡೆ ನಾಟ್ಯ ದಿವ್ಯರಂಗ [illegible]
ಪುಣ್ಯ ನನ್ನ ನಾಡಿನ
ಮಾನ್ಯ ನನ್ನ ಜನಗಣ
ಗಣ್ಯ ನನ್ನ ಕುಲಧನ
ಸಿರಿಯು ಶಾಸನೇತಿಹಾಸ ಬೆಳಗಿ ಮೇಲುಗೈಯುನೆತ್ತುವೆ,
ಅಕ್ಕತಂಗಿ, ಅಣ್ಣತಮ್ಮ, ತಾಯಿತಂದೆ ಹಿರಿಯರೇ
ಪಕ್ಕದೊಳಗೆ ನೆಲಸಿ ನಿಂತ ಬಂಟನೆಂಟ ಮಾನ್ಯರೇ
ಅಕ್ಕರತೆಯ ಗೆಳೆಯ—ಗೆಳತಿಯೊಂದುಗೂಡಿ ನೋಡಿರೇ
ಮಾನಧನದ ಕಾರ್ಯವ
ಧವಳಕೀರ್ತಿ ಪಟಹವ
ಪಡೆದು ನಾಡ ನಗಿಸುವ
ಸಿದ್ಧಿ ರಿದ್ಧಿ ಯುಕ್ತಿ ಶಕ್ತಿ ರುದ್ರ ಭದ್ರ ವೈಯುಗೂಡಿರೇ
ಬಂದ ವೈರಿ ಕೂರಕ್ಕೆದು ಝಳಪಿ ನೆರಳ ತುಳಿದೆವು
ಕೊಂದುಗೆಲಿದು ಪಡೆದು ಯಶದ ಸುಗ್ಗಿ ತೊಟ್ಟು ತೆರಳೆವು
ಸುಂದರಾಗಿ ಜಯದ ಮಾಲೆ ನನಗೆ ತೊಡಿಸೆ ಕಾಂತನು
ಪ್ರಳಯ ಶಕ್ತಿ ಬೆನ್ನ ಹಿಂತೆ
ಇಳೆಯ ಸ್ಥೈರ್ಯ ತೋಳ ಮುಂತೆ
ಅಳಿವು ಉಳಿವು ಎಲ್ಲವೊಂದೆ
ನನ್ನ ನಾಡ ವಾಲ್ಮೀಕಿಯು ಜಯದ ಗೀತ ಬರೆವನು
ತಾರೆ ಚಂದ್ರ ಸೂರ್ಯ ಮಿನುಗಿ ಕಣ್ಣಮುಚ್ಚಿ ಬೇಡಿರಿ
ನೀರು ಗಾಳಿ ಹವೆಯು ನೆಲವೆ ಮುಗಿಲೆ ಓಟ ತಡೆಯಿರಿ
ಶೂರ, ನಿಲ್ಲು ನನ್ನ ಹೆಜ್ಜೆ ತುಳಿದು ಹಿಂದೆ ಬನ್ನಿರಿ
ನೋಡು, ಮಿಂಚು ಸೆಳೆಯಿತು
ಹಾಡು, ಸಿಡಿಲು ಹೊಡೆಯಿತು !
ಕೂಡು, ಕಡಲು ಮಿಕ್ಕಿತು !
ನಾವೆ ನುಡಿಯು ನಡೆಯು ಕಳೆಯ ಬೆಳೆಯ ದರ್ಶ್ಯರು

—ಶ್ರೀ ಕೃಷ್ಣ ಪಾಟೀಲ
ಕಲಾಮಂಟಪ ಬೆಳಗಾವಿ

ಸಂಪಾದಕೀಯ ಟೀಕೆ-ಟಿಪ್ಪಣೆಗಳು

ಅಂಚೆ ಪೇದೆಗಳ ಸಂಪು

ಕಳೆದ ೧೧ ನೇ ತಾರೀಖಿನಿಂದ ಮುಂಬಯಿ ದಿಲ್ಲಿ ಮೊದಲಾದ ಸ್ಥಳಗಳಲ್ಲಿ ಪ್ರಾರಂಭವಾದ ಅಂಚೆ ಪೇದೆಗಳ ಸಂಪು ದಿನ ದಿನಕ್ಕೆ ಬಲೆಯುಹತ್ತಿದೆ. ಅಂಚೆ ಪೇದೆಗಳಷ್ಟೇ ಅಲ್ಲದೆ ತಂತಿ ಖಾತೆಯ ಕೆಲಸಗಾರರೂ ಕಾರಕೂನರೂ ಈ ಸಂಪಿನಲ್ಲಿ ಭಾಗವಹಿಸಿರುವರು, ವಹಿಸುವ ಮೊದಲರಿಕೆ ಕೊಟ್ಟಿರುವರು. ಬೇಗನೆ ಈ ಸಂಪು ಬಗೆಹರಿಯದಿದ್ದರೆ ಇಡೀ ಹಿಂದುಸ್ತಾನದಲ್ಲಿಯೆ ಇದು ವ್ಯಾಪಿಸುವದೆಂಬಲ್ಲಿ ಸಂದೇಹವಿಲ್ಲ. ಅಂಚೆ ಪೇದೆಗಳಷ್ಟೇ ಅಲ್ಲದೆ ಸರಕಾರದ ಇತರ ಶಾಖೆಗಳಲ್ಲಿಯ ನೋಕರರೂ ಸಂಪು ಹೂಡಬಹುದು. ಅಂಚೆ ಪೇದೆಗಳ ಸಂಪಿನಿಂದ ದೇಶದಲ್ಲಿಯ ವ್ಯವಹಾರವೇ ಕಟ್ಟಾದಂತಾಗಿದೆ. ಪತ್ರ ಮುಂತಾದವುಗಳನ್ನೇನೋ ಹೇಗೊ ಬೇರೆಯವರ ಸಹಾಯದಿಂದ ಕೆಲವೆಡೆ ಮುಟ್ಟಿಸುತಿರುವರು. ಆದರೂ ಎಲ್ಲ ಕಚೇರಿಗಳಲ್ಲಿ ಪತ್ರಗಳು ಇನ್ನೂ ರಾಶಿ ರಾಶಿಯಾಗಿ ಬಿದ್ದಿವೆಂದು ಸುದ್ದಿ ಬಂದಿವೆ ಮನಿಆರ್ಡರು ವಿ. ಪಿ. ರಜಿಸ್ಟರ, ಇನ್ಸುರನ್ಸ ಮೊದಲಾದವುಗಳನ್ನಂತೂ ಅಂಚೇ ಕಚೇರಿಯವರು ಸ್ವೀಕರಿಸುವದನ್ನೇ ನಿಲ್ಲಿಸಿಬಿಟ್ಟದ್ದರಿಂದ ಜನತೆಗೆ ವಿಶೇಷ ತೊಂದರೆಯಾಗಿದೆ. ಅಂಚೇ ಪೇದೆಗಳ ಹನ್ನೆರಡು ಬೇಡಿಕೆಗಳಲ್ಲಿ ಏಳು ಬೇಡಿಕೆಗಳನ್ನು ಸರಕಾರದವರು ನ್ಯಾಯಮಂಡಳಕ್ಕೊಪ್ಪಿಸಿರುವರು. ಇನ್ನುಳಿದ ಐದು ಬೇಡಿಕೆಗಳನ್ನೂ ನ್ಯಾಯಮಂಡಲಕ್ಕೆ ಒಪ್ಪಿಸಿ ಪೇದೆಗಳನ್ನು ಸಮಾಧಾನ ಪಡಿಸಿದರೆ ಸರಕಾರಕ್ಕಾಗುವ ಹಾನಿಯೇನು? ನ್ಯಾಯಮಂಡಳದವರ ನಿರ್ಣಯದಂತೆ ನಡೆಯಲು ಸರಕಾರ ಮತ್ತು ಅಂಚೆ ಪೇದೆಗಳು ಮಾತ್ರ ಸಿದ್ಧರಿರಬೇಕು. ಒಣ ಪ್ರತಿಷ್ಠೆಗೊಳಗಾಗದೆ ಪರಸ್ಪರ ಸ್ನೇಹಭಾವನೆಯಿಂದ ನಡೆದುಕೊಳ್ಳುವದು ಹಿತಕರ. ಅಂಚೆ ಪೇದೆಗಳ ಸಂಘದವರಾದರೂ ನಾಗರಿಕರಿಗಾಗಿ ತಾವು ಮಾಡತಕ್ಕ ಕರ್ತವ್ಯವನ್ನು ನೆನೆದು ಸಂಪು ಹಿಂತೆಗೆದುಕೊಳ್ಳುವ ಧೋರಣವನ್ನಿಟ್ಟುಕೊಂಡೆ ಸರಕಾರದೊಡನೆ ಮಾತುಕತೆ ನಡೆಸಬೇಕು. ನಿರರ್ಥಕ ಪ್ರಕಟನೆ ಹೊರಡಿಸುವಲ್ಲಿ ವೇಳೆ ಕಳೆಯದೆ ಸರಕಾರದವರು ಸಂಘದ ಧುರೀಣರೊಡನೆ ಮಾತುಕತೆ ಪ್ರಾರಂಭಿಸಿ ಕೂಡಲೆ ಅದು ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕಾಗಿ ಒತ್ತಾಯಪಡಿಸುತ್ತೇವೆ.

ಬೆಲ್ಲದ ಸೀದಾ ಹೆಚ್ಚಿಸಿರಿ

ಬೆಲ್ಲದ ಸೀದಾ ಪ್ರಾರಂಭವಾಗಿ ಒಂದು ತಿಂಗಳಾಗುತ್ತ ಬಂದಿತು. ಈಗ ಗೊತ್ತು ಮಾಡಿದ ಸೀದಾ ಪ್ರಮಾಣವು ಕಡಮೆಯಾಗುವದೆಂದು ಈ ಮೊದಲು ನಾವು ಬರೆದಿರುವೆವು. ಈಗ ಒಂದು ತಿಂಗಳ ಅನುಭವವನ್ನು ನೋಡಿದರೂ ಈ ಮಾತು ಸ್ಪಷ್ಟವಾಗುವದು. ಪರದೇಶಗಳಲ್ಲಿ ಜನತೆಗೆ ಸಿಕ್ಕುತಿರುವ ಬೆಲ್ಲದ ಪ್ರಮಾಣವೆಷ್ಟು, ಹಿಂದುಸ್ತಾನದಲ್ಲಿ ಎಷ್ಟು ಸಿಕ್ಕುತಿತ್ತು ಈಗ ಸೀದಾ ಪ್ರಮಾಣದಿಂದ ಎಷ್ಟು ಕಡಮೆ ಸಿಕ್ಕುತ್ತದೆಂದು ಮುಂತಾದ್ದರ ಬಗ್ಗೆಯೂ ಈ ಮೊದಲು ಬರೆದಿರುವೆವು. ಮಾನವ ಶರೀರಪೋಷಣೆಗೆ ಅತ್ಯವಶ್ಯವಾದ ಬೆಲ್ಲದಂಥ ಪದಾರ್ಥವು ಕಡಮೆ ಪ್ರಮಾಣದಲ್ಲಿ ಸಿಕ್ಕರೆ ಅದೆಷ್ಟು ತೊಂದರೆಯಾಗುವದೆಂಬದನ್ನು ಬರೆಯುವ ಅವಶ್ಯಕತೆಯಿಲ್ಲ. ಆದುದರಿಂದ ಬೆಲ್ಲದ ಸೀದಾ ಪ್ರಮಾಣವನ್ನು ಇಮ್ಮಡಿಸಬೇಕೆಂದು ನಾವು ಆಗ್ರಹಪಡಿಸುತ್ತೇವೆ ಇನ್ನುಮುಂದೆಯಂತೂ ಹಬ್ಬದ ದಿನಗಳು ಬರುವುವಾದ್ದರಿಂದ ಬೆಲ್ಲದ ಅವಶ್ಯಕತೆ ಬಹಳ. ಆದುದರಿಂದ ಪ್ರಾಂತಿಕ ಸರಕಾರದವರು ಕೂಡಲೆ ಇತ್ತ ಗಮನಿಸುವುದವಶ್ಯವಾಗಿದೆ. ಹೋಟೆಲುಗಳಿಗೆ ಕೊಡುತಿರುವ ಬೆಲ್ಲದ ಪ್ರಮಾಣ ಹೆಚ್ಚಾಗಿನೆಂಬ ಎಲ್ಲೆಡೆಯಿಂದ ಕೂಗು ಕೇಳಬರುತ್ತದೆ. ಈ ಮೂರು ವಾರಗಳಲ್ಲಿ ಹೋಟೆಲ್ ಒಡೆಯರ ಸಂಘದ ಅಂಗಡಿಯಲ್ಲಿ ಮಾರಾಟದ ಬೆಲ್ಲದ ಪ್ರಮಾಣವನ್ನು ನೋಡಿದರೆ ಈಗ ಗೊತ್ತುಪಡಿಸಿದಷ್ಟು ಬೆಲ್ಲವನ್ನು ಹೋಟೆಲ್ ಒಡೆಯರು ತೆಗೆದುಕೊಳ್ಳುವದಿಲ್ಲೆಂದು ಕಂಡುಬರುತ್ತದೆ. ಜಹಾದಂಗಡಿ ಸಕ್ಕರೆ ಪರಿಮಿಟ್ಟು ಒಟ್ಟು ೨೫೪೧ ಯೂನಿಟ್ಟುಗಳದಿದ್ದು ಈ ಯುನಿಟ್ಟುಗಳ ಮೇಲೆ ೩೧೭೫ ಪೌಂಡು ಬೆಲ್ಲ ಮಾರಾಟಾಗತಕ್ಕದ್ದು. ಆದರೆ ೧೪ ನೇ ವಾರದಲ್ಲಿ ಸುಮಾರು ೨೨೨೫ ಪೌಂಡು ೧೫ ನೇ ವಾರದಲ್ಲಿ ೨೨೮೨ ಪೌಂಡು ೧೬ ನೇ ವಾರದಲ್ಲಿ ಕೇವಲ ೩೩೦ ಪೌಂಡು ಬೆಲ್ಲ ಮಾರಲ್ಪಟ್ಟಿದೆಂದು ತಿಳಿಯುತ್ತದೆ. ಇದು ನಿಜವಿದ್ದರೆ ಹೋಟೆಲ್ ಒಡೆಯರಿಗೆ ಗೊತ್ತುಪಡಿಸಿದಷ್ಟು ಬೆಲ್ಲ ಬೇಕಾಗುವದಿಲ್ಲನೆಂದು ಕಂಡುಬರುತ್ತದೆ. ಹೋಟೆಲುಗಳಲ್ಲಿ ಮಾಡುವ ಪದಾರ್ಥಗಳನ್ನು ನೋಡಿದರೂ ಬೆಲ್ಲದ ಪದಾರ್ಥಗಳು ಕಡಮೆಯಿರುವವೆಂಬುದು ಗೊತ್ತಾಗುವದು. ಆದುದರಿಂದ ಸಕ್ಕರೆ ಯುನಿಟ್ಟುಗಳ ಮೇಲೆ ಹೋಟೆಲ್ ಒಡೆಯರಿಗೆ ಬೆಲ್ಲ ಕೊಡದೆ ಅವರ ಧಾನ್ಯ ಸೀದಾ ಪ್ರಮಾಣಕ್ಕನುಸಾರವಾಗಿ ಬೆಲ್ಲ ಕೊಡಬೇಕು. ಹೀಗೆ ಅವರಿಗೆ ಕಡಿಮೆ ಮಾಡಿದ ಬೆಲ್ಲದಲ್ಲಿ ನಾಗರಿಕರ ಸೀದಾ ಪ್ರಮಾಣವನ್ನು ಇಮ್ಮಡಿಸಿ ಅವರ ಕೊರತೆಯನ್ನು ಹೋಗಲಾಡಿಸಬೇಕು. ನಿರರ್ಥಕವಾಗಿ ಬೆಲ್ಲದ ಸಂಗ್ರಹವನ್ನು ವಖಾರಗಳಲ್ಲಿ ಹೆಚ್ಚಾಗಿ ಉಳಿಸಿದರೆ ಅದು ಕೆಟ್ಟುಹೋಗುವ ಸಂಭವವುಂಟು. ಆದುದರಿಂದ ಸರಕಾರದವರು ಕೂಡಲೆ ಇತ್ತ ಗಮನಿಸಿ ಜನತೆಯ ಬೆಲ್ಲದ ಸೀದಾ ಪ್ರಮಾಣವನ್ನು ಹೆಚ್ಚಿಸಬೇಕೆಂದು ಆಗ್ರಹ ಪಡಿಸುತ್ತೇವೆ.

ಧರ್ಮ ಕಾರ್ಯಗಳಿಗೆ ಸೀದಾ

ಮದುವೆ, ಮುಂಜಿವೆ, ಅಂತ್ಯವಿಧಿ ಮೊದಲಾದ ಧಾರ್ಮಿಕ ಕಾರ್ಯಗಳಿಗೂ ಮಂದಿರ ಮಸೀದೆ ಮಠ ಚರ್ಚಗಳಲ್ಲಿಯ ಸೇವಕ ಜನರಿಗೂ ಹಬ್ಬ ಹುಣ್ಣಿವೆಗಳಲ್ಲಿಯೂ ಹೆಚ್ಚಿನ ಸೀದಾ ಕೊಡುವದು ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಇದನ್ನರಿತೆ ಮದ್ರಾಸ ಸರಕಾರದವರು ಇವಕ್ಕೆಲ್ಲ ಪ್ರತ್ಯೇಕ ಸೀದಾ ಕೊಡುವ ಏರ್ಪಾಡನ್ನು ಮಾಡಿರುವರು. ಮದ್ರಾಸ ಸರಕಾರದವರು ೧೫-೫-೪೬ ನೇ ದಿನ ಈ ಸಂಬಂಧದಲ್ಲಿ ಪ್ರಕಟನೆಯೊಂದನ್ನು ಹೊರಡಿಸಿ ಹಿಂದೆ ಕೊಡಲಾಗುತಿದ್ದ ಇಂಥ ವಿಶಿಷ್ಟ ಸೀದಾಗಳನ್ನೆ ಮುಂದೆಯೂ ಕೊಡುತ್ತ ಹೋಗಬೇಕೆಂದು ವಿಧಿಸಿದ್ದಾರೆ. ವಿವಾಹಗಳಲ್ಲಿ ೩೦ ಜನರಿಗೆ ತಲಾ ಎರಡುಯುನಿಟುಗಳಂತೆಉಪನಯನಗಳಲ್ಲಿ ೬ ಜನರಿಗೆ ತಲಾ ಎರಡು ಯುನಿಟುಗಳಂತೆ ಶ್ರಾದ್ಧಕ್ಕೆ ೪ ಜನರಿಗೆ ಮತ್ತು ಅಂತ್ಯವಿಧಿಗೆ ಹತ್ತು ಜನರಿಗೆ ಒಂದು ಯುನಿಟದಂತೆ ಸೀದಾ ಕೊಡಬೇಕೆಂದು ವಿಧಿಸಿದ್ದಾರೆ. ಇದರಂತೆ ಮುಸಲ್ಮಾನ ಕ್ರಿಶ್ಚಿಯನ್ನರ ವಿಧಿಗಳಲ್ಲಿಯೂ ಹೆಚ್ಚಿನ ಸೀದಾದ ವ್ಯವಸ್ಥೆ ಮಾಡಲಾಗಿದೆ. ಮಂದಿರ ಮಸೀದೆ ಮಠಗಳಲ್ಲಿಯ ಸೇವಕರಿಗೆ ವಾಡಿಕೆಯಂತೆ ಉಣಿಸುವುದಕ್ಕಾಗಿ ಸೀದಾ ಪದಾರ್ಥಗಳನ್ನು ಹಿಂದಿನಂತೆ ಈಗಲೂ ಕೊಡಬೇಕೆಂದು ಮದ್ರಾಸ ಸರಕಾರದವರು ವಿಧಿಸಿದ್ದಾರೆ. ಆದರೆ ಮುಂಬಯಿ ಪ್ರಾಂತದಲ್ಲಿ ಈ ಬಗೆಯ ವ್ಯವಸ್ಥೆಯಿಲ್ಲದ್ದರಿಂದ ನಾಗರಿಕರಿಗೆ ಮತ್ತು ಮಂದಿ-ಮಠದ ವ್ಯವಸ್ಥಾಪಕರಿಗೆ ಬಹಳ ತೊಂದರೆಯಾಗಹತ್ತಿದೆ. ಗದಗ ವೀರನಾರಾಯಣ ದೇವಸ್ಥಾನ ಪಂಚ ಕಮೀಟಿಯವರು ಈ ಸಂಬಂಧದಲ್ಲಿ ಮುಂಬಯಿ ಸರಕಾರದ ನಾಗರಿಕ ಪೂರಯಿಕ ಮಂತ್ರಿಗಳಿಗೆ ವಿನಂತಿ ಅರ್ಜಿಯನ್ನು ಮಾಡಿ ಶ್ರಾವಣ ಮತ್ತು ಅಶ್ವಿನಮಾಸಗಳಲ್ಲಿ ಸೇವಕ ವರ್ಗದವರಿಗೆ ಉಣಿಸುವುದಕ್ಕಾಗಿ ವಿಶೇಷ ಸೀದಾ ಕೊಡಬೇಕೆಂದು ಕೇಳಿಕೊಂಡಿರುತ್ತಾರೆ. ಲೋಕಪ್ರಿಯ ಮಂತ್ರಿಗಳು ಈ ಪ್ರಶ್ನೆಯನ್ನು ಸಹಾನುಭೂತಿಯಿಂದ ವಿಚಾರಿಸಿ ಮದ್ರಾಸ ಸರಕಾರದವರಂತೆ ಇಲ್ಲಿಯೂ ವಿಶೇಷ ಸೀದಾ ಕೊಡುವ ಏರ್ಪಾಡ ಮಾಡಬೇಕೆಂದು ಸೂಚಿಸಬಯಸುತ್ತೇವೆ.

ವಿಚಿತ್ರ ವಾದಸರಣಿ

ಮುಸ್ಲಿಂ ಲೀಗಿನ ಧುರೀಣರಾದ ಬ್ಯಾ. ಜಿನ್ನಾ ಸಾಹೇಬರು ನಿಜಾಂ ಪ್ರಭುಗಳ ಬಿನ್ನಹದ ಮೇರೆಗೆ ಹೈದ್ರಾಬಾದಕ್ಕೆ ಭೆಟ್ಟಿಕೊಟ್ಟು ಅವರ ಆತಿಥ್ಯವನ್ನು ಸ್ವೀಕರಿಸಿ ಮುಂಬಯಿಗೆ ಮರಳಿದರು. ೧೧ ನೆಯ ತಾರೀಕಿನ ದಿವಸ ಅವರು ಹೈದ್ರಾಬಾದ ಮಜಲೀಸ ಇತ್ತಿಹಾದುಲ್ ಮುಸಲ್ಮಾನ ಸಂಘದ ಆಶ್ರಯದಲ್ಲಿ ಭಾಷಣಮಾಡುತ್ತ ಹೈದ್ರಾಬಾದ ಪ್ರಜೆಗಳಿಗೆ ಬುದ್ಧಿವಾದವನ್ನು ಹೇಳುವ ಸಾಹಸ ಮಾಡಿದರು. ಕಾಶ್ಮೀರ ಮತ್ತು ಹೈದರಾಬಾದ ಸಂಸ್ಥಾನಗಳಲ್ಲಿಯ ಪರಿಸ್ಥಿತಿಯನ್ನು ವಿಮರ್ಶಿಸುವ ನೆವಮಾಡಿ ಇವೆರಡು ಸಂಸ್ಥಾನಗಳಲ್ಲಿನ ಪರಿಸ್ಥಿತಿ ಭಿನ್ನವಾಗಿದ್ದುದರಿಂದ ಕಾಶ್ಮೀರ ಪ್ರಜೆಗಳು ಹೊಣೆಗಾರ ರಾಜ್ಯಪದ್ಧತಿಯನ್ನು ಬೇಡುವದೇ ಲೇಸು,ಹೈದ್ರಾಬಾದ ಪ್ರಜರು ತಮ್ಮ ಸಂಸ್ಥಾನಕ್ಕೊಪ್ಪುವ ಸರಕಾರವನ್ನೇ ಬೇಡಬೇಕೆಂದು ಉಪದೇಶಿಸಿದರು. ಇವೆರಡೂ ಸಂಸ್ಥಾನಗಳಲ್ಲಿನ ಪರಿಸ್ಥಿತಿ ಅದೇಕೆ ಮತ್ತು ಅದೆಂತು ಭಿನ್ನವಾಗಿದೆಂಬುದನ್ನು ವಿವರಿಸುವ ಗೋಜಿಗೆ ಮಾತ ಜಿನ್ನಾಸಾಹೇಬರು ಹೋಗಲಿಲ್ಲ. ಕಾಶ್ಮೀರದಲ್ಲಿ ಪ್ರಜೆಗಳು ಮುಸಲ್ಮಾನರಿದ್ದು ಅರಸರು ಹಿಂದುಗಳಿದ್ದುದರಿಂದ ಅಲ್ಲಿನ ಅರಸೊತ್ತಿಗೆಯನ್ನು ಕಿತ್ತೊಗೆಯಬೇಕು, ಹೈದರಾಬಾದದಲ್ಲಿ ಪ್ರಜೆಗಳು ಹಿಂದುಗಳಿದ್ದು ಪ್ರಭುಗಳು ಮುಸಲ್ಮಾನರಿದ್ದುದರಿಂದ ಪ್ರಜೆಗಳು ಅವರನ್ನು ಕಿತ್ತೊಗೆಯುವ ಸಾಹಸ ಮಾಡಬಾರದೆಂದು ಜಿನ್ನಾಸಾಹೇಬರು ಅಪ್ರತ್ಯಕ್ಷವಾಗಿ ಹೇಳಿದರು. ಜಿನ್ನಾಸಾಹೇಬರ ಈ ಭಾಷಣವನ್ನು ಓದಿದರೆ ಜಾತೀಯತೆಯ ವಿಷವು ಅದರಲ್ಲಿ ಎಷ್ಟು ತುಂಬಿದೆಂಬುದು ಕಂಡುಬರದಿರಲಾರದು. ಸಂಸ್ಥಾನ ಪ್ರಜೆಗಳ ಪಕ್ಷವನ್ನು ಕಟ್ಟುವುದಾದರೆ ಎಲ್ಲೆಡೆಯಲ್ಲಿಯೂ ಒಂದೇ ಬಗೆಯ ಧೋರಣವನ್ನು ವಹಿಸಬೇಕು. ಅರಸರು ತಮ್ಮ ಜಾತಿಯವರು,ಪ್ರಜೆಗಳು ತಮ್ಮ ಜಾತಿಯವರೆಂದು ಮುಂತಾದ್ದನ್ನು ಯಾವರೀತಿಯಿಂದಲೂ ನೋಡಬಾರದು. ಆದರೆ ಜಿನ್ನಾಸಾಹೇಬರಿಗೆ ಪ್ರಜೆಗಳೆಲ್ಲರ ಹಿತ ಹಕ್ಕುಬಾಧ್ಯತೆಗಳನ್ನು ರಕ್ಷಿಸುವದು ಬೇಕಿಲ್ಲ. ತಮ್ಮ ವಿಶಿಷ್ಟ ಜಾತಿಯ ಜನರ ಹಕ್ಕುಬಾಧ್ಯತೆಗಳನ್ನು ರಕ್ಷಿಸುವದು ಮಾತ್ರ ಬೇಕಾಗಿದೆ. ಅಂತೆಯೇ ಅವರು ಇಂಥ ಜಾತೀಯತೆಯನ್ನು ಉದ್ರೇಕಿಸುವ ಭಾಷಣಗಳನ್ನು ಮಾಡುತ್ತಿರುವರು. ಕಾಂಗ್ರೆಸ ಅಧ್ಯಕ್ಷ ಪಂಡಿತ ಜವಾಹರಲಾಲರು ಕಾಶ್ಮೀರ ಸಂಬಂಧದಲ್ಲಿ ತಾಳಿದ ಧೋರಣವನ್ನು ಲೀಗ ಅಧ್ಯಕ್ಷರಾದ ಜಿನ್ನಾಸಾಹೇಬರು ಹೈದ್ರಾಬಾದ ಸಂಸ್ಥಾನದ ಬಗ್ಗೆ ತಾಳಿದ ಧೋರಣವನ್ನೂ ತುಲನೆ ಮಾಡಿ ನೋಡಿದರೆ ಈ ಎರಡೂ ಸಂಸ್ಥೆಗಳ ಮತ್ತು ಧುರೀಣರ ಧ್ಯೇಯಧೋರಣ ನಿಷ್ಪಕ್ಷಪಾತತನ, ಸಮತೋಲವೃತ್ತಿ ಮೊದಲಾದವುಗಳ ಬಗ್ಗೆ ಸ್ಪಷ್ಟ ಪ್ರಕಾಶಬೀಳುವದು. ಜಿನ್ನಾಸಾಹೇಬರ ಧೋರಣದಿಂದ ಸದ್ಯಕ್ಕೇನೋ ಅವರಿಗೆ ಲಾಭವಾಗಬಹುದು. ಆದರೆ ಕೊನೆಯಲ್ಲಿ ಅದು ಅವರ ತಲೆ ತಿನ್ನದೆ ಬಿಡದೆಂದು ನಾವು ಸಕಾಲದಲ್ಲಿಯೇ ಅವರಿಗೆ ಎಚ್ಚರಿಕೆ ಕೊಡಬಯಸುತ್ತೇವೆ.

ಗೋಮಾಂತಕದಲ್ಲಿ ದಬ್ಬಾಳಿಕೆ

ಗೋವೆ ಪ್ರಾಂತದಲ್ಲಿ ನಡೆದ ಚಳವಳಿಯ ಪರಿಣಾಮವಾಗಿ ಅಲ್ಲಿನ ಸರಕಾರದವರು ಕ್ರೂರ ದಬ್ಬಾಳಿಕೆಯ ಸತ್ರವನ್ನೆ ಪ್ರಾರಂಭಿಸಿರುವರೆಂದು ಅಲ್ಲಿಂದ ಬರುವ ಸುದ್ದಿಗಳನ್ನು ನೋಡಿದರೆ ಗೊತ್ತಾಗುವದು. ಮಹಾತ್ಮಾ ಗಾಂಧಿಯವರು ಬರೆದಂತೆ ಬಹಳ ದಿನಗಳಿಂದ ಹತ್ತಿಕ್ಕಲ್ಪಟ್ಟ ಅಲ್ಲಿನ ಜನರ ಭಾಷಣ, ಸಂಘ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುವದು ಸ್ವಾಭಾವಿಕ.ಹಾಗೆ ಪ್ರಯತ್ನಿಸುತ್ತಿರುವ ಜನತಾ ಧುರೀಣರಿಗೆ ಉಗ್ರ ಶಿಕ್ಷೆ ವಿಧಿಸುವದು ಸಮಂಜಸವಾಗಲಾರದು. ಅಲ್ಲಿನ ಹತ್ತು ಜನ ಕಾರ್ಯಕರ್ತರಿಗೆ ರಾಜದ್ರೋಹದ ಆರೋಪಕ್ಕಾಗಿ ಅಜನ್ಮ ಅಂದರೆ ೧೫ ವರ್ಷ ಸಶ್ರಮ ಶಿಕ್ಷೆ ಸಮರಿ ಕೋರ್ಟಿನವರು ವಿಧಿಸಿದರೆಂದು ಸುದ್ದಿ ಬಂದಿದೆ, ಅಲ್ಲದೆ ಅಲ್ಲಿನ ರಾಜಕೀಯ ಕಾರ್ಯಕರ್ತರನ್ನು ಸೆರೆಹಿಡಿಯುವುದೂ ಪ್ರಾರಂಭವಾಗಿದೆ. ಇದೀಗ ಅಲ್ಲಿ ತಲೆಯೆತ್ತುತ್ತಿರುವ ರಾಜಕೀಯ ಕಾರ್ಯಕರ್ತರನ್ನು ಪ್ರಾರಂಭದಲ್ಲಿಯೆ ಇಂತು ಉಗ್ರ ಶಿಕ್ಷೆಗೆ ಆಹುತಿ ಮಾಡಿ ಮುಂದೆ ಯಾರೂ ರಾಜಕೀಯ ಮಾತೆತ್ತದಂತೆ ಮಾಡಬೇಕೆಂದು ಅಲ್ಲಿನ ಅಧಿಕಾರಿಗಳು ವಿಚಾರ ಮಾಡಿದಂತೆ ತೋರುವದು. ಆದರೆ ದಬ್ಬಾಳಿಕೆಯಿಂದ ಜನತೆಯ ಶಕ್ತಿ ಕುಗ್ಗದೆ ಅದು ಮತ್ತಷ್ಟು ಹೆಚ್ಚುತ್ತದೆಂಬುದು ಬ್ರಿಟಿಶ್ ಹಿಂದುಸ್ತಾನದಲ್ಲಿಯ ಘಟನೆಗಳಿಂದ ಪೋರ್ತುಗೀಜ ಸರಕಾರವು ಕಂಡುಹಿಡಿಯಬೇಕು. ಅಲ್ಲಿನ ಜನರು ಇನ್ನೂ ಚಲೇಜಾವ ಚಳವಳಿಯನ್ನು ಪ್ರಾರಂಭಿಸಿಲ್ಲ. ಕೇವಲ ನಾಗರಿಕ ಹಕ್ಕುಬಾಧ್ಯತೆಗಳನ್ನು ಪಡೆಯಲು ಈಗ ಪ್ರಯತ್ನಿಸುತಿರುವರು. ಇಂದಿಲ್ಲ ನಾಳೆ ಪೋರ್ತುಗೀಜರು ಇಲ್ಲಿಂದ ಕಾಲ್ತೆಗೆಯಬೇಕಾಗುವುದೆಂಬುದನ್ನು ಮರೆಯತಕ್ಕದ್ದಿಲ್ಲ. ಇಷ್ಟೊಂದು ಅಧ್ಯತೆಯಿಂದ ನೂರರವತ್ತು ವರ್ಷಗಳವರೆಗೆ ಇಡೀ ಹಿಂದುಸ್ತಾನವನ್ನೆ ಆಳಿದ ಬ್ರಿಟಿಶರೆ ಅದನ್ನು ಬಿಟ್ಟು ಸ್ವದೇಶಕ್ಕೆ ಮರಳುವ ಪ್ರಸಂಗ ಬಂದಾಗ ಪೋರ್ತುಗೀಜರು ತಮ್ಮ ಸ್ಥಾನಗಳಲ್ಲಿ ಭದ್ರವಾಗುಳಿಯಬಯಸುವುದೆಂದಿಗೂ ನ್ಯಾಯ್ಯವಾಗಲಾರದು. ಅವರು ಇಲ್ಲಿಂದ ಹೊರಡುವ ಸಿದ್ಧತೆಯಲ್ಲಿಯೆ ಇರಬೇಕಲ್ಲದೆ ಆ ಬಗ್ಗೆ ಚಳವಳಿ ನಡೆಸಿದ ಜನರನ್ನು ಛಲಿಸುವ ಧೋರಣ ವಹಿಸತಕ್ಕದ್ದಲ್ಲ. ಗೋವಾಂತಕರಾದರೂ ದಬ್ಬಾಳಿಕೆಗೆ ಸೊಪ್ಪು ಹಾಕದೆ ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯಲು ಸಂಘಟಿತ ರೀತಿಯಿಂದ ಪ್ರಯತ್ನಿಸಬೇಕೆಂದು ಸೂಚಿಸಬಯಸುತ್ತೇವೆ.

ಮತ್ತೆ ಸಿಂಧ ಗವರ್ನರರ ಅಕ್ರಮ

ಸಿಂಧದ ಗವರ್ನರರಾದ ಮುಡಿ ಸಾಹೇಬರು ಮಂತ್ರಿಮಂಡಲ ಸ್ಥಾಪನೆಯ ಕಾಲಕ್ಕೆ ಬಹುಸಂಖ್ಯಾಕ ಪಕ್ಷವನ್ನು ಆಮಂತ್ರಿಸದೆ ಲೀಗ ಮುಖಂಡರನ್ನು ಆಮಂತ್ರಿಸಿ ಅಕ್ರಮ ರೀತಿಯಿಂದ ವರ್ತಿಸಿದ್ದು ಸರ್ವಶ್ರುತ. ಈಗ ಮತ್ತೆ ಅಕ್ರಮ ರೀತಿಯಿಂದ ವರ್ತಿಸಲು ಅವರು ಮುಂದಾದುದು ನಿಂದ್ಯ ಸಂಗತಿಯಾಗಿದೆ. ಮುಸ್ಲಿಂ ಲೀಗಿನ ಸದಸ್ಯರಿಬ್ಬರು ಆ ಪಕ್ಷಕ್ಕೆ ಶರಣು ಹೊಡೆದು ವಿರೋಧಿ ಪಕ್ಷವನ್ನು ಸೇರಿದ್ದರಿಂದ ಈಗ ಮಂತ್ರಿಮಂಡಳ ಪಕ್ಷದಲ್ಲಿ ಕೇವಲ ೨೪ ಸದಸ್ಯರುಳಿದಂತಾಗಿದೆ. ಮೂವರು ಯುರೋಪಿಯನ್ನರನ್ನು ಹಿಡಿದರೂ ಮಂತ್ರಿಮಂಡಳ ಪಕ್ಷದ ಬಹುಮತವಾಗಲಾರದು. ಏಕೆಂದರೆ ವಿರೋಧಿ ಪಕ್ಷದಲ್ಲಿ ಈಗ ೩೧ ಸದಸ್ಯರಾಗಿರುವರು. ಈ ಪರಿಸ್ಥಿತಿಯಲ್ಲಿ ಗವರ್ನರರು ಶಾಸನ ಸಭೆಯನ್ನು ಕರೆದು ಮಂತ್ರಿಮಂಡಳದಲ್ಲಿ ವಿಶ್ವಾಸವಿದೆಂಬುದಾಗಿ ಬಹುಮತದ ಬೆಂಬಲ ಪಡೆಯಬೇಕಿತ್ತು. ಹಾಗೆ ಮಾಡದೆ ಸದ್ಯದ ಮಂತ್ರಿಮಂಡಲವನ್ನೆ ಅಧಿಕಾರದಲ್ಲಿಡಗೊಡುವುದೆಂದರೆ ಕಾಯದೆಯನ್ನು ಕಸದ ಬುಟ್ಟಿಯಲ್ಲಿ ಹಾಕಿದಂತೆಯೆ ಸೈ. ವಿರೋಧಿ ಪಕ್ಷದ ಧುರೀಣರಾದ ಸಯ್ಯದ ಸಾಹೇಬರವರು ಈ ಸಂಬಂಧದಲ್ಲಿ ಸಂದರ್ಶನ ಕೊಡಿರೆಂದು ಗವರ್ನರರನ್ನು ಕೇಳಿಕೊಂಡರಂತೆ. ಗವರ್ನರರು ಅದನ್ನು ನಿರಾಕರಿಸಿದರಂತೆ. ಈಗ ಅವರು ವಿಶ್ರಾಂತಿಗಾಗಿ ಮೂರು ವಾರ ಬಲುಚಿಸ್ತಾನಕ್ಕೆ ತೆರಳಿರುವರು. ಸಯ್ಯದ ಸಾಹೇಬರೀಗ ವಾಯಿಸರಾಯರು ಇದರಲ್ಲಿ ಕೈಹಾಕಿ ಶಾಸನ ಸಭೆಯ ಅಧಿವೇಶನ ಕರೆಯುವಂತೆ ಗವರನರರನ್ನು ಒತ್ತಾಯ ಪಡಿಸಬೇಕೆಂದು ಕೇಳಿಕೊಂಡಿದ್ದಾರೆ. ಅವರ ಈ ಬೇಡಿಕೆ ನ್ಯಾಯ್ಯವಾಗಿದೆಯೆಂದು ಬೇರೆ ಹೇಳಬೇಕಿಲ್ಲ. ಶಾಸನ ಸಭೆಯ ಸದಸ್ಯರ ವಿಶ್ವಾಸಕ್ಕೆ ಪಾತ್ರವಾದ ಬಹುಮತದ ಬೆಂಬಲವಿದ್ದ ಪಕ್ಷವೆ ಮಂತ್ರಿ ಮಂಡಳ ರಚಿಸಬೇಕೆಂಬುದು ಘಟನಾ ಬದ್ಧ ಮತ್ತು ನ್ಯಾಯ್ಯ ಸಂಗತಿ. ಬಹುಮತದ ಬೆಂಬಲ ತಮಗೆ ಇಲ್ಲೆಂದು ಸಿದ್ಧವಾದ ಕೂಡಲೆ ಮಂತ್ರಿಮಂಡಳ ತಾನಾಗಿಯೇ ರಾಜೀನಾಮೆ ಕೊಡುವದು ಕ್ರಮಪ್ರಾಪ್ತ. ಸಿಂಧ ಮಂತ್ರಿಮಂಡಳವು ಅಂಥ ಪರಿಸ್ಥಿತಿ ಬಂದಾಗ ಏನಾದರೊಂದು ಕುಂಟ ನೆವ ತೆಗೆದು ಅಧಿಕಾರಕ್ಕಂಟಿಕೊಳ್ಳುವದೆಂದರೆ ಅನ್ಯಾಯದ ಪರಮಾವಧಿ. ಸಪ್ಟೆಂಬರ ವರೆಗೆ ಅಕ್ರಮವಾಗಿ ಅಧಿಕಾರದಲ್ಲಿ ಉಳಿಯುವದು ಹಿದಾಯತುಲ್ಲಾ ಮಂತ್ರಿಮಂಡಳಕ್ಕೆಂದಿಗೂ ಶೋಭಿಸದು. ಆದುದರಿಂದ ಅವರು ಕೂಡಲೆ ರಾಜೀನಾಮೆ ಕೊಡಬೇಕು ಇಲ್ಲವೆ ತಮಗೆ ಬಹುಮತದ ಬೆಂಬಲವಿದೆಂಬದನ್ನು ಶಾಸನ ಸಭೆಯಲ್ಲಿ ಸಿದ್ಧಮಾಡಿ ತೋರಿಸಿ ಆಡಳಿತವನ್ನು ಸಾಗಿಸಬೇಕು. ಇವೆರಡರಲ್ಲಿ ಯಾವದೊಂದನ್ನೂ ಮಾಡದೆ ಅಧಿಕಾರದಲ್ಲುಳಿಯುವದೆಂದರೆ ಕಾಯದೆಯನ್ನು ಅಲಕ್ಷಿಸಿದಂತೆಯೆ ಸೈ.

ಮುಂಬಯಿ ಶಾಸನ ಸಭೆ

ವಿಷಮ ವಿವಾಹ ಪ್ರತಿಬಂಧಕ ಮಸೂದೆ ಪರಿಶೀಲಕ ಸಮಿತಿಗೆ ಒಪ್ಪಿಸಲಾಯಿತು

ಸರಕಾರ ಎಲ್ಲ ಜಾತಿಯವರನ್ನು ಸಮಭಾವದಿಂದ ನೋಡುವದು

ಮೊದಲು ಪ್ರಸಿದ್ಧವಾದಂತೆ ಮುಂಬಯಿ ಶಾಸನ ಸಭೆಯ ಶರತ್ಕಾಲದ ಅಧಿವೇಶನವು ೧೫ ನೇ ತಾರೀಖು ಮಧ್ಯಾಹ್ನ ೧೧ ಗಂಟೆಗೆ ಪುಣೆಯ ಕೌನ್ಸಿಲ ಹಾಲಿನಲ್ಲಿ ಅಧ್ಯಕ್ಷ ಮಾನ್ಯ ಕೆ. ಎಸ್. ಫಿರೋದಿಯಾ ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಹೊಸ ಸದಸ್ಯರ ಪ್ರತಿಜ್ಞಾ ವಿಧಿ ಮುಗಿಯಿತು. ಅಹಮದಾಬಾದ ಪರಿಸ್ಥಿತಿಯ ಸಂಬಂಧದಲ್ಲಿ ಅಬ್ದುಲ ಖಾದರ ಮಹಮ್ಮದ ಶೇಖರು ಮುಂಡಿಸಿದ ನಿಲುವಳಿ ಸೂಚನೆಯ ವಿಚಾರವನ್ನು ಬುಧವಾರಕ್ಕೆ ಹಾಕಲಾಯಿತು ಹಿಂದುಳಿದ ವರ್ಗದ ಹಿತ ರಕ್ಷಣೆಗಾಗಿ ಏಳು ಜನರ ಮಂಡಳ ನೇಮಿಸಬೇಕೆಂದು ಗೊತ್ತಾಯಿತು.

ಖೋತಿ ತಿದ್ದುಪಡಿ ಮಸೂದೆ

ಆ ಮೇಲೆ ಗೃಹಮಂತ್ರಿಗಳಾದ ಮುರಾರಜಿ ದೇಸಾಯರು ೧೮೮೦ ರ ಖೋತಿ ಸೆಟ್ಲಮೆಂಟ ಕಾಯಿದೆಯ ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಸಲಹೆಗಾರ ಸರಕಾರ ಈ ಮಸೂದೆ ಪ್ರಸಿದ್ಧಿಸಿದಾಗ ರತ್ನಾಗಿರಿಯ ಶ್ರೀ ಬರ್ವೆಯವರ ಅದರ ವಿರುದ್ಧ ಹಾಯಕೋರ್ಟಿನಲ್ಲಿ ದಾವೆ ಮಾಡಿದ್ದು ಈ ವಿಷಯ ನ್ಯಾಯಮಂಡಲದೆದುರು ಇದ್ದುದರಿಂದ ಮಸೂದೆ ಮಂಡಿಸಲು ಬರುವದಿಲ್ಲೆಂದು ಶ್ರೀ ಶಿ. ಲ. ಕರಂದಿಕರರು ವಿಧಿ ಬಿಂದುವನ್ನೆತ್ತಿದರು. ಆದರೆ ಅಧ್ಯಕ್ಷರು ಅದನ್ನು ತಳ್ಳಿಹಾಕಿದರು. ಮಾನ್ಯ ಮುರಾರಜಿಯವರು ಚಿಕ್ಕದಾದರೂ ಚೊಕ್ಕ ಭಾಷಣ ಮಾಡಿ ಈ ತಿದ್ದುಪಡಿಯಿಂದ ಖೋತರಿಗೆ ರೈತರಿಗೆ ಇಬ್ಬರಿಗೂ ಹಾನಿಯಾಗದಂತೆ ನೋಡಿಕೊಳ್ಳುವದೆ ಸರಕಾರದ ಉದ್ದೇಶವಾಗಿದೆಂದು ಹೇಳಿದರು. ಖೋತಿ ಹಳ್ಳಿಗಳಲ್ಲಿ ಹಕ್ಕ ತಿಜಿಸ್ಟರ ಇಡಬೇಕು. ಮತ್ತು ಸರಕಾರೀ ಹಳ್ಳಿಗಳಂತೆಯೇ ಅಲ್ಲಿನ ಆಡಳಿತ ನಡೆಯಬೇಕು ಎಂದು ಮುಂತಾಗಿ ಹೇಳಿದರು. ಮುಸ್ಲಿಂಲೀಗದ ಮಿರ್ಜಾ ಅಖ್ತಾರ ಹುಸೇನ ಮತ್ತು ಹಿಂದೂ ಮಹಾಸಭೆಯ ಶಿ. ಲ. ಕರಂದೀಕರರು ಇದನ್ನು ವಿರೋಧಿಸಿದರು. ಮುಸ್ಲಿಂಲೀಗ ಮತ್ತು ಹಿಂದೂ ಮಹಾಸಭೆ ಇಂತು ಈ ವಿಷಯದಲ್ಲಿ ಕೂಡಿಕೊಂಡಿದ್ದು ವಿಚಿತ್ರ ಯೋಗಾಯೋಗವೆ. ಇನ್ನು ಹಲವರು ಅನುಕೂಲ ಮತ್ತು ಪ್ರತಿಕೂಲ ಭಾಷಣ ಮಾಡಿದನಂತರ ಗೃಹಮಂತ್ರಿಗಳು ಉತ್ತರ ಕೊಟ್ಟರು. ಆ ಬಳಿಕ ಮಸೂದೆಯ ಪ್ರಥಮ ವಾಚನ ಸ್ವೀಕೃತವಾಯಿತು. ಅನಂತರ ಮಸೂದೆಯು ಪರಿಶೀಲಕ ಸಮಿತಿಗೆ ಒಪ್ಪಿಸಲ್ಪಟ್ಟಿತು. ಈ ಸಮಿತಿಯಲ್ಲಿ ಮುರಾರಜಿ (ಅಧ್ಯಕ್ಷ) ಪಾರಕರ, ಭೈಜಿ, ಡಿ. ಕೆ. ಕುಂಟೆ, ಶಿ. ಲ. ಕರಂದೀಕರ, ಎಸ್. ಎಸ್. ಮಹಾಜನ, ಆರ್. ಎನ್. ಸಿಂಧೆ, ಎಂ. ಡಿ. ಜೋಶಿ ಮತ್ತು ಕೆ. ಎಫ್. ಪಾಟೀಲ ಇವರು ಸದಸ್ಯರಿರುವರು. ಪರಿಶೀಲಕ ಸಮಿತಿಯವರು ೧೫ ದಿನಗಳಲ್ಲಿ ವರದಿ ಒಪ್ಪಿಸಬೇಕೆಂದು ಗೊತ್ತಾಯಿತು.

ಎಸ್. ಹಸನ್, ಡಾ. ಎಂ. ಎನ್. ನಾಯಡು, ಎಸ್. ಎಚ್. ಪ್ರೇಟರ ಮತ್ತು ಎಸ್. ಟಿ. ಮೋರೆ ಇವರ ಅಧ್ಯಕ್ಷ ಮಾಲಿಕೆ ನೇಮಿಸಲಾಗಿದೆಂದು ಸಾರಲಾಯಿತು. ಅರ್ಜಿ ಸಮಿತಿಗೆ ಮಿರ್ಜಾ ಅಖ್ತಾರ ಹುಸೇನ, ಶಿ. ಲ. ಕರಂದೀಕರ, ಸರ್ ಸೊರಾಬ ಸಕಲಾತವಾಲಾ ಮತ್ತು ಎಸ್. ಆರ್. ಕಂಠಿ ಇವರು ನೇಮಿಸಲ್ಪಟ್ಟರು. ಉಪಾಧ್ಯಕ್ಷ ಶ್ರೀ ಎಸ್. ಎನ್. ಅಂಗಡಿಯವರು ಅದರ ಅಧ್ಯಕ್ಷರು. ಇಷ್ಟಕ್ಕೆ ಮೊದಲನೆ ದಿನದ ಕಾರ್ಯಕಲಾಪ ಮುಗಿಯಿತು. ಘಟನಾ ಸಮಿತಿಗೆ ನಾಮಪತ್ರ ಕೊಡುವದೂ ಇಂದು ಮುಗಿಯಿತು.

ವಿಷಮ ವಿವಾಹ ಪ್ರತಿಬಂಧ ಮಸೂದೆ

ಎರಡನೆಯ ದಿನದ ಕಾರ್ಯಕಲಾಪ ಮಂಗಳವಾರ ಮಧ್ಯಾಹ್ನ ೨ ಕ್ಕೆ ಪ್ರಾರಂಭವಾಯಿತು. ಈ ಹೊತ್ತು ಅಧಿಕಾರೇತರ ದಿನವಿದ್ದುದರಿಂದ ಲೀಲಾವತಿ ಮುನಶಿಯವರು ವಿಷಮ ವಿವಾಹ ಪ್ರತಿಬಂಧಕ ಮಸೂದೆಯನ್ನು ಮಂಡಿಸಿದರು. ಅವರು ಪ್ರಾಸ್ತಾವಿಕ ಭಾಷಣ ಮಾಡುತ್ತ ಹೀಗೆ ಹೇಳಿದರು. ಸದಸ್ಯರ ವಿರೋಧವುಂಟಾಗದಂತೆ ಈ ಮಸೂದೆಯನ್ನು ರಚಿಸಲಾಗಿದೆ. ಇದರನ್ವಯ ವಿಷಮವೆಂದರೆ ೪೫ ವರ್ಷ ಮೀರಿದ ಪುರುಷನು ೧೮ ವರ್ಷದೊಳಗಿನ ಕನ್ನೆಯನ್ನು ಮದುವೆಯಾಗತಕ್ಕದ್ದಲ್ಲ. ಅಲ್ಪವಯಿ ಅಂದರೆ ೧೮ ವರ್ಷದೊಳಗಿನ ಬಾಲಬಾಲಿಕೆಯರಿಗೆ ಶಿಕ್ಷೆ ವಿಧಿಸದೆ ಅವರ ಮಾತಾಪಿತೃಗಳು ಪಾಲಕರು ಅಥವಾ ಅವರನ್ನು ಮದುವೆ ಮಾಡಿಕೊಂಡವರನ್ನು ಶಿಕ್ಷಿಸಬೇಕೆಂದು ಈ ಮಸೂದೆಯಲ್ಲಿ ಹೇಳಿದೆ ಎಂದು ಮುಂತಾಗಿ ಲೀಲಾವತಿಯವರು ಮಾತಾಡಿದರು. ಇದಕ್ಕೆ ಪ್ರಚಂಡ ಬೆಂಬಲ ದೊರೆಯಿತು. ಮುಸ್ಲಿಂ ಲೀಗಿನವರು ಮಾತ್ರ ವಿರೋಧಿಸಿದರು. ಅನಂತರ ಲೀಲಾವತಿಯವರು ಮುಂಬಯಿ ಪ್ರಾಂತದ ಹಿಂದುಗಳಲ್ಲಿ ದ್ವಿಪತ್ನೀತ್ವ ಮತ್ತು ದ್ವಿಪತಿತ್ವವನ್ನು ನಿರ್ಬಂಧಿಸಬೇಕೆಂಬ ಇನ್ನೊಂದು ಮಸೂದೆ ಮಂಡಿಸಲು ಅಪ್ಪಣೆ ಕೋರಿದರು. ಸರಕಾರದವರು ಇದೇ ವಿಷಯದ ವ್ಯಾಪಕ ಮಸೂದೆಯನ್ನು ತರಲಿರುವುದರಿಂದ ಶ್ರೀಮತಿ ಮುನಶಿಯವರು ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಗೃಹಮಂತ್ರಿ ಮುರಾರಜಿಯವರು ಕೇಳಿಕೊಂಡರು. ಮಸೂದೆ ಹಿಂತೆಗೆದುಕೊಳ್ಳಲ್ಪಟ್ಟಿತು.

ಔದ್ಯೋಗೀಕರಣ

ಅನಂತರ ಉತ್ತರ ಕನ್ನಡ ಜಿಲ್ಲೆಯ ಮುಸ್ಲಿಂ ಲೀಗ ಪ್ರತಿನಿಧಿ ಶಮಸುದ್ದೀನರು ಉತ್ತರ ಕನ್ನಡ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಉದ್ಯೋಗಗಳನ್ನು ಪ್ರಾರಂಭಿಸುವ ಶಕ್ಯಾಶಕ್ಯತೆ ಕಂಡುಹಿಡಿಯಲು ಸಮಿತಿಯೊಂದನ್ನು ಸ್ಥಾಪಿಸಬೇಕೆಂದು ವಾದಿಸಿದರು. ಹಲವರು ಇದರ ಮೇಲೆ ಭಾಷಣ ಮಾಡಿದರು. ಕೆಲವರು ಹಾದಿ ತಪ್ಪಿ ಮಾತಾಡಿದ್ದರಿಂದ ಅಧ್ಯಕ್ಷರು ಎಚ್ಚರಿಕೆ ಕೊಡಬೇಕಾಯಿತು. ಸರಕಾರದವರು ಪ್ರಾಂತದ ಔದ್ಯೋಗೀಕರಣದ ವಿಚಾರಕ್ಕಾಗಿ ಒಂದು ಸಮಿತಿ ನೇಮಿಸಿದ್ದು ಜಿಲ್ಲೆಗೊಂದು ಸಮಿತಿ ನೇಮಿಸುವದು ಸರಿಯಲ್ಲೆಂದು ಹಲವರು ಸೂಚಿಸಿದರು. ಈ ಸಮಿತಿ ಮತ್ತು ಉಪಸಮಿತಿಗಳು ಸರಿಯಾಗಿ ಕೆಲಸ ಮಾಡುವದಿಲ್ಲ. ಅವುಗಳ ಸದಸ್ಯರು ಅಯೋಗ್ಯರಾಗಿರುವರೆಂದು ಮುಂತಾಗಿ ಹಲವರು ಟೀಕಿಸಿದರು. ಗ್ರಾಮೋದ್ಯೋಗ ಹಾಗು ಸಹಕಾರ ಮಂತ್ರಿ ಶ್ರೀ ವೈಕುಂಠಲಾಲ ಮೇಥಾರವರು ಮಾತಾಡುತ್ತ ಕಾರವಾರ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಉದ್ಯೋಗಗಳ ಜತೆಯಲ್ಲಿ ಗ್ರಾಮೋದ್ಯೋಗಗಳ ವಿಚಾರ ಮಾಡಬೇಕಾದ್ದರಿಂದ ಆ ರೀತಿ ಗೊತ್ತುವಳಿಯಲ್ಲಿ ಪೂರ್ವಡಿಸಬೇಕಾಗುವದು ಎಂದು ಮುಂತಾಗಿ ಹೇಳಿದರು. ಸರಕಾರ ಸಮಿತಿಯವರು ಒಂದು ತಿಂಗಳಲ್ಲಿ ವರದಿ ಒಪ್ಪಿಸುವಂತೆ ಕೇಳಿಕೊಳ್ಳಲಾಗಿದೆಂದೂ ಹೇಳಿದರು. ಈ ಪರಿಸ್ಥಿತಿಯಲ್ಲಿ ಗೊತ್ತುವಳಿ ಹಿಂತೆಗೆದುಕೊಳ್ಳಬೇಕೆಂದು ಉದ್ಯೋಗ ಮಂತ್ರಿ ತಪಾಸೆಯವರು ಕೇಳಿಕೊಂಡರು. ಆದರೆ ಶಮಸುದ್ದೀನರು ಗೊತ್ತುವಳಿ ಹಿಂತೆಗೆದುಕೊಳ್ಳಲೊಪ್ಪದ್ದರಿಂದ ಮತಕ್ಕೆ ಹಾಕಲಾಗಿ ೨೪ ಅನುಕೂಲ ೧೦೩ ಪ್ರತಿಕೂಲ ಮತಗಳಿಂದ ಅದು ಬಿದ್ದುಹೋಯಿತು.

ಒತ್ತಾಯದ ಶಿಕ್ಷಕ ವೃತ್ತಿ

ಉಚ್ಚ ಶಿಕ್ಷಣ ಅಥವಾ ಒಕ್ಕಲತನ ವ್ಯಾಪಾರ ಮತ್ತು ಉದ್ಯೋಗಗಳಲ್ಲಿ ವಿಶೇಷ ತರಬೇತಿ ಹೊಂದಿದವರನ್ನು ಬಿಟ್ಟು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳುವ ಎಲ್ಲ ವಿದ್ಯಾರ್ಥಿಗಳನ್ನು ಎರಡು ವರ್ಷಗಳ ಮಟ್ಟಿಗೆ ಪ್ರಾಥಮಿಕ ಶಿಕ್ಷಕರ ಕೆಲಸ ಮಾಡಲು ಒತ್ತಾಯದಿಂದ ಸೇರಿಸಿಕೊಳ್ಳಬೇಕೆಂಬ ಗೊತ್ತುವಳಿಯನ್ನು ಶ್ರೀ ಲೀಲಾವತಿ ಮುನಶಿಯವರು ಮುಂಡಿಸಿದರು. ಅರ್ಹ ಪದವೀಧರರನ್ನು ಮಾಧ್ಯಮಿಕ ಶಾಲೆಗಳಲ್ಲಿ ನೇಮಿಸಬೇಕೆಂದೂ ಈ ಮಸೂದೆಯಲ್ಲಿ ಸೂಚಿಸಲಾಗಿದೆ. ಈ ಬಗ್ಗೆ ವಿವರ ಯೋಜನೆ ಸಿದ್ಧಪಡಿಸಲು ಸಮಿತಿಯೊಂದನ್ನು ನೇಮಿಸಬೇಕೆಂದೂ ಅವರು ಹೇಳಿದರು.

ಮುಂಬಯಿ ಸಾಗುವಳಿ ಕಾಯಿದೆ

ಮೂರನೆಯ ದಿವಸ ಪ್ರಾರಂಭದಲ್ಲಿ ೧೯೩೩ ರ ಗ್ರಾಮ ಪಂಚಾಯತಿ ಕಾಯಿದೆಯ ತಿದ್ದುಪಡಿ ಮಸೂದೆ ಮಂಡಿಸಲ್ಪಟ್ಟಿತು. ಚೆಂಬೂರ ಹಳ್ಳಿಯು ಬೃಹತ್ ಮುಂಬಯಿಯಲ್ಲಿ ಸೇರಿಸಲ್ಪಟ್ಟದ್ದರಿಂದ ಹಳ್ಳಿಯ ನ್ಯಾಯಾಲಯದ ಮುಂದಿರುವ ಪ್ರಕರಣಗಳನ್ನು ಯೋಗ್ಯ ಅಧಿಕಾರಿಗಳು ಕಡೆಗೆ ವರ್ಗಾಯಿಸುವದಕ್ಕೆ ಈ ತಿದ್ದುಪಡಿ ಅವಶ್ಯವಾಗಿದೆಂದು ಹೇಳಲಾಯಿತು. ಈ ತಿದ್ದುಪಡಿಯ ಮೂರೂ ವಾಚನ ಸ್ವೀಕೃತವಾದವು.

ಅನಂತರ ೧೯೪೧ ರ ಮುಂಬಯಿ ಸಾಗುವಳಿ ಕಾಯಿದೆ ಪುನಃ ಒಪ್ಪಿಗೆ ಪಡೆಯುವ ಮತ್ತು ೧೯೪೯ ರ ಸಾಗುವಳಿ ಕಾಯಿದೆಯ ತಿದ್ದುಪಡಿ ಕಾಯದೆ ಮಂಡಿಸಲಾಯಿತು. ಸಾಗುವಳಿ ಕಾಯಿದೆಯಲ್ಲಿ ಕಂಡು ಬಂದ ಆಡಳಿತದ ದೋಷಗಳನ್ನು ನಿವಾರಿಸಲು ಮತ್ತು ರೈತನಿಗೆ ತನ್ನ ಹಕ್ಕುಗಳನ್ನು ರಕ್ಷಿಸಿಕೊಳ್ಳುವದಕ್ಕೆ ಹೆಚ್ಚು ಅಧಿಕಾರ ಕೊಡುವ ಉದ್ದೇಶದಿಂದ ಈ ತಿದ್ದುಪಡಿ ಮಸೂದೆ ತರಬೇಕಾಯಿತೆಂದು ಅವರು ಹೇಳಿದರು. ಕೇರವಾಡದ ಠಾಕೂರ ಸಾಹೇಬರು ಮಾತಾಡುತ್ತ ಪರಿಶೀಲಕ ಸಮಿತಿ ನೇಮಿಸಿ ಜಮೀನದಾರ ಮತ್ತು ರೈತರ ಹಕ್ಕುಗಳನ್ನು ನಿರ್ಣಯಿಸುವದೊಳಿತೆಂದು ಅಭಿಪ್ರಾಯಪಟ್ಟರು. ಸಮಸ್ತ ಜನರ ದೃಷ್ಟಿಯಿಂದ ಇದನ್ನು ನೋಡಬೇಕೆಂದು ಮುಸ್ಲಿಂ ಲೀಗಿನ ಭೈಜಿಯವರು ಸೂಚಿಸಿದರು.

ಅಹಮದಾಬಾದ ಪರಿಸ್ಥಿತಿ

ಇಂದು ಉಪಹಾರದ ನಂತರ ಅಹಮ್ಮದಾಬಾದದಲ್ಲಿಯ ದಂಗೆಯ ಪರಿಸ್ಥಿತಿಯನ್ನು ಇದೇ ಜುಲೈ ೧ ರ ನಂತರ ಸರಕಾರ ಅಯೋಗ್ಯ ರೀತಿಯಿಂದ ಎದುರಿಸಿದ್ದನ್ನು ಚರ್ಚಿಸಬೇಕೆಂದು ಅಬ್ದುಲ್ ಕಾದರ ಶೇಖರು ನಿಲುವಳಿ ಸೂಚನೆ ಮಂಡಿಸಿದರು. ಅವರು ಮತ್ತು ಅಬ್ದುಲಾ ಸತ್ತಾರರವರು ಮಾತಾಡುತ್ತ ಸರಕಾರದವರ ಧೋರಣ ಅಸಮರ್ಪಕವಾಗಿದೆ, ಶಾಂತತೆಯನ್ನು ವ್ಯವಸ್ಥೆಯನ್ನು ಮಂತ್ರಿಗಳಿಗೆ ಕಾಯ್ದುಕೊಳ್ಳುವುದಾಗದಿದ್ದರೆ ಅವರು ಹೊರಬೀಳಲಿ ಎಂದು ಮುಂತಾಗಿ ನುಡಿದರು.

ಮುಖ್ಯಮಂತ್ರಿ ಶ್ರೀ ಖೇರರು ಮಾತಾಡುತ್ತ ರಾಜಕೀಯ ವಿರೋಧಿಗಳನ್ನು ನಾವು ಹೆದರಿಸುವುದಿಲ್ಲ. ಶಾಂತಿ ಅಹಿಂಸೆಗಳಲ್ಲಿ ವಿಶ್ವಾಸವಿಲ್ಲದವರೆ ಜನರನ್ನು ಹೆದರಿಸುತಿರುವರು. ಮುಸ್ಲಿಂರೂ ಭಾರತೀಯರೇ. ನಾವು ಇದರಲ್ಲಿ ಯಾವ ಭೇದಭಾವ ಮಾಡಲಿಚ್ಛಿಸುವದಿಲ್ಲ. ಶ್ರೀ ಚುಂದ್ರಿಗಾರರು ಹೊರಡಿಸಿದ ಪ್ರಕಟಣೆ ಗರ್ಹಣೀಯವಾಗಿದೆ. ಈ ನಾಡಿನ ಶಾಂತಿಯನ್ನು ಕಾಯ್ದುಕೊಳ್ಳಲು ಮುಸ್ಲಿಮರೂ ಆಸ್ಥೆ ವಹಿಸಿ ದುಡಿಯಲಿ. ಇಂಥ ಭಾವನೆಗಳನ್ನು ತುಂಬಿಕೊಳ್ಳಬೇಡಿರಿ. ಈ ಸರಕಾರವನ್ನು ಈಗಲಾದರೂ ನೀವು ವಹಿಸಿಕೊಳ್ಳಬಹುದು ನಾವೇನ್ನ ಇಂಥ ಭಾವನೆಗಳಿಂದ ನಿಮ್ಮನ್ನೆದುರಿಸುವದಿಲ್ಲೆಂದು ಆಶ್ವಾಸನ ಕೊಡುತ್ತೇನೆಂದು ಮುಂತಾಗಿ ಹೇಳಿದರು.

ಅನಂತರ ಅಹಮದಿಯು ಶುರುವಿಯಾ, ಪಾರಕರ, ಚುಂದ್ರಿಗಾರರು ಮಾತಾಡಿದ ಬಳಿಕ ಮಾನ್ಯ ಮುರಾರಜಿಯವರು ನಿಲುವಳಿ ಸೂಚನೆಯನ್ನು ವಿರೋಧಿಸುತ್ತ ಅಹಮದಾಬಾದದ ಪರಿಸ್ಥಿತಿಯನ್ನು ವಿವರಿಸಿದರು. ಅಲ್ಲಿಯ ಪರಿಸ್ಥಿತಿ ಸುಧಾರಣೆಗಾಗಿ ಶಾಂತತಾ ಸಮಿತಿಯನ್ನು ಸ್ಥಾಪಿಸಬೇಕೆಂದಿದ್ದೆ. ಈ ಸಮಿತಿಯಲ್ಲಿ ಮುಸ್ಲಿಂರು ಹಿಂದುಗಳಿಗೆ ಸಂಭವಿಸುವ ಅಪಾಯಕ್ಕೆ ಮತ್ತು ಹಿಂದುಗಳು ಮುಸಲ್ಮಾನರಿಗೆ ಸಂಭವಿಸುವ ಅಪಾಯಕ್ಕೆ ಹೊಣೆಗಾರರಾಗಿರಬೇಕೆಂದು ನಾನು ಸೂಚಿಸಿದ್ದೆ. ಆದರೆ ದುರ್ದೈವದಿಂದ ಅಲ್ಲಿಯ ಮುಸಲ್ಮಾನರು ಇದಕ್ಕೊಪ್ಪಲಿಲ್ಲೆಂದು ಮುಂತಾಗಿ ಹೇಳಿದರು. ಶೇಖರು ಉತ್ತರ ಕೊಡಲಿಕ್ಕೆ ಎದ್ದ ಕೂಡಲೆ ಸಭೆಯ ವೇಳೆ ಮುಗಿಯಿತೆಂದು ಅಧ್ಯಕ್ಷರು ಸಾರಿದರು. ನಿಲುವಳಿ ಸೂಚನೆಯಿಂತು ಮಾತಿನಲ್ಲಿಯೆ ಕೊನೆಗಂಡಿತು.

ಗುರುವಾರ ದಿನ ಸಾಗುವಳಿ ಕಾಯಿದೆಯ ತಿದ್ದುಪಡಿಯ ಚರ್ಚೆಯು ಮುಂದೆ ಸಾಗಿತು. ಹುಬ್ಬಳ್ಳಿಯ ಶ್ರೀ ಆರ್. ಎಚ್. ಗೂಡವಾಲಾರವರು ಭೂಮಿಯಲ್ಲಿ ದುಡಿಯುತಿರುವವರ ಪಕ್ಷವನ್ನೆತ್ತಿ ಸರಕಾರವನ್ನು ಕಟುವಾಗಿ ಟೀಕಿಸಿದರು. ಹೀಗೆ ಅರ್ಧಮರ್ಧ ರೀತಿಯಲ್ಲಿ ಸುಧಾರಣೆ ಮಾಡಬಾರದೆಂದು ಸರಕಾರಕ್ಕೆ ಸೂಚಿಸಿದರು. ಕಾರವಾರದ ಶಮಸುದ್ದೀನರು ಮಾತಾಡಿ ಮಸೂದೆಯಲ್ಲಿಯ ಕೆಲ ಕಲಮುಗಳನ್ನು ಟೀಕಿಸಿದರು. ಸರದಾರ ಇನಾಮದಾರರ ಪ್ರತಿನಿಧಿಗಳಾದ ಡಾ. ಎಂ. ಎನ್ ನಾತೂರವರು ತಿದ್ದುಪಡಿಯನ್ನು ಸ್ವಾಗತಿಸುತ್ತ ಜಮೀನದಾರರು ರೈತರು ಮತ್ತು ಸರಕಾರದವರು ಕೂಡಿಯೆ ಕೆಲಸ ಮಾಡುವ ಸುಯೋಗ ಪ್ರಾಪ್ತವಾಗಿದೆಂದು ಹೇಳಿ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಬೇಕೆಂದು ಸೂಚಿಸಿದರು. ಎಲ್ ಎಂ ಶ್ರೀಕಾಂತರವರು ಸರಕಾರದ ಪರವಾಗಿ ಮಸೂದೆಗೆ ಹಾರ್ದಿಕ ಬೆಂಬಲ ಕೊಟ್ಟರು. ಪರಿಶೀಲಕ ಸಮಿತಿಗೆ ಮಸೂದೆಯನ್ನು ಒಪ್ಪಿಸಬೇಕೋ ಹೇಗೆಂಬ ಬಗ್ಗೆ ವಿಚಾರ ಮಾಡಲು ಸರಕಾರಕ್ಕೆ ಅವಕಾಶ ಬೇಕಾಗಿದ್ದರಿಂದ ಸಭೆಯನ್ನು ನಾಳೆಗೆ ಮುಂದರಿಸಬೇಕೆಂದು ಮುರಾರಜಿಯವರು ಕೇಳಿಕೊಂಡರು. ನಾಳೆ ಶುಕ್ರವಾರವಿದ್ದುದರಿಂದ ಅಧಿವೇಶನವನ್ನು ೨-೧೫ ಕ್ಕೆ ಪ್ರಾರಂಭಿಸಬೇಕೆಂದು ವಿರೋಧಿ ಪಕ್ಷದವರು ಸೂಚಿಸಿದರು. ಅಧಿವೇಶನ ಶುಕ್ರವಾರಕ್ಕೆ ಮುಂದರಿಯಿತು.

ಹಿಂದುಳಿದ ವರ್ಗದ ಮಂಡಳಕ್ಕೆ ಜಿ. ಜಿ. ನಾತವಾಡಕರ, ಎನ್. ಎಸ್. ಕಾಜರೋಳಕರ, ಎಲ್. ಎನ್. ಶ್ರೀಕಾಂತ, ಎಲ್. ಬಿ. ಭಿಂಗಾರದಿವೆ, ವೀರನಗೌಡ ಪಾಟೀಲ, ಎ. ಟಿ. ರಣಖಾಂಬಿ ಮತ್ತು ಎಸ್ ಟಿ. ಮಕ್ವಾನಾ ಇವರು ಆರಿಸಲ್ಪಟ್ಟರು.

ಘಟನಾ ಸಮಿತಿಗೆ ಮುಂಬಯಿ ಪ್ರಾಂತದ ಹುರಿಯಾಳು

೧೯ ಸ್ಥಳಗಳಿಗೆ ೨೩ ಅರ್ಜಿ

ಇದೇ ಆಗಷ್ಟದಿಂದ ಕೂಡಲಿರುವ ಘಟನಾ ಸಮಿತಿಗೆ ಮುಂಬಯಿ ಪ್ರಾಂತದಿಂದ ಸಾಮಾನ್ಯ ಸ್ಥಳಗಳಿಗೆ ೧೯ ಜನರನ್ನಾರಿಸುವದಿದ್ದು ಕಾಂಗ್ರೆಸ್ಸಿನವರು ತಮ್ಮ ೧೯ ಪ್ರತಿನಿಧಿಗಳನ್ನು ನಿಲ್ಲಿಸಿದ್ದಾರೆ. ಬೇರೆ ನಾಲ್ವರು ಸ್ವತಂತ್ರ ರೀತಿಯಿಂದ ನಿಂತಿದ್ದಾರೆ. ಈ ೨೩ ಜನರ ಹೆಸರು ಕೆಳಗೆ ಕೊಟ್ಟಿದೆ.

೧) ಸರದಾರ ವಲ್ಲಭಭಾಯಿ ಪಟೇಲ
೨) ಶಂಕರರಾವ ದೇವ
೩) ಶಾಂತಿಲಾಲ ಶಹಾ
೪) ಕೆ. ಎಂ. ಮುನಶಿ
೫) ಬಿ. ಜಿ ಖೇರ
೬) ಕನಯ್ಯಾಲಾಲ ದೇಸಾಯಿ
೭) ಎಸ್. ಕೆ. ಪಾಟೀಲ
೮) ಕೆ ಎಂ. ಜೇಧೆ
೯) ಎಸ್. ನಿಜಲಿಂಗಪ್ಪ
೧೦) ಎಂ. ಆರ್. ಮಸಾನಿ
೧೧) ಡಾ. ಅಲ್ಬನ್ ಡಿಸೌಜಾ
೧೨) ಶ್ರೀಮತಿ ಹಂಸಾ ಮೇಥಾ
೧೩) ಆರ್. ಎಂ. ನಲವಡೆ
೧೪) ಎಸ್. ಎನ್. ಮಾನೆ
೧೫) ಖಂಡೂಭಾಯಿ ದೇಸಾಯಿ
೧೬) ಆರ್. ಆರ್. ದಿವಾಕರ
೧೭) ಎನ್ ವಿ. ಗಾಡಗೀಳ
೧೮) ಎಚ್. ವಿ. ಪಾಟ್ಸಕರ
೧೯) ಬಿ. ಎಂ. ಗುಪ್ತೆ
೨೦) ಆರ್. ಆರ್. ಭೋಲೆ
೨೧) ಎಲ್. ಜಿ. ಥತ್ತೆ
೨೨) ಶಿ. ಲ. ಕರಂದೀಕರ
೨೩) ಎಂ. ಆರ್. ದಳವಿ

ಕಾಂಗ್ರೆಸ್ಸಿನ ಯಾದಿಯಲ್ಲಿ ಮೊದಲಿನ ನಾಲ್ವರ ಹೆಸರುಗಳನ್ನು ಕಾಂಗ್ರೆಸ್ ವರ್ಕಿಂಗ ಕಮೀಟಿಯವರು ಸೂಚಿಸಿರುವರು. ಡಾ. ಎಂ ಆರ್ ಜಯಕರರ ನಾಮಪತ್ರ ಸಕಾಲಕ್ಕೆ ಬಾರದ್ದರಿಂದ ಶ್ರೀ ಶಾಂತಿಲಾಲ ಶಹಾ ಇವರ ಕಡೆಯಿಂದ ನಾಮಪತ್ರ ಕೊಡಿಸಲಾಗಿದೆ. ೩ ನೆಯವರು ಮುಂಬಯಿ ಮುಖ್ಯ ಮಂತ್ರಿಗಳು ಮುಂದಿನ

(೧೪ ನೇ ಪುಟ ನೋಡಿರಿ)

ಅಂತರ್ ರಾಷ್ಟ್ರೀಯ

ಬ್ರಿಟನಿಗೆ ಸಾಲ

ಬ್ರಿಟಿಶ ಕೂಲಿಕಾರ ಸರಕಾರದ ತಲೆಯ ಮೇಲಿದ್ದ ಬಹಳ ದೊಡ್ಡ ಚಿಂತಾಭಾರವೊಂದನ್ನು ಮೊನ್ನೆ ತಾ. ೧೩ ನೇ ದಿನ ಅಮೇರಿಕೆಯ ಕಾಂಗ್ರೆಸ್ಸು ಇಳಿಸಿತು. ಕಳೆದ ಡಿಸೆಂಬರದಲ್ಲಿ ಅಮೇರಿಕನ್ ಸರಕಾರ ಬ್ರಿಟಿಶ ಸರಕಾರಕ್ಕೆ ಕೊಡಲೊಪ್ಪಿದ ೯೩,೭೫,೦೦,೦೦೦ ಪೌಂಡ ಸಾಲಕ್ಕೆ ಅದು ಏಳು ತಿಂಗಳ ನಂತರ ಸಮ್ಮತಿ ಮುದ್ರೆಯನ್ನು ಹಾಕಿತು: ಪ್ರತಿನಿಧಿ ಸಭೆಯ ೩೭೪ ಸದಸ್ಯರಲ್ಲಿ ೧೫೫ ಜನರು ಇದನ್ನು ವಿರೋಧಿಸಿದರು. ಜಗತ್ತಿನ ವ್ಯಾಪಾರದಲ್ಲಿ, ಮುಖ್ಯವಾಗಿ ಸಾಮ್ರಾಜ್ಯ ವ್ಯಾಪಾರದಲ್ಲಿ, ತನಗಿರುವ ಗುತ್ತಿಗೆಯನ್ನು ಬ್ರಿಟನು ಈ ಸಾಲದ ಫಲವಾಗಿ ಕಳೆದುಕೊಳ್ಳಬೇಕಾಗುವದಾದರೂ ಯುದ್ಧದಿಂದೊದಗಿದ ಅಪಾರ ಹಾನಿಯಿಂದ ಸಂಪೂರ್ಣ ಕೈಸೋತಿದ್ದ ಅದಕ್ಕೆ ಬೇಗನೆ ಪುನರುಜ್ಜೀವನಗೊಳ್ಳಲು ಅವಕಾಶ ದೊರೆತಂತಾಗಿದೆ. “ಈ ಸಾಲವನ್ನು ಕೊಡಲು ಅಮೇರಿಕೆ ನಿರಾಕರಿಸಿದ್ದರೆ ಇಂಗ್ಲಂಡು ಬಹಳ ಪೇಚಿನಲ್ಲಿ ಬೀಳುತ್ತಿತ್ತು.” ಎಂದು ಅರ್ಥಿಕ ಮಂತ್ರಿ ಡಾ. ಹ್ಯೂ ಡಾಲ್ಟನ್ನರು ಪಾರ್ಲಮೆಂಟಿನಲ್ಲಿ ಬಹಿರಂಗವಾಗಿ ಒಪ್ಪಿಕೊಂಡದ್ದರಿಂದ ಕೂಲಿಕಾರ ಸರಕಾರ ಅದರ ಮೇಲೆ ಎಷ್ಟು ನಿರ್ಭರವಾಗಿತ್ತೆಂದು ತಿಳಿಯಬಹುದು. “ಸಾಲ ಸಿಕ್ಕಿದ್ದರಿಂದ ನಮಗೆ ಉಸಿರಾಡಿಸಲು ಸಮಯ ಸಿಕ್ಕಿದಂತಾಗಿದೆ. ನಮ್ಮ ಉತ್ಸಾಹಶಕ್ತಿ ಕೂಡ ಹೆಚ್ಚಿದೆ. ಇದಕ್ಕಾಗಿ ಅಮೇರಿಕೆಗೆ ನಾವು ಋಣಿಗಳು” ಎಂದರವರು– ವಸ್ತುತಃ ಕೂಲಿಕಾರ ಸರಕಾರದ ಯಶಅಪಯಶ ಈ ಸಾಲಕ್ಕೆ ಅಮೇರಿಕನ್ ಪ್ರಜಾಪ್ರತಿನಿಧಿ ಸಭೆಯ ಮನ್ನಣೆ ದೊರಕುವದನ್ನೆ ಅವಲಂಬಿಸಿತ್ತೆಂದರೆ ಅತಿಶಯೋಕ್ತಿಯಾಗದು. ಇದು ದೊರಕದಿದ್ದರೆ ಕೂಲಿಕಾರ ಮಂತ್ರಿಗಳು ಬ್ರಿಟಿಶ ಜನರನ್ನು ಸಂತುಷ್ಟರಾಗಿರಿಸಲು ಅಸಮರ್ಥರಾಗಿ ಮುಂದಿನ ಚುನಾವಣೆಗಳಲ್ಲಿ ಬಹಳ ಮಟ್ಟಿಗೆ ಮೂಲೆಗುಂಪಾಗುತ್ತಿದ್ದರೇನೊ.

ಶರ್ತುಗಳು

೫೦ ವರ್ಷಗಳ ಅವಧಿಯಲ್ಲಿ (೧೯೫೧ ರಿಂದ) ವಾರ್ಷಿಕ ಕಂತುಗಳಲ್ಲಿ ತೀರಿಸಬೇಕಾದ ೨ ಸಲೆ ಬಡ್ಡಿಯ ಇಷ್ಟು ದೊಡ್ಡ ಸಾಲವನ್ನು ದೊರಕಿಸಿದ್ದನ್ನು ಚಿಲ್ಲರೆ ಕೆಲಸವೆಂದು ಹೇಳಲಾಸಲ್ಲ. ಅದೂ ಮೊದಲೈದು ವರ್ಷಗಳಲ್ಲಿ ಬಡ್ಡಿಯೇ ತೆರಬೇಕಾಗಿಲ್ಲ. ಆದರೆ ಈ “ಉಸಿರಾಡಿಸುವ ಪುರಸೊತ್ತು” ದೊರಕಿಸಿಕೊಳ್ಳುವ ಸಲುವಾಗಿ ಬ್ರಿಟಿಶ ವ್ಯಾಪಾರಿ ಮನೋವೃತ್ತಿಗೆ ನೋವುಂಟುಮಾಡುವ ಎಷ್ಟೋ ಕರಾರುಗಳನ್ನು ಇಂಗ್ಲಂಡು ಮನಸು ಗಟ್ಟಿ ಮಾಡಿ ಒಪ್ಪಿಕೊಳ್ಳಬೇಕಾಯಿತು ಸಾಲದ ಕರಾರುಗಳನ್ನು ನೋಡಿದರೆ ಇದು ಸ್ಪಷ್ಟವಾಗುವದು:....

೧) ೧೯೫೧ ಮುಗಿಯುವವರೆಗೆ ಬ್ರಿಟನು ಇತರ ಸಾಮ್ರಾಜ್ಯ ರಾಷ್ಟ್ರಗಳೊಡನೆ ಹೊಸ ಸಾಲದ ಒಪ್ಪಂದಗಳನ್ನು ಮಾಡಿಕೊಳ್ಳತಕ್ಕದ್ದಲ್ಲ.

೨) ಸಾಮ್ರಾಜ್ಯ ಅಗ್ರಪಂಕ್ತಿಯನ್ನು ಕೊನೆಗೊಳಿಸುವದರಲ್ಲಿ ಇಂಗ್ಲಂಡು ಇತರರೊಡನೆ ಸಹಕರಿಸಬೇಕು.

೩) ಸ್ಟರ್ಲಿಂಗ ಸಾಲವನ್ನು ತೀರಿಸಲು ಈ ಅಮೇರಿಕನ್ ಸಾಲದ ಹಣವನ್ನು ಬಳಸತಕ್ಕದ್ದಲ್ಲ.

೪) ಇಂಗ್ಲಂಡು ಒಂದು ವರ್ಷದೊಳಗೆ ತನ್ನ “ಡಾಲರ ಪೂಲನ್ನು” ರದ್ದುಗೊಳಿಸಬೇಕು ಈ ಡಾಲರ ಪೂಲಿನಿಂದ ಈ ವರೆಗೆ ಸ್ಟರ್ಲಿಂಗ ಪ್ರದೇಶಗಳ ಡಾಲರ ಸಂಪಾದನೆಗಳು ಮೂಲೆಗುಂಪಾಗಿ ಬೀಳುತಿದ್ದವು. ಇನ್ನು ಮುಂದೆ ಸ್ಟರ್ಲಿಂಗ್ ಪ್ರದೇಶದ (ಹಿಂದುಸ್ತಾನ, ಇಜಿಪ್ತ, ದಕ್ಷಿಣ ಅಫ್ರಿಕಾ, ಅಸ್ಟ್ರೇಲಿಯಾ) ರಾಷ್ಟ್ರಗಳು ತಮ್ಮ ಡಾಲರ ಸಂಪಾದನೆಯನ್ನು ತಮಗೆ ಬೇಕಾದಂತೆ ಉಪಯೋಗಿಸಬಹುದು.

ಅಮೇರಿಕೆಗೆ ಮುಕ್ತದ್ವಾರ

ಔದ್ಯೋಗಿಕ ಕ್ರಾಂತಿಯಲ್ಲಿ ಮುಂದಾಳಾದ ಇಂಗ್ಲಂಡು ಸಾಮ್ರಾಜ್ಯ ಸಂಪಾದನೆಯಲ್ಲಿಯೂ ಮುಂದಾಳಾಗಿ ಸಾಮ್ರಾಜ್ಯ ಪ್ರದೇಶಗಳಲ್ಲಿ “ಇಂಪೀರಿಯಲ್ ಪ್ರಿಫರೆನ್ಸ” ಅಥವಾ ಸಾಮ್ರಾಜ್ಯ ಅಗ್ರಪಂಕ್ತಿ ಧೋರಣೆಯ ಮೂಲಕ ಸಾಮ್ರಾಜ್ಯದ ವ್ಯಾಪಾರದ ಗುತ್ತಿಗೆಯನ್ನೆ ಹಿಡಿದು ಆ ಪ್ರದೇಶದಲ್ಲಿ ಇತರರಿಗೆ ಯಶಸ್ವಿಯಾಗಿ ಸರಕು ಮಾರುವದು ಅಸಾಧ್ಯವಾಗುವಂತೆ ಮಾಡಿತ್ತು. ಆದರೆ ಈ ಯುದ್ಧದಿಂದ ಬ್ರಿಟಿಶ ವಿದೇಶಿ ಸಂಪತ್ತೆಲ್ಲ ಕರಗಿ ಹೋದುದರಿಂದ ಅದು ತನಗೆ ಪುನರ್ನಿರ್ಮಾಣಕ್ಕೆ ಬೇಕಾದುದನ್ನು ಆಯಾತ ಮಾಡಿಕೊಳ್ಳಲು ಅಮೇರಿಕೆಯ ಮುಖ ನೋಡಬೇಕಾಗಿ ಬಂತು. ಆದರೆ ಸಾಲ ಕೊಡುವ ಮೊದಲು ಈ ಸಾಮ್ರಾಜ್ಯ ಅಗ್ರಪಂಕ್ತಿಯನ್ನು ರದ್ದುಗೊಳಿಸಬೇಕೆಂದು ಅಮೇರಿಕನ್ನರು ಹಟಹಿಡಿದುದರಿಂದ ಈಗ ಸಾಮ್ರಾಜ್ಯ ಪ್ರದೇಶದಲ್ಲಿಯೂ ಹೊರಗಿನವರಿಗೆ ಅರ್ಥಾತ ಅಮೇರಿಕನ್ನರಿಗೆ ಪ್ರವೇಶಕೊಡದೆ ವಿಧಿಯೇ ಇರದಾಯಿತು. ಇದಲ್ಲದೆ ಸಾಮ್ರಾಜ್ಯ ರಾಷ್ಟ್ರಗಳನ್ನು ಸ್ಟರ್ಲಿಂಗ ಪ್ರದೇಶವೆಂದುಮಾಡಿ, ರಾಷ್ಟ್ರಗಳು ಅಮೇರಿಕೆಯೊಡನೆ ವ್ಯಾಪಾರ ಮಾಡಿ ಗಳಿಸಿರಬಹುದಾದ ಡಾಲರ ಹಣವನ್ನು ಅವು ಸ್ವತಂತ್ರವಾಗಿ ಬಳಸಿಕೊಳ್ಳದಂತೆ ಮತ್ತು ಬ್ರಿಟಿಶ ಸಾಮುಗ್ರಿಗಳನ್ನೇ ಅವು ಕೊಳ್ಳುವಂತೆ ಮಾಡಿ ಅಮೇರಿಕನ್ ಸಾಮುಗ್ರಿಗಳು ಆ ಪ್ರದೇಶದಲ್ಲಿ ಪ್ರವೇಶಿಸದಂತೆ ಅಡ್ಡಿಯೊಡ್ಡುತಿದ್ದ ಬ್ರಿಟಿಶರು ಈಗ ಆ ಧೋರಣೆಗೂ ತಿಲಾಂಜಲಿ ಕೊಡಬೇಕಾಗಿ ಬಂದಿದೆ. ಒಟ್ಟಿನ ಮೇಲೆ ಸಾಮ್ರಾಜ್ಯ ಸತ್ತೆಯ ಬಲದಿಂದ ವ್ಯಾಪಾರವನ್ನು ಕೈಯೊಳಗಿಟ್ಟುಕೊಂಡಿದ್ದ ಇಗ್ಲಂಡ ಇನ್ನು ಮುಂದೆ ತನ್ನ ಸಾಮ್ರಾಜ್ಯದಲ್ಲಿಯೇ ಅಮೇರಿಕನ್ ಮೇಲಾಟವನ್ನೆದುರಿಸಬೇಕಾಗುವದು. ಈ ಮೇಲಾಟದಲ್ಲಿ ಅಮೇರಿಕನ್ನರೇ ತಮ್ಮ ಧನಬಲದಿಂದ ಜಯಿಸುವರೆಂದು ಹೇಳಿದರೆ ತಪ್ಪಾಗುವದಿಲ್ಲ.

ಜರ್ಮನಿಯ ಬಗ್ಗೆ ತಿಕ್ಕಾಟ

೫ ರಾಷ್ಟ್ರಗಳಿಗೆ ಶಾಂತಿದಾನಮಾಡುವ ಪರಿಷತ್ತು ಕರೆಯಲು ಹೇಗಾದರೂ ಒಪ್ಪಿದ ವಿದೇಶಮಂತ್ರಿಗಳು ಕಳೆದವಾರ ತಮ್ಮ ಅಧಿವೇಶನ ಮುಗಿಸಿ ಹೋದಾಗ ಇನ್ನೂ ಒಡಕಿನ ನಡುವೆಯೇ ಬೇರಾದರು. ಜರ್ಮನಿಯ ಭವಿತವ್ಯವನ್ನು ಕುರಿತು ಅವರು ನಡೆಸಿದ ಚರ್ಚೆಯಿಂದ ಯಾವ ತೀರ್ಮಾನವೂ ಹೊರಡಲಿಲ್ಲ. ಜರ್ಮನಿಗಾಗಿ ಅಮೇರಿಕನ ವಿದೇಶ ಖಾತೆ ಸಿದ್ಧಗೊಳಿಸಿರುವ ಯೋಜನೆಯ ಮೇಲೆ ತೀಕ್ಷ್ಣ ಟೀಕೆಗಳಿಂದ ಚರ್ಚೆಯನ್ನು ಪ್ರಾರಂಭಿಸಿದ ಮೊಲೊಟೋವರು ಕೊನೆಗೂ ಜರ್ಮನಿಯನ್ನು “ಅರ್ಥಿಕ ದೃಷ್ಟಿಯಲ್ಲಿ ಅಖಂಡವೆಂದು ಪರಿಗಣಿಸಬೇಕು” ಎಂಬ ಬೇವಿನ್ನರ ಸೂಚನೆಗೆ ಒಪ್ಪದೆ ಹೋದರು. ಜರ್ಮನಿಯನ್ನು ಬೇಸಾಯಗಾರರಾಷ್ಟ್ರವಾಗಿ ಮಾಡಿಬಿಡಬೇಕೆಂಬಸೂಚನೆಯೂ ಅವರಿಗೆ ಮಾನ್ಯವಾಗಲಿಲ್ಲ.

ತೊಂದರೆಯೆಂದರೆ ಇಷ್ಟೆ: ದೈವಯೋಗದಿಂದ ರಶಿಯನ್ ಅಕ್ರಮಣ ಭಾಗದಲ್ಲಿ ಜರ್ಮನಿಯ ಸಮೃದ್ಧಭಾಗಗಳು ಸೇರಿಹೋಗಿವೆ ಮುಖ್ಯವಾಗಿ ಅಹಾರ ವಿಷಯದಲ್ಲಿ ಪೂರ್ವ ಜರ್ಮನಿ ಮಾತ್ರ ಸ್ವಯಂಪೂರ್ಣವಾಗಿದೆ. ಬ್ರಿಟಿಶ ಮತ್ತು ಅಮೇರಿಕನ್ ಭಾಗಗಳಲ್ಲಿ ಅಹಾರ ವಸ್ತುಗಳ ಕೊರತೆಯಿಂದ ಜನತೆಯ ಪೀಡೆ ಹೆಚ್ಚಾಗುತ್ತಿದೆ. ಅದ್ದರಿಂದ ಜರ್ಮನಿಯ ಬ್ರಿಟಿಶ ಆಕ್ರಮಿತ ಭಾಗದ ಹೊಟ್ಟೆ ತುಂಬಿಸಲು ವಿದೇಶ ಮಂತ್ರಿ ಬೆವಿನ್ನರು ಹೇಳಿದಂತೆ “ಬ್ರಿಟಿಶ ತೆರಿಗೆದಾರರನ್ನು ಸೂರೆ ಮಾಡಬೇಕಾಗುವದು” “ಇನ್ನು ನಾನು ಸಾಲತೆಗೆದು ಜರ್ಮನಿಯ ಹೊಟ್ಟೆ ಹೊರೆಯಲಾರೆ. ರಶಿಯನ್ನರು ಇಡಿ ಜರ್ಮನಿಯ ಆರ್ಥಿಕ ಅಖಂಡತೆಯನ್ನು ಒಪ್ಪದೆ ಹೋದರೆ ನಮ್ಮ ಆಕ್ರಮಣ ಪ್ರದೇಶದಲ್ಲಿ ಬೇರೆಯೆ ಆರ್ಥಿಕ ಧೋರಣೆಯನ್ನು ಪ್ರಾರಂಭಿಸಬೇಕಾಗುವದು” ಎಂದು ಹೇಳುತ್ತಾರೆ ಅವರು ಆದರೆ ಆರ್ಥಿಕ ಅಖಂಡತೆಯನ್ನೊಪ್ಪಿಕೊಂಡು ತಮ್ಮ ಭಾಗದಉತ್ಪಾದನೆಯಿಂದಆಂಗ್ಲೋ-ಅಮೇರಿಕನ್ನರ ತೊಂದರೆಗಳನ್ನು ನೀಗಿಸುವ ಔದಾರ್ಯ ಮೊಲಟೋವರಲ್ಲಿ, ಸಹಜವಾಗಿ, ಇಲ್ಲ. ಈ ತೊಂದರೆಯನ್ನು ಉಪಯೋಗಿಸಿಕೊಂಡು ತಮ್ಮ ಮಾತಿಗೆ ಪಾಶ್ಚಿಮಾತ್ಯ ಮಿತ್ರರು ಸ್ವಲ್ಪಾದರೂ ಬೆಲೆ ಕೊಡುವಂತೆ ಮಾಡುವ ಹವಣು ಅವರದು.

ಜರ್ಮನಿಯನ್ನು ವ್ಯವಸಾಯಪ್ರಧಾನ ರಾಷ್ಟ್ರವಾಗಿ ಮಾರ್ಪಡಿಸುವ ಯೋಜನೆಗೆ ರಶಿಯನ್ನರು ಸಮ್ಮತಿಸದಿದ್ದು ಹಲವರಿಗೆ ಆಶ್ಚರ್ಯವನ್ನುಂಟುಮಾಡಿದೆ. ಜರ್ಮನಿಯನ್ನು ಆ ನಿಟ್ಟಿಗೆ ಹಣಿಸದಿದ್ದರೆ ಅದು ಪುನಃ ಪ್ರಬಲವಾಗಿ ಶಾಂತಿಗೆ ಗಂಡಾಂತರ ತರಬಹುದೆಂಬ ಭಯ ವ್ಯಕ್ತಗೊಳಿಸಲ್ಪಟ್ಟಿದೆ. ಆದರೆ ಯುರೋಪಿನ ಆರ್ಥಿಕ ಪ್ರಗತಿಗೆ ಜರ್ಮನ್ ಉದ್ಯೋಗದ ಅವಶ್ಯಕತೆಯನ್ನು ಮನಗಂಡೋ ಅಥವಾ ಜರ್ಮನ್ ಜನತೆಯನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬೇಕೆಂಬ ಹವಣಿಕೆಯಿಂದಲೋ ರಶಿಯನ್ನರು ಅದಕ್ಕೆ ವಿರೋಧ ಮಾಡಿದ್ದಾರೆ.

ಇನ್ನು ಜರ್ಮನಿಯಲ್ಲಿ ಅಂಗ್ಲೋ — ಅಮೇರಿಕನ ಮತ್ತು ರಶಿಯನರ ಸಂಬಂಧ ಅಷ್ಟು ಸಮಂಜಸವಾಗಿ ಇಲ್ಲ. ಕಳೆದ ಅನೇಕ ವಾರಗಳಲ್ಲಿ ತಿಕ್ಕಾಟದ ಸುದ್ದಿಗಳೆಷ್ಟೋ ಬಂದಿವೆ. ಇದೀಗ ರಶಿಯನ್ ಪ್ರತಿಬಂಧಿತ ಪ್ರದೇಶದಲ್ಲಿ ಪ್ರವೇಶಿಸಿದ ಅಮೇರಿಕನ್ ಅಧಿಕಾರಿಗಳನ್ನು ರಶಿಯನ್ನರು ಬಂಧಿಸಿದ್ದರಿಂದ ಅಮೇರಿಕನ್ ಸೈನಿಕರ ಪ್ರತಿಷ್ಠಾನಗಳಲ್ಲಿ ಬೇಹುಗಾರಿಕೆ ಮಾಡಿದರೆಂದು ಇಬ್ಬರು ರಶಿಯನ್ ಅಧಿಕಾರಿಗಳನ್ನು ಅಮೇರಿಕನ್ನರು ಬಂಧಿಸಿ “ಅಜ್ಞಾತ ಸ್ಥಳಕ್ಕೆ” ಒಯ್ದಿದ್ದಾರೆ. ಇದರಿಂದ ಪ್ರಚಂಡ ಕ್ಷೋಭಜನಕ ಸಂಗತಿಗಳು ಹೊರಬೀಳಬಹುದೆಂದು ಭಾವಿಸಲಾಗಿದೆ.

ಮಿಕಲೋವಿಚಗೆ ಮರಣ

ಕಳೆದ ಮಹಾಯುದ್ಧದ ಅತ್ಯಂತ ದುರಂತ ಪ್ರಕರಣಗಳಲ್ಲೊಂದು ಯುಗೋಸ್ಲಾವಿಯಾದ ಚಿಟ್ನಿಕ ದೇಶಪ್ರೇಮಿಗಳ ನಾಯಕನಾದ ಜನರಲ್ ಮಿಕಲೊವೀಚನದು. ಮೊದಲನೆ ಮಹಾಯುದ್ಧದ ಕಾಲಕ್ಕೇ ಶೂರನೆಂದು ಪ್ರಸಿದ್ಧನಾಗಿದ್ದ ಇವನು ಯುಗೊಸ್ಲಾವಿಯಾದ ಮೇಲೆ ಹಿಟ್ಲರನ ದಾಳಿಯಾದಾಗ ಗುಡ್ಡಗಳಲ್ಲಿ ಅವಿತುಕೊಂಡು ಕೂಟಸೇನೆಯೊಂದನ್ನು ರಚಿಸಿಕೊಂಡು ಹೋರಾಡಿದನು. ಅವನಿಗೆ ಬ್ರಿಟಿಶರ ಸಹಾಯವೂ ಸಿಕ್ಕಿತು. ಅವನು ಯುಗೋಸ್ಲಾವಿಯಾದ ಭಾಗ್ಯವಿಧಾತನಾಗುವಂತೆ ತೋರುತಿದ್ದಾಗ ವಿಧಿ ತನ್ನ ಅನಿರೀಕ್ಷಿತ ಕೈವಾಡಗಳಲ್ಲೊಂದನ್ನು ಮಾಡಿ ಅವನನ್ನು ದೇಶದ್ರೋಹಿಯ ಪಾಡಿಗೆ ತಳ್ಳಿಬಿಟ್ಟಿತು. ಕಮ್ಯುನಿಸ್ಟ ಟಿಟೋನ ಪ್ರಸ್ಥ ಬೆಳೆಬೆಳೆದು ರಶಿಯನ್ನರ ಸಹಾಯದಿಂದ ಅವನು ಮಿಕಲೊವೀಚನಿಗಿಂತ ದೊಡ್ಡವನಾಗಿ ಎದ್ದು ನಿಂತನು. ಕಮ್ಯುನಿಸ್ಟರೆಂದರೆ ದ್ವೇಷವಿದ್ದ ಮಿಕಲೊವೀಚನು ಅವರನ್ನು ಹಣಿಯಲು ಜರ್ಮನ್ ಸಹಾಯ ಅಂಗೀಕರಿಸಿದನು ! ಅಂಗ್ಲೋ ಅಮೇರಿಕನ್ನರೂ ಅವನ ಕೈಬಿಟ್ಟರು. ಟಿಟೋಗೆ ಯುಗೊಸ್ಲಾವಿಯಾದ ಅದ್ವಿತೀಯ ನಾಯಕತ್ವ ಲಭಿಸಿತು. ಒಡನೆ ಅವನು ಮಿಕಲೊವೀಚನ ತಲೆ ಚಂಡಾಡಲು ಅತುರನಾಗಿ ಅವನನ್ನು ಅಂಜನ ಹಾಕಿ ಹುಡುಕಿ ಸೆರೆಹಿಡಿದು ಜರ್ಮನರೊಂದಿಗೆ ಸಹಕರಿಸಿ ದೇಶದ್ರೋಹ ಮಾಡಿದ ಆರೋಪವಿಟ್ಟನು. ನ್ಯಾಯಸ್ಥಾನದ ಮುಂದೆ ನಿಲ್ಲಿಸಲ್ಪಟ್ಟ ಅವನು ತನ್ನ ತಪ್ಪನ್ನು ಅರ್ಧಮರ್ಧ ಒಪ್ಪಿಕೊಂಡನು. ಅವನೂ ಅವನ ಅನುಯಾಯಿಗಳೂ ಮರಣ ದಂಡನೆಗೆ ಗುರಿಯಾಗಿ ತಾ. ೧೭ ಮುಂಜಾನೆ ಗುಂಡಿಗಾಹುತಿಯಾದರು. ಅವನ ಅನೇಕ ಸಹಯೋಗಿಗಳಿಗೆ ಶಿಕ್ಷೆಯಾಗಿದೆ.

ಯಹೂದ್ಯರಿಗೆ ಬಹಿಷ್ಕಾರ

ಯುರೋಪಿಯನ್ ಯಹೂದ್ಯರನ್ನು ಪಾಲಿಸ್ತಾನದಲ್ಲಿ ನೆಲೆಗೊಳಿಸುವ ವಿಷಯದಲ್ಲಿ ಆಂಗ್ಲೋ ಅಮೇರಿಕನ್ನರೊಳಗೆ ಇನ್ನೂ ನಿರ್ಣಯವಾಗದೆ ಇರುವಾಗ ಮತ್ತು ಪಾಲಿಸ್ತಾನ ಯಹೂದ್ಯರ ಗುಪ್ತ ಸಂಸ್ಥೆಯಾದ “ಹಗನಾ” ಇನ್ನೂ ತನ್ನ ವಿಘಾತಕ ಚಟುವಟಿಕೆಗಳಲ್ಲಿ ಪ್ರಸಕ್ತವಾಗಿರುವಾಗ ಅರಬ ವರಿಷ್ಠ ಸಮಿತಿಯವರು ಯಹೂದ್ಯರ ವಿರುದ್ಧ ಆರ್ಥಿಕ ಸಾಮಾಜಿಕ ಬಹಿಷ್ಕಾರದ ಕ್ರಮವನ್ನು ಕೈಕೊಳ್ಳಲು ನಿರ್ಧರಿಸಿರುವರು. ಯಹೂದ್ಯರು ಉತ್ಪಾದನ ಮಾಡಿದ ಯಾವದೇ ವಸ್ತುವನ್ನು ಅರಬರು ಕೊಳ್ಳಕೂಡದೆಂದೂ ಯಹೂದ್ಯರಿಂದ ಉತ್ಪಾದಿತವಾದ ವಸ್ತುಗಳ ಬದಲು ಅರಬರಿಂದ ಉತ್ಪಾದಿತವಾದ ವಸ್ತುಗಳಿಗೆ ಉತ್ತೇಜನ ಕೊಡಬೇಕೆಂದೂ ಅವರು ಅರಬರಿಗೆ ಆಜ್ಞಾಪಿಸಿದ್ದಾರೆ. ಈ ನಿಯಮವನ್ನು ಉಲ್ಲಂಘಿಸಿ ಯಹೂದ್ಯ ವಸ್ತುಗಳನ್ನು ಕೊಳ್ಳುವ ಅರಬರ ಹೆಸರುಗಳ [illegible] ಪತ್ರಿಕೆಗಳಲ್ಲಿ ಪ್ರಕಟಿಸಿ ಅವರನ್ನು ಅವಮಾನಕ್ಕೀಡುಮಾಡಲಾಗುವದೆಂದು [illegible] ಲಾಗಿದೆ.

ಕಮ್ಯುನಿಸ್ಟರ ಮೇಲೆ ದಾಳಿ

ಅರಬ ಜಗತ್ತಿನಲ್ಲಿ ಕಮ್ಯುನಿಸ್ಟರ ಮೇಲೆ ಉಗ್ರ ಕ್ರಮಗಳನ್ನು ಕೈಕೊಳ್ಳಲು ತೊಡಗಿದ್ದಾರೆ. ಇಜಿಪ್ತದಲ್ಲಿ ಈಚೆಗೆ ಕೆಲ ತಿಂಗಳುಗಳಿಂದ ನಡೆದಿರುವ ಬಾಂಬು ಸ್ಫೋಟ ಸತ್ರಗಳಿಗೆ ಕಮ್ಯುನಿಸ್ಟರೇ ಕಾರಣರೆಂದು ಮುಖ್ಯ ಮಂತ್ರಿ ಸಿದ್ಧಿಕಿ ಪಾಶಾ ಅವರು ಹೇಳಿದ್ದಾರೆ. ಕಮ್ಯುನಿಸ್ಟ್ ಮತ್ತು ಅವರೊಡನೆ ಉಗ್ರ ರಾಷ್ಟ್ರೀಯ ಪತ್ರಿಕೆಗಳ ಮೇಲೆ ಪ್ರತಿಬಂಧ, ಅನೇಕರ ಬಂಧನಗಳು ಈ ನೀತಿಯ ಅಂಗವಾಗಿ ಆಚರಣೆಗೆ ಬರುತ್ತಿವೆ. ಸದ್ಯದಲ್ಲಿಯೇ ಸಹಿ ಬೀಳಲಿರುವ ತಿದ್ದಿದ ಆಂಗ್ಲೋ ಇಜಿಪ್ಶನ್ ಒಡಂಬಡಿಕೆಯು ವಿರುದ್ಧವಾಗಿ ಹುಯಿಲೆದ್ದಿರುವದರಿಂದ ಜನರ ಲಕ್ಷ್ಯವನ್ನು ಬೇರೆಡೆಗೆ ಸೆಳೆಯಲು ಈ ಎಲ್ಲ ಕ್ರಮಗಳೆಂದು ವಿರೋಧಿ ಪಕ್ಷದವರು ಹೇಳತೊಡಗಿದ್ದಾರೆ. ಈ ಒಡಂಬಡಿಕೆಯಲ್ಲಿ ಸುದಾನವನ್ನು ಇಜಿಪ್ತಕ್ಕೆ ಒಪ್ಪಿಸುವ ಮಾತೇ ಇಲ್ಲ. ಇಜಿಪ್ತ, ಇಂಗ್ಲಂಡ ಇವುಗಳಲ್ಲಿ ಯಾವುದೊಂದರ ಮೇಲೆ ಮೂರನೆಯ ರಾಷ್ಟ್ರದ ದಾಳಿಯಾದರೆ ಶತ್ರುವನ್ನೆದುರಿಸಲು ಪರಸ್ಪರ ಸಹಾಯ ಮಾಡಬೇಕು. ಉಭಯತರಲ್ಲಿ ಯಾವುದೊಂದು ರಾಷ್ಟ್ರ ಈ ಒಪ್ಪಂದಕ್ಕೆ ಭಾಗ ಬರುವಂತೆ ಮೂರನೆ ರಾಷ್ಟ್ರದೊಡನೆ ಒಪ್ಪಂದಮಾಡಿಕೊಳ್ಳಕೂಡದು ಎಂದು ಮುಂತಾಗಿ ಒಪ್ಪಂದದಲ್ಲಿ ಹೇಳಲಾಗಿದೆ. ಈ ಒಪ್ಪಂದವನ್ನು ಹೇಗಾದರೂ ಮುರಿಯಬೇಕೆಂದು ರಾಷ್ಟ್ರೀಯವಾದಿ ವಫ್ದ ಪಕ್ಷ ಪ್ರಯತ್ನಿಸುತಿದೆ. ಇದುವರಿಂದ ಕಮ್ಯುನಿಸ್ಟರ ಭಯತೋರಿ ಇಜಿಪ್ತನ್ನರನ್ನು ತಮಗನುಕೂಲ ಮಾಡಿಕೊಳ್ಳಬೇಕೆಂದು ಮುಖ್ಯ ಮಂತ್ರಿ ಸಿದ್ದಿಕಿಯವರು ಹವಣಿಸುತಿರಬಹುದು. ಆದರೆ ಇದೇ ಬಗೆಯ ಕಮ್ಯುನಿಸ್ಟ್ ವಿರೋಧಿ ಸತ್ರ ಲೆಬನಾನದಲ್ಲಿಯೂ ಪ್ರಾರಂಭವಾಗಿದೆ. ಇದರ ಅರ್ಥ ಅರಬರು ಪುನಃ ಇಂಗ್ಲಂಡಿನ ಸೆರಗಿನ ನೆರಳನ್ನೆ ಆಶ್ರಯಿಸಲು ಪ್ರಯತ್ನಿಸುವವರೆಂದಾಗಬಹುದು. ತುರ್ಕಿಯಲ್ಲಿ ನಡೆದ ರಶಿಯಾ ವಿರೋಧಿ ಗುಂಪು ನಿರ್ಮಿಸುವ ಪ್ರಯತ್ನದ ಅಂಗವಾಗಿ ಈ ಕ್ರಿಯೆಗಳು ನಡೆದಿರಬಹುದು.

ಇಂಡೋನೇಶಿಯಾಕ್ಕೆ ವಿಶ್ವಾಸಘಾತ

ಇಂಡೋನೇಶಿಯಾದ ಪ್ರಜಾರಾಜ್ಯ ಸರಕಾರಕ್ಕೂ ಡಚ್ ಸರಕಾರಕ್ಕೂ ನಡುವೆ ನಡೆದ ಸಂಧಾನ ಇನ್ನೂ ಫಲಕಾರಿಯಾಗಿಲ್ಲ. ಡಚ್ಚರು ಬೇಕೆಂದೇ ಕಾಲಹರಣ ಮಾಡುತಿದ್ದಾರೆ. ಆದರೆ ಈ ಮಧ್ಯದಲ್ಲಿ ಬ್ರಿಟಿಶರು ಜಾವಾ ಸುಮಾತ್ರ ಮತ್ತು ರಿಯೋ ದ್ವೀಪಸಮೂಹಗಳನ್ನು ಬಿಟ್ಟು ಡಚ್ ಈಸ್ಟ್ ಇಂಡೀಜಗಳಿಂದ ಬ್ರಿಟಿಶ ಮತ್ತು ಹಿಂದೀ ಸೈನ್ಯಗಳನ್ನು ಪೂರ್ಣವಾಗಿ ಹಿಂತೆಗೆದುಕೊಳ್ಳಲಾಗಿದೆಯೆಂದು ಸಾರಿದ್ದಾರೆ. ಅಲ್ಲೆಲ್ಲ ಡಚ್ ಪಡೆಗಳು ಆಡಳಿತೆಯನ್ನು ವಹಿಸಿಕೊಂಡಿವೆ. ಜಾವಾ ಸುಮಾತ್ರಗಳಿಂದ ಬ್ರಿಟಿಶರು ಹೊರಟುಹೋಗುವದೊಂದು ಉಳಿದಿದೆ. ಅವರು ಅಲ್ಲಿಂದಲೂ ಹೊರಟು ಹೋದರೆಂದರೆ, ಮತ್ತೆ ಡಚ್ಚರಿಗೂ ಇಂಡೋನೇಶಿಯನ್ನರಿಗೂ ಯುದ್ಧ ನಿಶ್ಚಿತವೆಂದು ಇಂಡೋನೇಶಿಯನ್ ಪ್ರಜಾರಾಜ್ಯದ ಮುಖ್ಯ ಮಂತ್ರಿ ಶಹರೀರರು ಹೇಳಿಯೆಬಿಟ್ಟಿದ್ದಾರೆ. ಏಕೆಂದರೆ ಮಾತುಕತೆ ನಡೆಸುವ ನೋಗಿನಿಂದ ಕಾಲಹರಣ ಮಾಡಿ, ಹೊಸ ಹೊಸ ಡಚ್ಚ ಪಡೆಗಳನ್ನು ಇಂಡೋನೇಶಿಯಾದಲ್ಲಿ ತಂದಿಳಿಸುವ ವಿಶ್ವಾಸಘಾತಕ ಉದ್ದೇಶ ಡಚ್ಚರದೆಂಬುದು ಸ್ಪಷ್ಟವಾಗಿದೆ. ಆದರೆ ಬ್ರಿಟಿಶರು ಹೊರಟುಹೋಗಿ ಡಚ್ಚರ ಕೈಲಿ ಅಧಿಕಾರ ಕೊಟ್ಟರೆಂದ ಮಾತ್ರಕ್ಕೆ ಇಂಡೋನೇಶಿಯನ್ ಪ್ರಜಾರಾಜ್ಯ ಅವರಿಗೆ ಬೊಗ್ಗುವದಿಲ್ಲವೆಂದೂ ಇಂಡೋನೇಶಿಯನ್ ಮಂತ್ರಿಗಳು ಸ್ಪಷ್ಟಗೊಳಿಸಿದ್ದಾರೆ. ಬ್ರಿಟಿಶರು ಇಲ್ಲದಿದ್ದರೆ ಇನ್ನಾದರೂ ಡಚ್ಚರು ಇಂಡೋನೇಶಿಯನ್ನರನ್ನು ಏಕಾಕಿಯಾಗಿ ಎದುರಿಸಲಾರರು. ಆದರೆ ಇಂಡೋನೇಶಿಯನ್ನರಲ್ಲೇ ಅಂತಃಕಲಹವನ್ನು ಬಿತ್ತಲು ಕಳೆದ ಕೆಲದಿನಗಳಿಂದ ಪ್ರಯತ್ನಗಳಾಗಿದ್ದು, ಮಂತ್ರಿಗಳನ್ನು ಅಪಹರಿಸಿಕೊಂಡೊಯ್ದುದು ಅದರ ಅಂಗವಾಗಿತ್ತು. ಆದರೆ ಆ ತಂತ್ರವನ್ನು ಈಗ ಸಮೂಲವಾಗಿ ಕಿತ್ತೊಗೆಯಲಾಗಿದೆ. ಇದರಿಂದ ಇಂಡೋನೇಶಿಯನ್ನರು ಹಿಂದಿಗಿಂತಲೂ ಬಲಿಷ್ಠರಾಗಿರುವರು.

ಹೊರನಾಡು ಕನ್ನಡಿಗರಲ್ಲಿ ಹುಟ್ಟಿರುವ ಹುಮ್ಮಸು

(ಶ್ರೀ ಮುದವೀಡು ಕೃಷ್ಣರಾಯರು, ಧಾರವಾಡ)

ಈಗ ಹದಿನೈದು ದಿವಸಗಳ ಹಿಂದೆ ನನಗೊಂದು ಓಲೆ ಬಂತು. ಅವರಣದ ಮೇಲಿಂದ ಎಲ್ಲಿಯದೆಂಬುದು ತಿಳಿಯಲಿಲ್ಲ. ಅಂಚೆಯ ಮುದ್ರೆಯು ಸ್ಪಷ್ಟವಾಗಿ ಮೂಡಿರಲಿಲ್ಲ. ಮೇಲಾಗಿ ನನಗೆ ದೃಷ್ಟಿಮಾಂದ್ಯವೂ ವಯೋಮಾನಕ್ಕನುಸರಿಸಿ ಉಂಟಾಗಿರುವುದರಿಂದ ಸರಿಯಾಗಿ ಹೊಂದಿಸಿಕೊಂಡು ಓದಲೂ ತಿಳಿಯಲಿಲ್ಲ. ಒಡೆದು ನೋಡಿದನಂತರ ನನಗೇನೋ ವಿಚಿತ್ರವೆನಿಸಿತು. ಜಬ್ಬಲಪೂರದ ಪತ್ರ, ಅಲ್ಲಿಯ ಕರ್ನಾಟಕ ಸಂಘದ ಚಟುವಟಿಕೆಗಳನ್ನು ತಿಳಿಸಿ ತಮ್ಮ ಸಂಘದ ಕೈಬರಹದ ಮಾಸಪತ್ರಿಕೆಯ ವಾರ್ಷಿಕ ಸಂಚಿಕೆಯೊಂದನ್ನು ಬರುವ ಮೇ ತಿಂಗಳ ೫ ನೇ ತಾರೀಖಿಗೆ ಪ್ರಕಟಿಸುವ ಹಂಬಲವನ್ನು ಹೇಳಿ, ಅದಕ್ಕಾಗಿ ನಾನೊಂದು ಲೇಖವನ್ನು ಬರೆದು ಕಳಿಸಬೇಕೆಂದು ನನಗೆ ಬರೆದ ಪತ್ರ! ನನಗೆ ಅತ್ಯಂತ ಆಶ್ಚರ್ಯವಾಯಿತು.

ಜಬ್ಬಲಪೂರ! ಎಲ್ಲಿದೆ ಜಬ್ಬಲಪೂರ? ಎಂಬ ವಿಚಾರದಿಂದ ಒಂದೆರಡು ದಿನ ತಲೆ ಕೆಡಿಸಿಕೊಳ್ಳಬೇಕಾಯಿತು. ಕೊನೆಗೆ ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಮುಂಬಯಿಯಿಂದ ಹೊರಟ ಜಿ. ಆಯ್. ಪಿ. ರೇಲ್ವೆ ಮಾರ್ಗ ಜಬಲಪೂರದವರೆಗೆ ಹೋಗಿರುವದೆಂದು ಓದಿದ್ದು ನೆನಪಿಗೆ ಬಂತು. ಅಂದರೆ ಕಲಕತ್ತೆಯ ಅರ್ಧ ದಾರಿಯಿರಬೇಕೆಂಬ ಅನುಮಾನ ನನಗೆ ಹೊಳೆದದ್ದು. ಮುಂದೆ ೧೯೨೦ರಲ್ಲಿ ಕಾಂಗ್ರೆಸ್ ಘಟನಾವಳಿಯಲ್ಲಿ ಬದಲಾಗಿ ಕಾಂಗ್ರೆಸ್ಸಿನ ಆಡಳಿತೆಯ ಸುಲಭತೆಗಾಗಿ ಭಾಷಾನುಗುಣ ಪ್ರಾಂತಗಳಾದ ಸಂದರ್ಭದಲ್ಲಿ ನಮ್ಮ ಕರ್ನಾಟಕ, ಕನ್ನಡ ನಾಡು ಹೇಗೆ ಬೇರೆ ಪ್ರಾಂತವಾಯಿತೋ ಹಾಗೆಯೇ ಬ್ರಿಟಿಶರು ನಿರ್ಮಿಸಿದ "ಮಧ್ಯಪ್ರಾಂತ"(ಮರಾಠಿ) ಮತ್ತು ಮಧ್ಯಪ್ರಾಂತ (ಹಿಂದೀ) ಎಂಬ ಒಳವಿಭಾಗಗಳಾದದ್ದೂ ಈ ಹಿಂದೀ ಮಧ್ಯಪ್ರಾಂತಕ್ಕೆ ಜಬ್ಬಲಪೂರವು ಕೇಂದ್ರ ಕಾರ್ಯಾಲಯವಾಗಿ ನಿರ್ಮಿಸಿದ್ದೂ ಓದಿದಂತೆ ನೆನಪಿಗೆ ಬರುತ್ತದೆ. ಈಗಲೂ ಜಬ್ಬಲಪೂರಕ್ಕೆ ಆ ತನ್ನ ಸ್ಥಾನಮಾನಗಳುಂಟೋ ಇಲ್ಲವೋ ನಾನರಿಯೆನು. ಕಾಂಗ್ರೆಸ್ಸಿನ ಆಡಳಿತೆಯಲ್ಲಿಯೂ ಅಧಿಕಾರಸ್ಥಾನಗಳಲ್ಲಿ ವಿರಾಜಮಾನರಾದ ಮಹಾಶಯ ವ್ಯಕ್ತಿಗಳ ಮನದೊಲವು ನಿಲುವುಗಳ ಹೊಯ್ದಾಟದೊಂದಿಗೆ ಕೇಂದ್ರ ಕಾರ್ಯಾಲಯವೂ ಅತ್ತಿತ್ತ ಅಡ್ಡಾಡುವದು ನಮಗೆ ಕನ್ನಡಿಗರಿಗೆ ಅನುಭವದ ಮಾತಾಗಿದೆ. ಆದರೂ ಈಗಲೂ ಜಬ್ಬಲಪೂರವು ತನ್ನ ಸ್ಥಾನಮಾನಗಳನ್ನು ಯಥಾವತ್ತಾಗಿ ಕಾಯ್ದುಕೊಂಡ ನಗರವಾಗಿರಬೇಕೆಂದು ಭಾವಿಸಲು ಅಲ್ಲಿ ಕರ್ನಾಟಕ ಸಂಘವೊಂದಿರುವುದೂ ಅದರ ಚಟುವಟಿಕೆಗಳು ದಿನದಿನಕ್ಕೆ ಹೆಚ್ಚಾಗುತ್ತ ಸಾಗಿರುವುದೂ ನನಗೆ ತಿಳಿದ ಮೂಲಕ, ಅವಕಾಶವುಂಟಾಗಿ ನನಗೊಂದು ಬಗೆಯ ಹಿಗ್ಗಾಯಿತೆಂಬದನ್ನು ನಾನಿಲ್ಲಿ ಉಲ್ಲೇಖಿಸದಿರಲಾರೆನು.

ಕರ್ನಾಟಕದ ಹಿರಿಮೆ

ಕನ್ನಡ ಜನಾಂಗದ ಪುರಾತನತ್ವವನ್ನೂ ಪ್ರಾಚೀನ ವೈಭವದ ಹಿರಿಮೆಯನ್ನೂ ಪರಾಕ್ರಮದ ಪ್ರಭಾವವನ್ನೂ ಸಂಸ್ಕೃತಿಯ ಶ್ರೇಷ್ಠತೆಯನ್ನೂ ವಿವಿಧ ಕಲಾಕುಶಲತೆಯ ನೈಪುಣ್ಯವನ್ನೂ ಇಂದಿನ ಕನ್ನಡಿಗರಿಗೆ ತಿಳಿಸಬೇಕಾದ ಕಾಲವೀಗ ಉಳಿದಿಲ್ಲ. ಹಿಂದೊಮ್ಮೆ ಇಂಥ ಕೀಳ್ಗಾಲವು ನಮ್ಮನ್ನು ಆವರಿಸಿಕೊಂಡಿದ್ದುದನ್ನು ಈಗಿನ ತರುಣ ಪೀಳಿಗೆಯು ಅರಿಯದೆಂದು ಹೇಳಿದರೆ ತಪ್ಪಾಗಲಾರದು. ಕನ್ನಡ ನಾಡಿನಲ್ಲಿ ನಡುನಾಡಿನಲ್ಲಿ—ನೆಲಸಿದ್ದವರಾಗಲಿ, ಕನ್ನಡ ರಾಜ್ಯ ರಮಾರಮಣರೆಂದು ಕೀರ್ತಿವೆತ್ತ ವಿಜಯನಗರದ ರಾಯರ ಕರ್ನಾಟಕ ರತ್ನಸಿಂಹಾಸನಸ್ಥರೆಂಬ ಹೆಮ್ಮೆಯ ಬಿರುದನ್ನು ಅಳವಡಿಸಿಕೊಂಡಿರುವ ಮೈಸೂರ ಮಹಾರಾಜರ ರಾಜ್ಯದ ನಿವಾಸಿಗಳಾಗಲಿ, ದಕ್ಷಿಣೋತ್ತರ ಕನ್ನಡ ಜಿಲ್ಲೆಗಳೆಂಬ ಹೆಸರಿನಿಂದ ಹೊಸಗಾಲದ ಭೂವಿವರಣೆಯಲ್ಲಿ ವಿವರಿಸಲಾಗಿರುವ ಪಶ್ಚಿಮ ಕರಾವಳಿಯ ಕನ್ನಡನಾಡ ವಿಭಾಗದಲ್ಲಿರುವವರಿಗಾಗಲಿ, ತಾವು ಕನ್ನಡ ಜನಾಂಗಕ್ಕೆ ಅತಿ ಪುರಾತನ ಕಾಲದಿಂದಲೂ ಭಾರತೀಯ ಇತಿಹಾಸದಲ್ಲಿ ತನ್ನ ಹೆಸರನ್ನು ಅನೇಕ ಬಗೆಗಳಿಂದ ಸುಸ್ಥಿರಗೊಳಿಸಿ ಮೆರೆದು ಕೀರ್ತಿವಂತವಾಗಿದ್ದ ಕನ್ನಡ ಜನಾಂಗಕ್ಕೆ ಹೊಂದಿಕೊಂಡಿದ್ದವರೆಂಬ ತಿಳುವಳಿಕೆಯೂ ಇಲ್ಲದ ದುರಂತ ಕಾಲವೊಂದು ಹಿಂದೆ ಇದ್ದಿತೆಂಬದನ್ನು ಈಗಿನವರು ಸಹಸಾ ನಂಬಲಾರರು. ದೈವಾನುಗ್ರಹದಿಂದ ಇಂಥ ತಿಳುವಳಿಕೆ—ಹುಟ್ಟುವ ಕಾಲ ಈಗ ಸುಮಾರು ೫೦ ವರ್ಷಗಳ ಹಿಂದೆ ಉದಯಿಸಿದಾಗ ಇದನ್ನೇ ಸಾರುತ್ತ, ಕನ್ನಡ ಜನಾಂಗದಲ್ಲಿ ಸ್ವಾಭಿಮಾನ ಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿದ ನಾಡದಾಸರನ್ನು ಹುಚ್ಚರ ತಂಡವೆಂದು ಹೀಯಾಳಿಸುತ್ತ, ಉಪರೋಧಕ ನುಡಿಗಳಿಂದ ಅವರ ಯತ್ನಗಳನ್ನೆಲ್ಲ ಖಂಡಿಸುತ್ತ ಅನೇಕ ಬಗೆಗಳಿಂದ ಅವರ ತೇಜೋವಧೆ ಮಾಡಲು ಹಿಂಜರಿಯದ ಸುಶಿಕ್ಷಿತರೆನಿಸುವವರೂ ಸುಸಂಸ್ಕೃತರೆನಿಸುವವರೂ ಎಲ್ಲೆಲ್ಲಿಯೂ ತಂಡತಂಡವಾಗಿ ಕಂಡುಬರುತ್ತಿದ್ದರೆಂಬುದನ್ನು ಇಂದು ಹೇಳಿದರೆ ಕೇಳುವವರಿಗೆ ಆಶ್ಚರ್ಯವಾಗದಿರದು. ಇಂಥ ನಾಲ್ಕಾರು ಏಳೆಂಟು ಜನ ಹುಚ್ಚರ ತಲೆಯೊಳಗಿನ ಹುಚ್ಚು ಈಗಿನ ಕಾಲದಲ್ಲೆಲ್ಲರಲ್ಲಿಯೂ ಹಬ್ಬಿಕೊಂಡು ಎಲ್ಲೆಲ್ಲಿಯೂ ಹೆಚ್ಚಳವನ್ನೇ ಹೊಂದುತ್ತ ನಡೆದಿರುವದನ್ನು ಕಣ್ಣಾರೆ ಕಾಣುವ ಹಾಗೆ ಈ ಹೆಚ್ಚಳದ ಸುದ್ದಿಯನ್ನು ಕಿವಿಯಾರೆ ಕೇಳುವ ಸಂದರ್ಭವೊದಗಿದ ನನ್ನ ಭಾಗ್ಯಕ್ಕೆ ಎಣೆಯುಂಟೆ?

ಹೊರನಾಡುಗಳಲ್ಲಿ ಕರ್ನಾಟಕ ಸಂಘ

ಕನ್ನಡ ನಾಡಿನಲ್ಲಿದ್ದುಕೊಂಡು ಇಪ್ಪತ್ತಾಲ್ಕು ತಾಸುಗಳ ತಮ್ಮ ಚಟುವಟಿಕೆಗಳನ್ನು ಬಹುಶಃ ಕನ್ನಡ ವಾತಾವರಣದಲ್ಲಿ ಕನ್ನಡ ವಾಯುಮಂಡಲದಲ್ಲಿ, ಸಾಗಿಸುತ್ತಿರುವವರಲ್ಲಿ ಈ ಜಾಗೃತಿಯಾಗಿರುವುದೂ ಅದೂ ಬೆಳೆಯುತ್ತ ನಡೆದಿರುವುದೂ ಆಶ್ಚರ್ಯದ ಮಾತಲ್ಲ! ಆದರೆ ಕನ್ನಡ ನಾಡಿನ ಹೊರಗೆ ಯಾವ ದೇಶ ಕೋಶದಲ್ಲಿದ್ದರೂ ದಿನದೊಳಗಿನ ಬಹುಕಾಲವನ್ನು ಪರ ಭಾಷೆ ಪರಸಂಸ್ಕೃತಿಯವರ ಸಹವಾಸದಲ್ಲಿ, ಸಾಹಚರ್ಯದಲ್ಲಿ ಕಳೆಯುತ್ತಿದ್ದರೂ ಅಲ್ಲಲ್ಲಿ ಇದ್ದ ಕನ್ನಡಿಗರೆಲ್ಲ ಒಂದೇ ಗುಂಪಾಗಿ ಕೂಡಿ, ತಮ್ಮ ಜನಾಂಗದ ಅಸ್ತಿತ್ವವನ್ನು, ತಾವು ಕನ್ನಡಿಗರೆಂಬ ಹಿರಿಯ ಹೆಮ್ಮೆಯನ್ನು ಮರೆಯದಂತೆ ಕಾಪಾಡಿಕೊಳ್ಳುತ್ತ ನಡೆದಿರುವರೆಂಬುದೇ ಕನ್ನಡ ಜನಾಂಗದ ಭಾವೀ ಉತ್ಕರ್ಷದ ಸ್ಪಷ್ಟ ಚಿನ್ಹವಾಗಿದೆ. ಮದರಾಸ, ಮುಂಬಯಿ, ಪುಣೆ, ಕಾಶಿ, ಪ್ರಯಾಗ ಕಲಕತ್ತಾ, ದಿಲ್ಲಿ, ಕರಾಚಿ ಮೊದಲಾದ ರಾಜಧಾನಿ ಪಟ್ಟಣಗಳಲ್ಲಿ ಉದ್ಯೋಗ ವ್ಯವಸಾಯಗಳ ನಿಮಿತ್ತವಾಗಿ ಬಹುಜನ ಕನ್ನಡಿಗರು ನೆಲಸಿರುವುದೂ ಅವರು ತಮ್ಮ ಸಂಘಟನೆಗಾಗಿ ಪ್ರಯತ್ನಿಸುವುದೂ ಅಭಿನಂದನೀಯವೆಂಬುದೇನೊ ನಿಜ. ಆದರೆ ರತ್ನಾಗಿರಿ, ಸಾತಾರಾ, ಚಾಳಿಸಗಾಂವ, ಧುಳೆ, ನಾಶಿಕ, ಅಹಮ್ಮದನಗರ ಮೊದಲಾದ ಮಹಾರಾಷ್ಟ್ರದ ಜಿಲ್ಹೆಗಳಲ್ಲಿಯೂ ಉತ್ತರದ ಕ್ವೆಟ್ಟಾ, ಲಾಹೋರ, ಹರಿದ್ವಾರಗಳಲ್ಲಿಯೂ ಕರ್ನಾಟಕ ಸಂಘಗಳ ಉದಯವಾಗಿ ಅಲ್ಲಲ್ಲಿಯ ಕನ್ನಡಿಗರು ತಮ್ಮ ಕನ್ನಡತನವನ್ನು ಮರೆಯದಂತೆ ಪ್ರಯತ್ನಿಸುತ್ತಿರುವುದಂತೂ ಅತ್ಯಂತ ಹೃದಯಂಗಮವಾದ ಹರ್ಷೋದ್ರೇಕಕ್ಕೆ ಕಾರಣವಾದ ಸಂಗತಿಯಾಗಿದೆ. ಈ ಬಗೆಯ ಸ್ಪೃಹಣೀಯ ಆತ್ಮ ಜಾಗ್ರತಿಯು ಜಬ್ಬಲಪೂರದ ಕನ್ನಡಿಗರಲ್ಲಿಯೂ ಪ್ರಾದುರ್ಭಾವ ಹೊಂದಿರುವುದು ನನ್ನ ನಿದರ್ಶನಕ್ಕೆ ಬಂದುದರಿಂದ ನನಗಾದ ಆನಂದವು ಇಷ್ಟಿಷ್ಟೆಂದು ಹೇಳಲಾಸಲ್ಲ.

ಹೊರನಾಡ ಸಮ್ಮೇಲನ

ಕನ್ನಡ ನಾಡಿನಲ್ಲಿ ಕನ್ನಡತನದ ಎಚ್ಚರವನ್ನು ಬೆಳೆಯಿಸಲು ಕಿಚ್ಚನ್ನು ಕೆರಳಿಸಲು ಅನೇಕ ಬಗೆಯ ಸಾಂಸ್ಕೃತಿಕ ಚಟುವಟಿಕೆಗಳು ವರ್ಷಾನುವರ್ಷ ಅಖಂಡವಾಗಿ ನಡೆದಿರುತ್ತವೆಂದು ಹೇಳಬಹುದು. ಕಾಂಗ್ರೆಸ್ ಕಮಿಟಿಗಳ ಮುಖಾಂತರ ರಾಜಕೀಯ ಚಳವಳಿಯ ಆಂದೋಲನಗಳೆಲ್ಲವೂ ಬಹುಶಃ ಕನ್ನಡದ ಮೂಲಕವಾಗಿಯೇ ನಡೆಯುವವು. ಚರಖಾ ಸಂಘ ಮೊದಲಾದ ಉದ್ಯೋಗ ವ್ಯವಹಾರಸ್ಥರ ಸಂಘಗಳ ಕಾರ್ಯಕಲಾಪಗಳೆಲ್ಲವೂ ಕನ್ನಡದಲ್ಲಿ ಸಾಗುವವು. ಅಂದರೆ ಸಾಡಿನ ಜನಜೀವನದ ವಿವಿಧಾಂಗ ಚಟವಟಿಕೆಗಳೆಲ್ಲವೂ ಕನ್ನಡ ಮಯವಾಗುತ್ತ ನಡೆದಿರುವುದು ಭವಿಷ್ಯತ್ಕಾಲದ ಕನ್ನಡ ಜನಾಂಗಕ್ಕೊಂದು ಶುಭ ಸೂಚನೆಯೇ ಸರಿ. ಆದರೆ ಕರ್ನಾಟಕದ ಹೊರಗೆ ಕನ್ನಡಿಗನೆಲ್ಲಿದ್ದರೂ ತನ್ನ ಕನ್ನಡತನವನ್ನು ಪ್ರಯತ್ನಪೂರ್ವಕವಾಗಿ ಕಾಯ್ದುಕೊಳ್ಳಬೇಕಾಗುತ್ತದೆ. ಕರ್ನಾಟಕದ ಗಡಿನಾಡುಗಳ ಕನ್ನಡಿಗರೆಷ್ಟೋ ಜನರು ತಮ್ಮ ಕನ್ನಡತನವನ್ನು ಕಾಯ್ದುಕೊಳ್ಳುವ ಎಚ್ಚರವಿಲ್ಲದೆ ತಮ್ಮ ಜನಾಂಗದ ಅಸ್ತಿತ್ವವನ್ನೇ ಮರೆತು ತಾವೂ ತಮ್ಮ ಕುಟುಂಬವೂ ಮುಂದೆ ತಮ್ಮ ವಂಶವೂ ಕನ್ನಡ ನಾಡಿಗೆ ಎರವಾಗುವಂತೆ ಸಂದರ್ಭವನ್ನುಂಟು ಮಾಡಿದ ದೃಷ್ಟಾಂತಗಳಿಗೂ ಕೊರತೆಯಿಲ್ಲ. ಈ ಬಗೆಯ ಅಪಕರ್ಷಕ್ಕೆ ಹ್ರಾಸಕ್ಕೆ ಇನ್ನು ಮುಂದಾದರೂ ಕನ್ನಡ ಜನಾಂಗವು ಗುರಿಯಾಗದಂತೆ ಹೊರನಾಡುಗಳಲ್ಲಿ ನೆಲೆಸಿರುವ ಕನ್ನಡಿಗರೂ ಜಾಗ್ರತರಾದದ್ದು ಮತ್ತೊಂದು ಶುಭ ಸೂಚನೆಯೇ ಸರಿ. ಈ ವಿಷಯವನ್ನು ಎಲ್ಲೆಲ್ಲಿಯೂ ಕನ್ನಡ ಕುಲಜರೆಂಬ ಅಭಿಮಾನದಿಂದ ಬಾಳುವೆ ಸಾಗಿಸುತ್ತಿರುವವರೆಲ್ಲರೂ ಮನಗಂಡ ಮೂಲಕವಾಗಿಯೇ ಎಲ್ಲಿದ್ದರಲ್ಲಿ ಕನ್ನಡಿಗರ ಕನ್ನಡತನವು ಮರೆಯದಂತೆ ಮಾಡುವದಕ್ಕಾಗಿಯೇ "ಹೊರನಾಡ ಕನ್ನಡಿಗರ ಸಮ್ಮೇಲನ"ವನ್ನು ಕೂಡಿಸುವ ಉಪಕ್ರಮವು ಈಗ ಎರಡು ವರ್ಷಗಳಿಂದ ಕೈಕೊಳ್ಳಲಾದದ್ದು ಅತ್ಯಂತ ಇಷ್ಟವಾದದ್ದೆಂದು ಬೇರೆ ಹೇಳಬೇಕೆ?

ಕನ್ನಡ ಕುಲಜರ ವಿಶ್ವಕೋಶ

"ಹೊರನಾಡ ಕನ್ನಡಿಗರು" ಎಂಬ ಶಬ್ದಸಮುಚ್ಚಯದಲ್ಲಿ ಕರ್ನಾಟಕದ ಹೊರಗೆ-ಆದರೂ ಹಿಂದುಸ್ಥಾನದ ಒಳಗೆ ಬೇರೆಬೇರೆ ಪ್ರಾಂತಗಳಲ್ಲಿರುವ ಕನ್ನಡಿಗರೆಂಬ ಭಾವವು ಸಕೃದ್ದರ್ಶನಕ್ಕೆ ಕಣ್ಣಿಗೆ ಕಟ್ಟತಕ್ಕ ಸಂಭವವುಂಟು. ಇದೂ ಒಂದು ಬಗೆಯಿಂದ ಸಂಕುಚಿತ ದೃಷ್ಟಿ-ಆಕುಂಚಿತ ಮನೋವೃತ್ತಿ ಇವುಗಳ ಪ್ರಭಾವವಾಗಬಹುದು. ನಾವು ಇದನ್ನೆಲ್ಲ ದಾಟಿ ಈಗಿನ ವಿಶಾಲವಾದ ಜಗತ್ತಿನಲ್ಲಿ ಕನ್ನಡಿಗರಲ್ಲಿರೆದ್ದರೂ ಅವರನ್ನೆಲ್ಲ "ಹೊರನಾಡ ಕನ್ನಡಿಗ"ರಲ್ಲಿ ಅಂತರ್ಭೂತರಾಗಿ ಮಾಡುವ ಸದ್ಭಾವನೆಯೂ ಎಚ್ಚರವೂ ನಮ್ಮಲ್ಲಿ ಬೇಕಾಗಿದೆ. ಮೊನ್ನಿನ ಮಹಾಯುದ್ಧದ ಕಾಲಕ್ಕೆ ಮಲಯಾ, ಸಿಂಗಾಪೂರ, ಸಯಾಮ ಬ್ರಹ್ಮದೇಶ ಮೊದಲಾದೆಡೆಗಳಲ್ಲಿ ಭಾರತೀಯ ಯೋಧರು "ಆಜಾದ ಹಿಂದ ಸೇನೆ"ಯನ್ನು ನಿರ್ಮಾಣ ಮಾಡಿ ನೇತಾಜಿ ಸುಭಾಸ ಬೋಸರ ಅಧಿಪತ್ಯದಲ್ಲಿ ಭಾರತೀಯ ಸ್ವಾತಂತ್ರ್ಯದ ಹೋರಾಟವನ್ನು ಸಾಗಿಸಿದ ಧೀರ ವೀರ ದಂಡಾಳುಗಳಲ್ಲಿ ಬಹುಜನ ಕನ್ನಡಿಗರಿರುವುದು ತಿಳಿದು ಬಂದಿದೆ. ಹಾಗೆಯೇ ವಿದ್ಯಮಾನ ಜಗತ್ತಿನಲ್ಲೆಲ್ಲಕಡೆಗೂ ಕನ್ನಡಿಗರೆಂಬವರು ಒಂದಿಲ್ಲೊಂದು ಕಾರಣದಿಂದ ಹೋಗಿ ನೆಲಿಸಿರುವುದೂ ಉಂಟು. ಇಂಥವರೆಲ್ಲರ್ಲಿ ಇದ್ದರೂ ಅವರನ್ನೆಲ್ಲ ನಮ್ಮವರು ಕನ್ನಡಿಗರೆಂಬ ಕಕಲಾತಿಯಿಂದ, ಅಭಿಮಾನದಿಂದ ನಾವು ನಮ್ಮ ಹೊರನಾಡ ಕನ್ನಡಿಗರ ಸಮ್ಮೇಲನಗಳಲ್ಲಿ ಕಲೆಹಾಕಲು ಪ್ರಯತ್ನ ಮಾಡುವದು ಅತ್ಯಂತ ಅವಶ್ಯಕವೂ ಅಗತ್ಯವೂ ಆಗಿದೆ. ಈ ಬಗೆಯ ಪ್ರಯತ್ನಕ್ಕೆ ಪೂರ್ವಭಾವಿಯಾಗಿ ಎಲ್ಲೆಲ್ಲಿಯೂ ಯಾವ ಕನ್ನಡಿಗರು, ಕನ್ನಡ ಕುಟುಂಬಗಳು, ನೆಲೆಸಿರುವವೆಂಬ ಸಂಶೋಧನೆಯು ಕೂಲಂಕಷವಾಗಿ ನಡೆದು "ಕನ್ನಡ ಕುಲಜರ ವಿಶ್ವಕೋಶ" ವೊಂದನ್ನು ನಿರ್ಮಾಣ ಮಾಡಲು ಯಾವ ಪುಣ್ಯಪುರುಷರಾದರೂ ಸಾಹಸ ಮಾಡಲು ಅಣಿಯಾದರೆ ನಮ್ಮ ನಾಡೂ ನಾಡವರೂ ಎಲ್ಲ ಬಗೆಯ ನೆರವು ನೀಡಲು ಹಿಂದಾಗರೆಂದು ನನ್ನ ಎಣಿಕೆ. ಮೇಲೆ ಸರ್ವಶಕ್ತಿಸಮನ್ವಿತನಾದ ಭಗವಂತನ ಅನುಗ್ರಹದಿಂದ ಕನ್ನಡ ನಾಡಿನ ಹೊಸ ಹುರುಪಿನ ತರುಣರು ಮುಂದಾಗಿ ತಾವಿದ್ದಲ್ಲೆಲ್ಲ ಈ ಕೆಲಸವನ್ನು ಕೈಕೊಂಡು ಮುಂದಿನ ಆಲೋಚನೆಯಿಂದ ಸುಸಂಘಟಿತರಾಗಿ ಕಾರ್ಯ ಸಾಗಿಸಬೇಕು. ಯಾವುದೇ ಮಹತ್ಕಾರ್ಯವೆಂದು ಮೊದಲು ತೋರಿದರೂ ಸತತವಾದ ಸುಸಂಘಟಿತವಾದ ಪ್ರಯತ್ನದಿಂದ ಸುಲಭವಾಗಿ ಸಾಧ್ಯವಾಗದಿರದಷ್ಟೇ?

(ಜಬ್ಬಲಪುರ "ಕರ್ನಾಟಕ ಸಂಘದ ಮಾಸಪತ್ರಿಕೆ" ಯ ಮೊದಲನೆಯ ವಾರ್ಷಿಕ ಸಂಚಿಕೆಯಲ್ಲಿ-ಮೇ ೧೯೪೬ ರ ಮೊದಲು ಪ್ರಕಟಿಸಲ್ಪಟ್ಟಿತು. —ಸಂ)

ಬರಗಾಲವು ಹಿಂದುಸ್ತಾನದಲ್ಲಿ ತಾಂಡವವಾಡುತ್ತದೆ. ಯೋಗ್ಯ ಮುಂಜಾಗ್ರತೆ ತೆಗೆದುಕೊಳ್ಳದಿದ್ದರೆ ಭಾರತಕ್ಕೆ ಅನರ್ಥವುಂಟಾಗುವದು ನಿಶ್ಚಿತ. ಉಪವಾಸಮಾರಿಗೆ ೧೦ ಕೋಟಿ ಜನ ತುತ್ತಾಗುವ ಸಂಭವವಿದೆ. ಇತರ ರಾಷ್ಟ್ರಗಳಿಗೆ ಅಮೇರಿಕೆಯ ಆಹಾರ ಬೇಕಾಗಿರುವುದೇನೋ ನಿಜ. ಆದರೆ ನಾವು ಹಿಂದುಸ್ತಾನದ ಬೇಡಿಕೆಯನ್ನು ಪೂರೈಸಿದ ನಂತರ ಇತರ ರಾಷ್ಟ್ರಗಳ ಕಡೆಗೆ ಗಮನ ಕೊಡುವದು ಅತ್ಯವಶ್ಯವಿದೆಂದು ಮುಂತಾಗಿ ನ್ಯೂಯಾರ್ಕ ಟಾಯಿಮ್ಸ ಬರೆಯುತಿದೆ.

* * *

ಇಂಡೋನೇಶಿಯ ಸರಕಾರವು ಭಾರತಕ್ಕೆ ಈ ತಿಂಗಳಲ್ಲಿ ೬೫ ಸಾವಿರ ಟನ್ ಭತ್ತವನ್ನು ಕಳಿಸುವದು. ಈ ಆಯಾತವಾಗುವ ಭತ್ತದಲ್ಲಿ ಬಂಗಾಲಕ್ಕೆ ಹೆಚ್ಚು ಪಾಲು ದೊರೆಯುವದು.

* * *

ರಂಗೂನದಲ್ಲಿ ನಡೆದಿರುವ ಮಣಿಲಾಲ ದೋಸಿಯವರ ಖಟ್ಲೆಯಲ್ಲಿ ವಕಾಲತ್ತು ವಹಿಸಿದ ಶ್ರೀ ನರಿಮಾನರು ಬೇರೆ ಹಾಯಕೋರ್ಟಿನ ವಕೀಲರಾದ್ದರಿಂದ ಬ್ರಹ್ಮದೇಶದಲ್ಲಿ ಖಟ್ಲೆ ನಡೆಸಲಾರರೆಂಬ ಆಕ್ಷೇಪವೆತ್ತಲ್ಪಟ್ಟದ್ದರಿಂದ ಅವರು ತಮ್ಮ ವಕಾಲತ್ತನ್ನು ಹಿಂತೆಗೆದುಕೊಂಡರು. ಪಂಡಿತ ಜವಾಹರಲಾಲರು ಬ್ಯಾ. ಶರಚ್ಚಂದ್ರ ಬೋಸರಿಗೆ ರಂಗೂನಕ್ಕೆ ಹೋಗಲು ಬಿನ್ನವಿಸಿಕೊಂಡಿದ್ದು ಅವರು ಅಲ್ಲಿಗೆ ಹೋಗಲಿರುವರು.

ಕರ್ಮವೀರ

ಹರಿಜನ ಪುರವಣಿ

ನಗರಗಳಲ್ಲಿ ಖಾದಿ

"ಬಟ್ಟೆಗಳ ಸಂಬಂಧದಲ್ಲಿ ಹಿಂದುಸ್ತಾನದ ಹಳ್ಳಿಗಳನ್ನು ಸ್ವಾವಲಂಬಿ ಮಾಡಬೇಕೆಂಬ ನಿಮ್ಮ ಯೋಜನೆಯಿಂದ ನಗರಗಳಲ್ಲಿಯ ಖಾದೀಪ್ರೇಮಿಗಳಿಗೆ ಬಹಳ ಅಡಚಣಿಯಾಗಿದೆ. ಖಾದೀ ಮಾರಾಟದ ಅಂಗಡಿಗಳನ್ನು ಕೂಡ ಮುಚ್ಚಿ ಬಿಡಿರೆಂದೂ ನಗರವಾಸಿಗಳು ಬೇಕಾದರೆ ಗಿರಣಿ ಬಟ್ಟೆ ಉಪಯೋಗ ಮಾಡಲೆಂದು ಕೂಡ ನೀವು ಹೇಳಿರುವಿರಿ.

"ಹೊಸ ಧ್ಯೇಯ ಧೋರಣದ ಬಗ್ಗೆ ನನ್ನದೇನೂ ವಾದವಿರುವುದಿಲ್ಲ. ಭಾಂಡಾರಗಳನ್ನು ನಡಿಸುವ ರೀತಿಯಲ್ಲಿಯ ಬದಲಾವಣೆಯ ಬಗ್ಗೆಯೂ ನನ್ನ ಆಕ್ಷೇಪವಿಲ್ಲ. ಖಾದೀ ಕೊಳ್ಳಬೇಕಾದರೆ ಇಂತಿಷ್ಟು ನೂಲು ಕೊಡಬೇಕೆಂದು ಗೊತ್ತುಪಡಿಸಿದ್ದನ್ನೂ ನಾನು ಪ್ರಶ್ನಿಸಲಾರೆ. ಆದರೆ ನಗರವಾಸಿಗಳ ಅಡಚಣಿಯನ್ನು ನೀವು ನಿವಾರಿಸಲಿಕ್ಕೆ ಬೇಕು. ಅವರು ಕೇವಲ ಖಾದಿಯನ್ನೆ ಕೊಳ್ಳುವಂತೆ ಏರ್ಪಡಿಸಬೇಕು."

ಖಾದಿಯ ಬಗ್ಗೆ ಹೊಸ ಯೋಜನೆಯೊಂದು ಕರೆಯಲಾಗುತಿರುವ ಬಗ್ಗೆ ಯೋಜನೆಯನ್ನು ವಾಚಕರು ಸಂಪೂರ್ಣವಾಗಿ ತಿಳಿದುಕೊಳ್ಳಲಿಕ್ಕೆ ಬೇಕು. ನಾನು ಅದಕ್ಕೆ 'ಕರೆಯಿಸಿಕೊಳ್ಳಲ್ಪಡುತಿರುವ' ಎಂಬದಾಗಿ ಬೇಕೆಂತಲೆ ಹೇಳುತಿರುವೆನು ಏಕೆಂದರೆ ಮೊದಲಿನಿಂದಲೂ ಇದ್ದ ಉದ್ದೇಶದಂತೆ ಹಳ್ಳಿಗರಿಗೆಲ್ಲ ಖಾದಿ ಬಟ್ಟೆ ಸಿಕ್ಕಬೇಕಾಗಿದ್ದರೆ ಇದೇ ಯೋಗ್ಯವಾದ ಮಾರ್ಗವು. ಕೇವಲ ನಗರವಾಸಿಗಳಿಗಾಗಿಯೆಂದೇ ಖಾದಿಯ ಉದ್ದೇಶವೆಂದೂ ಇರಲಿಲ್ಲ. ನಗರವಾಸಿಗಳು ಬದುಕಬೇಕೆಂದು ಹಳ್ಳಿಗರನ್ನು ಹಿಂಡಿ ಹಿಪ್ಪೆ ಮಾಡುವಂತೆ ಈ ಸಂದರ್ಭದಲ್ಲಿಯೂ ಆಗಬಾರದೆಂದು ಮೊದಲಿನಿಂದಲೂ ಉದ್ದೇಶವಿದ್ದಿತು. ಈಗಿನ ಕ್ರಮವನ್ನು ಪರಿವರ್ತಿಸುವ ಉದ್ದೇಶವೇ ಪ್ರಾರಂಭದಿಂದಲೂ ಖಾದಿಯದಾಗಿತ್ತು. ಆದರೆ ನಗರವಾಸಿಗಳನ್ನು ಶೋಷಿಸುವ ಉದ್ದೇಶ ಮಾತ್ರ ಅದರಲ್ಲಿರಲಿಲ್ಲ. ಕ್ರಮವನ್ನು ಪರಿವರ್ತಿಸುವದೆಂದರೆ ಸ್ವಾಭಾವಿಕ ಸಂಬಂಧಕ್ಕೆ ತರುವದು. ಬ್ರಿಟಿಶರು ಬರುವ ಮೊದಲು ನಗರಗಳಿದ್ದವು. ಅಗ ಪರಿಸ್ಥಿತಿ ಸಾಕಷ್ಟು ದುರಂತವಾಗಿತ್ತು. ಈಗ ಅದಕ್ಕಿಂತಲೂ ನಿಕೃಷ್ಟ ಪರಿಸ್ಥಿತಿಯುಂಟಾಗಿದೆ. ನಗರಗಳು ದೊಡ್ಡ ನಗರಗಳಲ್ಲಿಯಾದರೂ ಹಿಂದೀ ಕೋಟ್ಯಧೀಶರಿದ್ದರೂ ಕೇವಲ ಬ್ರಿಟಿಶ ಒಡೆಯರಿಗಾಗಿಯೆ ಅವುಗಳ ಅಸ್ತಿತ್ವ. ಈ ಗಂಭೀರ ಕೇಡನ್ನು ತಪ್ಪಿಸುವದೇ ಖಾದಿಯ ಉದ್ದೇಶವಾಗಿದೆ. ಗಿರಣಿ ಬಟ್ಟೆ ಹಳ್ಳಿ ಹಿಂದುಸ್ತಾನದ ದಾಸ್ಯದ ಪ್ರತೀಕ. ಖಾದಿಯು ಹಳ್ಳಿ ಹಿಂದುಸ್ತಾನದ ಸ್ವಾತಂತ್ರ್ಯದ, ಅರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಪ್ರತೀಕವಾಗಿದೆ; ಅಗಿರತಕ್ಕದ್ದು ಅದು ಹಾಗಾಗದಿದ್ದರೆ ನಿರರ್ಥಕ. ಅದುದರಿಂದ ಖಾದಿಯ ಅಭಿವೃದ್ಧಿಯ ವಿಧಾನದಲ್ಲಿ ಇದು ಒಳ್ಳೆ ಬದಲಾವಣೆ ಯಾವಾಗಲೂ ಸ್ವಾಗತಾರ್ಹವಾಗಿದೆ.

ಈಗಿದ್ದ ಅಭಿವೃದ್ಧಿಯ ಯೋಜನೆ ಚೆನ್ನಾಗಿತ್ತು ಆದರಲ್ಲಿ ಒಂದು ಬಗೆಯ ದೋಷವಿದ್ದಿತು ಹಳ್ಳಿಗರಿಗೆ ಅದು ಸಾಕಷ್ಟು ಕಲ್ಯಾಣಕರವಾಗಿದ್ದಿಲ್ಲ. ಸ್ವತಃ ನೂಲು ತೆಗೆದು ಬಟ್ಟೆ ನೆಯ್ದುಕೊಂಡು ಹಳ್ಳಿಗಳು ತಮ್ಮ ಸಲುವಾಗಿಯೆ ಉಪಯೋಗಿಸುತಿದ್ದಿಲ್ಲ ಖಾದಿ ಧರಿಸುವದರಲ್ಲಿರುವ ಮಹತ್ವ ಮತ್ತು ಮರ್ಯಾದೆ ಪ್ರತಿಷ್ಠೆಗಳ ಅರಿವು ಅವರಿಗಿರಲಿಲ್ಲ. ಅಬಗ್ಗೆ ಅಭಿಮಾನವೂ ಇರಲಿಲ್ಲ. ಅದರ ತಪ್ಪು ಅವರದೇನು ಅಲ್ಲ. ಕಾರ್ಯಕರ್ತರೂ ಹಾಗೆ ಮಾಡುತಿರಲಿಲ್ಲ, ನಗರವಾಸಿಗಳು ಖಾದಿಗಳನ್ನು ಧರಿಸಿ ತಪಸ್ಸನ್ನಾಚರಿಸಬೇಕು. ಕೆಲ ಹೆಚ್ಚು ಹಣಕ್ಕಾಗಿ ಅವರು ತಪಸ್ಸನ್ನು ಮಾರಲಿಕ್ಕೆ ತೆಗೆದುಕೊಳ್ಳಲು ಸಿದ್ಧರಿದ್ದರು. ಅಷ್ಟು ಹಣವನ್ನು ಅವರು ಬೇಕಾದ ಹಾಗೆ ಉಳಿಸಬಹುದಿತ್ತು. ಮತ್ತು ಆ ವ್ಯವಹಾರದಲ್ಲಿ ದೇಶಾಭಿಮಾನಿಗಳೆಂದೂ ಅವರು ಕರೆಯಿಸಿಕೊಳ್ಳಲ್ಪಡುತಿದ್ದರು. ಆದರೆ ಅಖಿಲ ಭಾರತ ಚರಕ ಸಂಘ (ಇಂಗ್ಲಿಷಿನಲ್ಲಿ ಅಲ್ ಇಂಡಿಯಾ ಸ್ಪಿನರ್ಸ ಅಸೋಸಿಯೇಶನ್) ಖಾದಿಯ ತಳಹದಿಯನ್ನೇ ಅಲಕ್ಷಿಸಿ ತನ್ನ ಧರ್ಮವನ್ನು ಅಲ್ಲಗಳೆಯ ಬಲ್ಲುದು? ಆದುದರಿಂದ ಸ್ವಾಭಾವಿಕವಾಗಿ ಸಂಘ ಹಳ್ಳಿಗರನ್ನು ಖಾದಿಮಯ ಮಾಡಬೇಕೆಂದು ತನ್ನ ಸಾಧನ ಸಂಪತ್ತನ್ನೆಲ್ಲ ಉಪಯೋಗಿಸುತಿದೆ. ಸ್ವಾಭಾವಿಕವಾಗಿಯೆ ಕೈನೂಲಿನ ನೂಲುಗಾರರ ಮತ್ತು ನೇಕಾರರಿಂದಲೆ ತನ್ನ ಕಾರ್ಯವನ್ನು ಪ್ರಾರಂಭಿಸಿದರೆ ಅದು ಯಶಸ್ವಿಯಾದರೆ, ಯಶಸ್ವಿಯಾಗುವಲ್ಲಿ ಸಂದೇಹವಿಲ್ಲ, ಕೆಲದಿನಗಳ ನಂತರ ನಗರ ಮತ್ತು ಗ್ರಾಮಗಳ ಪೇಟೆಗಳಲ್ಲಿ ಬೇಕಾದಷ್ಟು ಖಾದಿ ಸಿಕ್ಕುವದು. ಆ ನಂತರ ಹಿಂದುಸ್ತಾನದಲ್ಲಿ ಸಿಕ್ಕುವ ಬಟ್ಟೆಯೆಂದರೆ ಖಾದಿಯೊಂದೇ ಆಗುವದು ಅದು ಸಾಧ್ಯವಾಗಬೇಕೆಂದು ಎ. ಆಯ. ಎಸ್. ಎ. ದವರು ದಕ್ಷತೆಯಿಂದ ಕಾರ್ಯ ಮಾಡುತಿರುವರು. ಖಾದಿಯಲ್ಲಿ ಅಷ್ಟೊಂದು ಸಾಮರ್ಥ್ಯವಿಲ್ಲೆಂದು ಕಂಡುಬಂದದ್ದಾದರೆ ಈ ಕೆಲಸ ತನ್ನಿಂದ ಸಾಧ್ಯವಿಲ್ಲೆಂದು ಹೇಳಲು ಸಂಘವು ಹಿಂದೆ ಮುಂದೆ ನೋಡಲಿಕ್ಕಿಲ್ಲ. ಸದ್ಯದ ಯಂತ್ರಯುಗದಲ್ಲಿ ನಾಲ್ವತ್ತು ಕೋಟಿ ಜನರ ಮಾನಸಶಾಸ್ತ್ರವನ್ನೊಳಗೊಂಡ ಶಾಸ್ತ್ರವಿದೆಂಬುದನ್ನು ವಾಚಕರು ನೆನಪಿನಲ್ಲಿಡತಕ್ಕದ್ದು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಇದೊಂದು ದೊಡ್ಡ ಸಮಸ್ಯೆಯೆ ಆಗಿದೆ, ಆದರೂ ಇದೊಳ್ಳೆವ ನರಂಜಕ ಮತ್ತು ಉತ್ಸಾಹಪರ ಸಮಸ್ಯೆ. ಅಯಶಸ್ಸೆಂಬದೇನಾದರೂ ಇದ್ದರೆ ಅದೇನು ಅಪಜಯವಾಗಲಾರದು. ರಾಟಿಯು ಜನಸಾಮಾನ್ಯರ ದಾಸ್ಯದ ಪ್ರತೀಕವಾಗಿದ್ದ ಪ್ರಾಚೀನ ಯುಗಕ್ಕೆ ಮರಳಿ ಹೋಗುವ ಪ್ರಯತ್ನವಿದಲ್ಲೆಂಬದನ್ನು ತಿಳಿಯತಕ್ಕದ್ದು. ನಿಜವಾಗಿಯೂ ಮಾನವ ತಿಳುವಳಿಕೆಯ ವಿಜಯವದು. ಹಿಂದುಸ್ತಾನವು ರಾಟಿಯ ಮಾರ್ಗವಾಗಿ ತನ್ನ ದಾಸ್ಯಶೃಂಖಲೆಗಳನ್ನು ಹರಿದೊಗೆದರೆ ಹಿಂದುಸ್ತಾನದ ಅತ್ಮಶಕ್ತಿಯ ವಿಜಯವೇ ಸೈ. ಸ್ವತಂತ್ರ ಮನುಷ್ಯರೂ ಗುಲಾಮರಂತೆ ರೊಟ್ಟಿಯನ್ನೇ ತಿನ್ನುವರು. ಆದರೆ ಒಬ್ಬನು ಸ್ವಾತಂತ್ರ್ಯದ ಸುಖವನ್ನನುಭವಿಸಿದರೆ ಮತ್ತೊಬ್ಬನು ಗುಲಾಮಗಿರಿಯ ತಾಪವನ್ನು ಅನುಭೋಗಿಸುವನು.

ಆದರೆ ನಗರವಾಸಿಗಳು ಮತ್ತು ಗ್ರಾಮವಾಸಿಗಳು ರಾಟಿಯ ಸಂತೋಷಪ್ರದ ಸಂದೇಶವನ್ನು ಕಲಿಯಲು ಸಿದ್ಧರಾದರೆ ಅವರು ಸಂತೋಷದಿಂದ ಅರಳೆ ಹಿಂಜುವದು ನೂಲುವದು ಮತ್ತು ನೇಯುವದರಲ್ಲಿ ತೊಡಗುವರು. ರೇಸಕೋರ್ಸಗಳಲ್ಲಿ ಜೂಜಾಡುವಲ್ಲಿ ಇಲ್ಲವೆ ಕುಡಿಯುವದರಲ್ಲಿ, ತಮ್ಮ ಕ್ಲಬ್ಬುಗಳಲ್ಲಿ ನಿರರ್ಥಕ ವೇಳೆ ಕಳೆಯದೆ ಖಾದೀ ಕಾರ್ಯದಲ್ಲಿಯೆ ಅವರು ತೊಡಗಬೇಕು. ಮತ್ತು ಅವರ ಮಕ್ಕಳು? ಏಕೆ ಅವರು ತಮ್ಮ ಪಾಲಕರ ಸಲುವಾಗಿ ಹಿಂದುಸ್ತಾನದ ಸ್ವಾತಂತ್ರ್ಯದ ಸಲುವಾಗಿ ನೂಲತಕ್ಕದ್ದು. ಹಿಂದುಸ್ತಾನಕ್ಕೆ ಬೇಕಾದ ಶಿಕ್ಷಣ ಪದ್ಧತಿಯಿಂದಲೆ ಅವರು ಸುಶಿಕ್ಷಿತರಾಗತಕ್ಕದ್ದು. ನಾನು ರೇಮದಲ್ಲಿದ್ದಾಗ ಎಲ್ಲ ಬಗೆಯ ಹೊಸ ಗತ್ತುಗಾರಿಕೆಯನ್ನು ಚಿಕ್ಕ ಮಕ್ಕಳಿಗೆ ಕಲಿಸುತಿರುವ ಪ್ರಯೋಗಗಳನ್ನೆಲ್ಲ ತೋರಿಸುವಲ್ಲಿ ಮುಸಲೋನಿಯ ಅಧಿಕಾರಿಗಳು ಒಳ್ಳೆ ಸ್ವಾಭಿಮಾನ ತೋರುತಿದ್ದರು. ಇಂಗ್ಲಿಶ ಮಕ್ಕಳಾದರೂ ಇಂಗ್ಲಂಡಿಗೆ ಬೇಕಾದುದೆನ್ನೆಲ್ಲ. ತಮ್ಮ ಮಾತೃಭಾಷೆಯಲ್ಲಿ ಕಲಿಯದೆ ಬೇರೆ ಏನುಮಾಡುತ್ತಿರುವರು? ಮಕ್ಕಳಿಗೆ ಪರಭಾಷೆಯಲ್ಲಿ ಶಿಕ್ಷಣ ಕೊಡುವದು ಹಿಂದುಸ್ತಾನಕ್ಕೆ ಮಾತ್ರವೇ ಮೀಸಲಾಗಿಟ್ಟದೆ. ಮತ್ತು ಅವರಿಗೆ ಬೇಕಾದಂಥ ಕೆಲಸವನ್ನೆ ಅದರ ಮುಖಾಂತರ ಪಡಿಸಿಕೊಳ್ಳಲಾಗುತ್ತದೆ. ಪರದೇಶಸ್ಥನಲ್ಲದೆ ಬೇರೆ ಯಾವನು ಹಿಂದುಸ್ತಾನದಲ್ಲಿ ಶಿಕ್ಷಣ ಪದ್ಧತಿಯನ್ನು ಸಿದ್ಧಪಡಿಸಿದನು?

ಎ. ಆಯ. ಎಸ್. ಎ. ಮಾರಾಟ ಕೇಂದ್ರಗಳನ್ನು ಮೊದಲಿಗಿಂತ ಹೆಚ್ಚು ಉಪಯುಕ್ತ ಉದ್ದೇಶಕ್ಕಾಗಿ ಉಪಯೋಗಿಸಲಾಗುವದು ಅವರ ಕಡೆಗೆ ಬರುವವರಿಗೆಲ್ಲ ನೂಲುವ ಮತ್ತು ನೇಯುವ ವಿಧಾನಗಳನ್ನೆಲ್ಲ ಅವು ಕಲಿಸುವವು. ಇದಕ್ಕಾಗಿ ಜನ ಹಿಂದುಗಟ್ಟಿಕೊಂಡು ಅವುಗಳ ಕಡೆಗೆ ಬರುವರೆಂಬ ಆಶಿಸಲಾಗಿದೆ. ಅವು ಹಾಗೆ ಮಾಡಿದ್ದಾದರೆ ಅವರಿಗೆ ಬೇಕಾಗುವಷ್ಟು ಖಾದಿಯನ್ನು ಉತ್ಪಾದಿಸಬಲ್ಲುವು. ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇದೆ.

ಕೊನೆಯದಾಗಿ ಗಿರಣಿ ಬಟ್ಟೆಯಂತೆ ಈಗ ಖಾದಿಯೂ ದುರ್ಮಿಳವಾಗಿದೆಂಬದನ್ನ ವಾಚಕನು ಅರಿಯಬೇಕು. ಆದರ ಕಾರಣಮೀಮಾಂಸೆ ಚರ್ಚಿಸುವದು ಅನವಶ್ಯಕ.

ಪಂಚಗಣಿ ೧೪—೭—೪೬. ಮೋ. ಕ. ಗಾಂಧಿ

ನಿಜವಾದ ಗಂಡಾಂತರ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಮುಂಬಯಿಯಲ್ಲಿ ಎರಡು ದಿನ ಸಭೆ ಸೇರಿದಾಗ ಕಾಂಗ್ರೆಸ್ ಕಾರ್ಯ ಸಮಿತಿಯವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮನ್ನಣೆಗಾಗಿಯೆಂದು ಮಂಡಿಸಿದ ಗೊತ್ತುವಳಿ ವಿರುದ್ಧ ಉಗ್ರ ಭಾಷಣಗಳನ್ನು ಹಲವು ಕೇಳಿದೆನು. ವಿರೋಧಿ ಪಕ್ಷದವರು ವ್ಯಕ್ತಪಡಿಸಿದ ಗಂಡಾಂತರದ ಮಾತುಗಳನ್ನು ನಾನು ಒಪ್ಪಲಾರೆ. ನಿಜ ಸತ್ಯಾಗ್ರಹಿಯು ವಿರೋಧಿಗಳಿಂದ ಬರತಕ್ಕ ದೃಷ್ಟ ಅದೃಷ್ಟ ಗಂಡಾಂತರಗಳಿಗಾಗಿ ಬೆದರುವುದಿಲ್ಲ. ಪ್ರತಿಯೊಂದು ಸೈನ್ಯದಲ್ಲಿಯಂತೆ ಅಂತರ್ ಗಂಡಾಂತರವೆ ಹೆಚ್ಚು ಭಯಪ್ರದವಾಗಿದೆ.! ಸತ್ಯಾಗ್ರಹಿ ಅವಕ್ಕೆ ಮಾತ್ರ ಅಂಜತಕ್ಕದ್ದು ಪೂರ್ಣಜ್ಞಾನವಿಲ್ಲದೆ ಸಮತೋಲಬುದ್ಧಿಯಿಲ್ಲದೆ ಮತ್ತು ನಿಜವಾದ ಸಂಗತಿಗಳಿಂದ ಕೂಡದಿದ್ದ ಹಾಗು ಕೃತಿಯನ್ನು ಮಾಡದಿದ್ದ ವಿರೋಧವು ಆಕರ್ಷಕವಾಗಿ ತೋರಿದರೂ ಉದ್ದೇಶವನ್ನು ಸಫಲ ಮಾಡಲಾರದು. ಕಳೆದ ಸಭೆಯಲ್ಲಿಯ ವಿರೋಧಿಗಳು ಇದಕ್ಕೆ ಉತ್ತರಿಸಲಿ.

ಅಂತರ್ ಗಂಡಾಂತರವನ್ನು ತೋರಿಸುವದಷ್ಟೇ ನನ್ನ ಉದ್ದೇಶವಾಗಿದೆ. ಮಹತ್ವದ ಮೊದಲನೆಯ ಸಂಗತಿಯೆಂದರೆ ತನು ಮನಸಿನ ಆಲಸಿಕೆ. ಕಾಂಗ್ರೆಸ್ಸಿಗರು ಸುರಂಗವಾಸವನ್ನನುಭವಿಸಿರುವದರಿಂದ ಸ್ವಾತಂತ್ರ್ಯ ಸಂಪಾದನೆಗಾಗಿ ಇನ್ನೇನು ಮಾಡಬೇಕಾಗಿಲ್ಲೆಂಬ ಆತ್ಮ ತೃಪ್ತಿ ಸಮಧಾನದಿಂದ ಇದು ಬರುತ್ತದೆ.

ಕೃತಜ್ಞ ಬುದ್ಧಿಯ ಕಾಂಗ್ರೆಸ ಸಂಸ್ಥೆಯ ಚುನಾವಣೆ ಮತ್ತು ಕಚೇರಿಗಳಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು ತಮ್ಮನ್ನು ಬಹುಮಾನಿಸಬೇಕೆಂದು ಅವರ ಹಂಬಲ. ಅದುದರಿಂದ ಬಹುಮಾನದ ಸ್ಥಳಗಳೆಂದು ಕರೆಸಿಕೊಳ್ಳುವ ಸ್ಥಳಗಳಿಗಾಗಿ ಅನಿಷ್ಟ ಸ್ಪರ್ಧೆ ನಡೆಯುತಿದೆ. ಇಲ್ಲಿ ಎರಡು ಬಗೆಯ ತಪ್ಪು ಮಾಡುವರು ಕಾಂಗ್ರೆಸ್ ಶಬ್ದಕೋಶದಲ್ಲಿ ಬಹುಮಾನವೆಂಬದಕ್ಕೆ ಅವಕಾಶವೆ ಇರಲರಿಯದು. ಸುರಂಗವಾಸವೆ ಅದಕ್ಕೆ ಬಹುಮಾನ. ಸತ್ಯಾಗ್ರಹಿಯ ಪ್ರಾಥಮಿಕ ಪರೀಕ್ಷೆಯದು. ನಿರ್ದೋಷಸೂರಿಯಂತೆ ಅದರ ಕೊನೆಯ ಧ್ಯೇಯವು ವಧಾಲಯವೆ ಆಗಿದೆ. ತದ್ವಿರುದ್ಧವಾಗಿ ಸುರಂಗಕ್ಕೆ ಹೋಗುವದೆಂದರೆ ಕಾಂಗ್ರೆಸ್ಸಿನ, ಪ್ರತಿಯೊಂದು ಅಧಿಕಾರ ಸ್ಥಳಕ್ಕೆ ಪ್ರವೇಶಪತ್ರದಂತಾಗಿದೆ. ಅದುದರಿಂದ ಕಳ್ಳಕಾಕರ ಸುರಂಗವಾಸದಂತೆ ಸತ್ಯಾಗ್ರಹಿಯ ಸುರಂಗವಾಸವೂ ನಿಂದ್ಯ ಹೋರಿಯಾಗಿ ಪರಿಣಮಿಸುವ ಗಂಡಾಂತರದ ಅಂಜಿಕೆಯುಂಟು. ಈ ಪರಿಸ್ಥಿತಿಯಲ್ಲಿ 'ಅಂಡರ ಗ್ರೌಂಡ' ಇಲ್ಲವೆ ಭೂಗರ್ಭವಾಸಿಗಳಾಗಿ ಉಳಿದ ನನ್ನ ಮಿತ್ರರು ಸುರಂಗವಾಸವು ಸ್ವಲ್ಪ ಕಠಿಣವಾದುದೆಂದು ಭಾವಿಸಿ ಅದನ್ನು ತಪ್ಪಿಸಲು ಪ್ರಯತ್ನಿಸುತಿರುವಲ್ಲಿ ಆಶ್ಚರ್ಯವೇನೂ ಇಲ್ಲ. ಕಾಂಗ್ರೆಸ್ಸು ಯಾವ ಮಟ್ಟಕ್ಕೆ ಬಂದು ಮುಟ್ಟಿದೆಂಬುದರ ನಿದರ್ಶಕವಿದು.

ಬ್ರಿಟಿಶ್ ಮಂತ್ರಿ ರಾಯಭಾರದ ಸೂಚನೆಯ ಬಗ್ಗೆ ಇದ್ದ ಗೊತ್ತುವಳಿಯನ್ನು ವಿರೋಧಿಸಿದ ಮಿತ್ರರಿಗೆ ತಮ್ಮ ಉದ್ದೇಶವೇನೆಂಬುದೆ ತಿಳಿದಿರುವದಿಲ್ಲೆಂದು ತೋರುತ್ತದೆ. ಫ್ರೆಂಚ ಸೋವಿಯೆಟ ಇಲ್ಲವೆ ಇಂಗ್ಲಿಶ್ ಬಂಡಾಯಗಳಂತೆ ನಮ್ಮ ಸ್ವಾತಂತ್ರ್ಯವನ್ನೂ ರಕ್ತಮಯ ಕ್ರಾಂತಿಯಿಂದ ಕೊಳ್ಳಬೇಕೊ? ಹಾಗಿದ್ದರೆ ಸ್ಪಷ್ಟ ಮತ್ತು ಪ್ರಾಮಾಣಿಕ ಕಾರ್ಯವನ್ನು ಪ್ರಾರಂಭವಾಗತಕ್ಕದ್ದಿದೆ ಕಾಂಗ್ರೆಸ್ಸನ್ನು ಬಹಿರಂಗವಾಗಿ ಇಂಥ ಸಂಸ್ಥೆಯನ್ನಾಗಿ ಮಾರ್ಪಡಿಸಬೇಕಾದರೆ ಅವರು ಬಹಳ ಘಾತಕ ಮಾರ್ಗವನ್ನು ಕ್ರಮಿಸಬೇಕಾಗುವುದು. ಅಥವಾ ಭೂಮಿಗತವಾಗಿ ಚಟುವಟಿಕೆ ನಡೆಸುವದು ಸಾರ್ವತ್ರಿಕವಾಗಿ ಅನುಸರಿಸತಕ್ಕ ತತ್ವವಾಗಿದ್ದರೆ ಮತ್ತು ಕಾಂಗ್ರೆಸ್ಸಿನ ಸಂಬಂಧದಲ್ಲಿ ಈಗ ಅದನ್ನುಪಯೋಗಿಸುವವಾದರೆ ನನ್ನ ವಾದದಲ್ಲಿ ಏನೂ ಹುರುಳಿಲ್ಲ ಇಂಥ ವಿಚಾರದಿಂದಲೆ ನನ್ನ ಮೈ ಜುಮ್ಮೆನಿಸುತ್ತದೆ. ಈ ಬಗೆಯ ವಿಚಾರ ನಿರಾಧಾರವಾಗಿವೆಂದು ನನ್ನ ತಿಳಿವಳಿಕೆಯನ್ನು ಲಕ್ಷಿಸಿ ನಾನು ಆಶಿಸ ಬಯಸುತ್ತೇನೆ. ಇದೀಗ ಕಾಂಗ್ರೆಸ್ ರಾಜ್ಯ ಇಲ್ಲವೆ ಪ್ರಾತಿನಿಧಿಕ ರಾಜ್ಯವಿದೆ—ಅದು ಕಾಂಗ್ರೆಸ್ಸಿನದಿರಲಿ ಮುಸ್ಲಿಂಲೀಗಿನದಿರಲಿ. ಅದನ್ನು ವಿವರವಾಗಿ ಸುಧಾರಿಸುವಲ್ಲಿ ನಾವು ತೊಡಗಬೇಕಲ್ಲದೆ ಅದನ್ನು ಸಂಪೂರ್ಣವಾಗಿ ಹಳಿಯತಕ್ಕದ್ದಲ್ಲೆಂದು ಹೇಳುವುದು ಅವರ ಸ್ಪಷ್ಟ ಕರ್ತವ್ಯವಾಗಿದೆ. ಪ್ರಾತಿನಿಧಿಕ ರಾಜ್ಯದಲ್ಲಿ, ಅದರ ದರ್ಜೆಯಾವದೆ ಇರಲಿ, ಸಂಪೂರ್ಣ ಅಹಿಂಸಾತ್ಮಕ ಅಸಹಕಾರಕ್ಕೆ ಅವಕಾಶ ವಿರುವುದಿಲ್ಲ.

ಮದುರಾದಲ್ಲಿ ಅವೇಳೆ ಸಮೀಪದಲ್ಲಿಯೆ ಅಹಮದಾಬಾದದಲ್ಲಿ ಇದೇನು ಉನ್ಮತ್ತತನ ನಡೆದಿದೆಯೊ ಅದಕ್ಕಾರು ಹೊಣೆಗಾರರು? ಬ್ರಿಟಿಶ್ ಯಂತ್ರದ ಕೈವಾಡವೆ ಇದಕ್ಕೆ ಕಾರಣ ಎಂದು ಹೇಳುವದು ಹುಚ್ಚುತನ. ಈ ಹುಚ್ಚುಚ್ಚಾರ ತತ್ವಪ್ರಣಾಲಿಯಿಂದ ಪರದೇಶದ ಪ್ರಭುತ್ವ ಸ್ಥಿರಗೊಳ್ಳುತ್ತದೆ ಬ್ರಿಟಿಶ್‌ರದೆ ಕದಾಚಿತ ಪ್ರಭುತ್ವವುಳಿಯಲಾರದು] ಯಾವದೆ ಪರಿಸ್ಥಿತಿಯಲ್ಲಿ ಇಂಗ್ಲಿಶ್‌ರು ಹಿಂದುಸ್ಥಾನದಿಂದ ಹೊರಟುಹೋಗತಕ್ಕವರು. ಸರಕಾರದ ಘೋಷಣಾ ಪತ್ರದಿಂದ ಅವರು ವ್ಯವಸ್ಥಿತ ರೀತಿಯಿಂದ ಇಲ್ಲಿಂದ ಹೊರಡುವರೆಂದು ಹೇಳಬಹುದು. ಇಲ್ಲದಿದ್ದರೆ ಸಶಸ್ತ್ರ ರಾಷ್ಟ್ರಗಳನ್ನು ಕೂಡಿಕೊಂಡು ಹಿಂದುಸ್ತಾನ ಅಹಿಂಸಾಮಾರ್ಗವನ್ನು ಬಿಟ್ಟುಗೊಟ್ಟಿದೆ. ಅದಕ್ಕಾಗಿ ಅದನ್ನು ಅದರ ಪಾಡಿಗೆ ಬಿಟ್ಟುಗೊಟ್ಟು ವ್ಯವಸ್ಥಿತ ರೀತಿಯಿಂದ ಅವರು ಹೋಗಬಹುದು. ತಮಗೆ ಯಾವ ಬಗೆಯ ಸ್ವಾತಂತ್ರ್ಯ ಬೇಕಾಗಿದೆಂಬುದನ್ನು ಕಾಂಗ್ರೆಸ್ಸಿಗರಿಗೆ ವಿರೋಧಿಗಳು ಹೇಳಲಿ. ಅವರಿಗೆ ಬೇಕಾದ ಸ್ವಾತಂತ್ರ್ಯವೆಂತಹದೆಂಬುದು ಸಾಮಾನ್ಯ ಕಾಂಗ್ರೆಸ್ಸಿಗರಿಗೆ ಗೊತ್ತಿಲ್ಲೆಂಬುದು ನಿಶ್ಚಿತ. ಅವರು ಗಿಳಿಗಳಂತೆ ಸೂತ್ರದನ್ನುಚ್ಚರಿಸುತಿರುವರು. ಇಲ್ಲವೆ ಕಾಂಗ್ರೆಸ್ ರಾಜ್ಯವೆಂದರೇ ಸ್ವಾತಂತ್ರ್ಯವೆಂಬುದಾಗಿ ಅವರು ಭಾವಿಸಿಕೊಂಡಿರುತ್ತಾರೆ. ಅದರಲ್ಲಿ ಅವರವೇನೂ ತಪ್ಪಿರಲಾರದು. ಹೆಚ್ಚಿನ ವಿಚಾರಣೆಯನ್ನೆಲ್ಲ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೇ ಬಿಟ್ಟುಗೊಟ್ಟಿರುವರು. ಇದೇನು ನಿಜ ಪ್ರಜಾ ಪ್ರಭುತ್ವ ಪದ್ಧತಿಯಲ್ಲ. ನಿಜವಾದ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರೂ ವಿಚಾರಮಾಡಲಿಕ್ಕೇ ಬೇಕೆಂದು ಕಲಿಸಲಾಗುತ್ತದೆ. ಇಂಥ ನಿಜ ಕ್ರಾಂತಿಯನ್ನೆಂತು ಸೂಡಬಹುದೆಂಬುದು ನನಗೆ ಗೊತ್ತಾಗಲಾರದು. ದಾನದಂತೆ ಪ್ರತಿಯೊಂದು ಬಗೆಯ ಸುಧಾರಣೆ ಮನೆಯಿಂದಲೆ ಪ್ರಾರಂಭವಾಗತಕ್ಕದ್ದೆಂಬುದು ಮಾತ್ರ ನನಗೆ ಗೊತ್ತಿದೆ.

—೧೦ ನೇ ಪುಟ ನೋಡಿರಿ

ವಾರದ ಪತ್ರ

ಪಂಡಿತ ಜವಾಹರಲಾಲರು ಅ. ಭಾ. ಕಾಂಗ್ರೆಸ್ ಸಮಿತಿಯಲ್ಲಿ ಮಾಡಿದ ಭಾಷಣದ ನಡುವೆ ಅರ್ಥಗರ್ಭಿತ ವಾಕ್ಯವೊಂದನ್ನು ಆಡಿದರು. ಸಭೆಯನ್ನೆದುರಿಸಿರುವ ಪ್ರಶ್ನೆಯನ್ನು ಸಂಕುಚಿತ ಪ್ರತ್ಯೇಕತಾಭಾವನೆಯಿಂದ ನೋಡದೆ ಜಾಗತಿಕ ಘಟನೆಗಳ ವಿಶಾಲವಾದ ಹಿನ್ನೆಲೆಯು ಲ್ಲಿಟ್ಟು ಪರಿಶೀಲಿಸಬೇಕೆಂದು ಅವರು ಕಳಕಳಿಯಿಂದ ಬಿನ್ನವಿಸಿಕೊಂಡರು. ಜಗತ್ತು ತಲೆಕೆಳಗಾಗಿದೆ, ಹಳೆಗಾಲದ ಹೆಗ್ಗುರುತುಗಳು ಮಾಯವಾಗಿವೆ, ಅನಾದಿ ಧ್ಯೇಯಗಳು ಕಳಚಿ ಬಿದ್ದಿವೆ, ಇಲ್ಲವೆ ಉಪೇಕ್ಷಿಸಲ್ಪಟ್ಟಿವೆ. ಆದರೆ ಹಿಂದುಸ್ತಾನ ಇನ್ನೂ ತನ್ನ ಮೂಲಭೂತ ತತ್ವಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದೆ. ಸ್ವತಂತ್ರ ರಾಷ್ಟ್ರವಾಗಿ ನಾವು ಜಗತ್ತನ್ನು ರೂಪಿಸುವದರಲ್ಲಿ ನಮ್ಮ ಪಾಲಿನ ಹೊಣೆಯನ್ನು ನಿರ್ವಹಿಸಬೇಕಾಗುವದು. ಜಗತ್ತಿನ ಸಮಸ್ಯೆಗಳ ಪರಿಹಾರಕ್ಕೆ ಹಿಂದುಸ್ತಾನ ಏನು ಸೇವೆ ಸಲ್ಲಿಸುವದು? ಅದು ಯಾವ ಮಾರ್ಗದರ್ಶಕ ತತ್ವಗಳನ್ನು ಅನುಸರಿಸುವದು? "ಈ ಪ್ರಶ್ನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ನೀವು ನಿಮ್ಮ ಇಂದಿನ ಧೋರಣೆಯನ್ನು ರೂಪಿಸಬೇಕು. ನಮ್ಮದು ಬಹಳ ದೊಡ್ಡ ದೇಶ. ನಾವು ಯಾವ ಕಡೆಗೆ ಹೆಗಲು ಕೊಟ್ಟರೂ ಅದು ಜಗತ್ತಿನ ಇತಿಹಾಸದ ಪ್ರವಾಹದ ಮೇಲೆ ಪರಿಣಾಮ ಮಾಡುವದು."

ದಕ್ಷಿಣ ಅಫ್ರಿಕೆಯ ಹೋರಾಟ

ಅ. ಭಾ. ಕಾಂಗ್ರೆಸ್ ಸಭೆಯಿಂದ ಪುಣೆಗೆ ಮರಳಿದ ನಂತರ ಗಾಂಧೀಜಿ ಮಾಡಿದ ಪ್ರಥಮ ಭಾಷಣವೇ ಪಂಡಿತ ಜವಾಹರಲಾಲರ ವಾಕ್ಯಕ್ಕೆ ಭಾಷ್ಯವಾಗಿದ್ದಂತಿತ್ತು. ದಕ್ಷಿಣ ಅಫ್ರಿಕೆಯ ಸತ್ಯಾಗ್ರಹದ ಜಾಗತಿಕ ಸಂಕೇತ ಎಂಬ ವಿಷಯವನ್ನು ಅವರು ಎತ್ತಿಕೊಂಡಿದ್ದರು. ಅದು ಬರಬರುತ್ತ ಪರಮ ಮಹತ್ವದ ಪ್ರಶ್ನೆಯಾಗುತಿದೆ. ನಿರಾಯುಧರಾದ, ನಿಸ್ಸಹಾಯರಾದ ಮತ್ತು ಅಪಹಾರ ಬುದ್ಧಿಯ ಬಿಳಿಯರ ದಬ್ಬಾಳಿಕೆ ತಡೆಯಲಾರದೆ ನರಳುತಿರುವ ನಿಗ್ರೋಗಳ ಲಕ್ಷ, ಅದರ ಕಡೆ ಸೆಳೆದಿದೆ. ಹಿಂದೀಯರ ಸತ್ಯಾಗ್ರಹದಲ್ಲಿ ಅವರು ತಮ್ಮ ವಿಮೋಚನೆಯ, ಅಶೋದಯದ ಸಂಕೇತವನ್ನು ಕಾಣತೊಡಗಿದ್ದಾರೆ. ಅವರು ಹಿಂದೀ ಸತ್ಯಾಗ್ರಹಿಗಳ ಪಂಕ್ತಿಯಲ್ಲಿ ಸೇರಲು ನಿಶ್ಚಯಿಸಿದ್ದಾರೆ. ಈ ಪ್ರಕಾರ ದಕ್ಷಿಣ ಅಫ್ರಿಕೆಯ ಹೋರಾಟದಿಂದ ಜಗತ್ತಿನ ದಲಿತ ಜನತೆಯ ಉದ್ಧಾರ ಕಾರ್ಯದಲ್ಲಿ ಸ್ವತಂತ್ರ ಭಾರತಕ್ಕೆ ಹೊಸದೊಂದು ಮಾರ್ಗ ತೆರೆದಂತಾಗಿದೆ. ಅದರ ಪರಿಪೂರ್ಣ ಸಂಕೇತವನ್ನು ನಾವು ಅರಿತುಕೊಳ್ಳಬೇಕಾದರೆ ಅದರ ಐತಿಹಾಸಿಕ ಹಿನ್ನೆಲೆಯನ್ನು ಸ್ವಲ್ಪ ಮಟ್ಟಿಗೆ ತಿಳಿಯುವದು ಅವಶ್ಯ. ಹಿಂದೀ ವಲಸೆಗಾರರು ದಕ್ಷಿಣ ಅಫ್ರಿಕೆಗೆ ಮೊಟ್ಟಮೊದಲು ೧೮೬೦ ರಲ್ಲಿ ಮತ್ತು ಆ ಸುಮಾರಿಗೆ "ಗಿರ್ಮಿಟಿ"ಯವರಾಗಿ ಅಥವಾ ಕರಾರುಬದ್ಧ ಕೂಲಿಕಾರರಾಗಿ ಹೋದರು ಬಿಳಿಯರಿಗಾಗಿ ನಿಗ್ರೋಗಳು ಕೂಲಿ ಮಾಡಲು ಸಿದ್ಧರಾಗಲಿಲ್ಲ. ಆದುದರಿಂದ ಅವರು "ಇಂಡೆಂಚರ" ಅಥವಾ ಕರಾರು ಪದ್ಧತಿಯಲ್ಲಿ ಹಿಂದೀ ಕೂಲಿಕಾರರನ್ನು ಒಯ್ದರು. ಆ ಪದ್ಧತಿ ಒಂದು ಬಗೆಯ ಅರ್ಧ-ಗುಲಾಮಗಿರಿಯಾಗಿತ್ತೆನ್ನಬೇಕು. ಗುಲಾಮನು ಯಾವಜ್ಜೀವ ಬದ್ಧನಾಗಿದ್ದರೆ ಕರಾರು ಬದ್ಧ ಕೂಲಿಕಾರ ೫ ವರ್ಷದ ವರೆಗೆ ಬದ್ಧನಾಗಿದ್ದನೆಂಬುದೊಂದೇ ಇಬ್ಬರೊಳಗಿನ ಭೇದವಾಗಿತ್ತು. ಈ ಕೂಲಿಕಾರರನ್ನು, ಬೆಂಬತ್ತಿ ಹಿಂದೀ ವ್ಯಾಪಾರಿಗಳು ಹೋದರು. ಪೋರಬಂದರದ ಹಾಜಿ ಸಾಹೇಬ ಅಬೂಬಕರ ಅಹಮ್ಮದ ಝುವೇರಿಯವರು ಅದರಲ್ಲಿ ಮೊದಲಿಗರು. ಇನ್ನು ಕಾಠೇವಾಡದಿಂದ ಚಿಕ್ಕ ಪುಟ್ಟ ವ್ಯಾಪಾರಿಗಳು, ಸುರತದಿಂದ ಮೋಮೋನರು, ಬಾರ್ಡೋಲಿಯಿಂದ ಪಾಟೀದಾರರು ಹೋದರು. ಅಲ್ಲಿ ಅವರು ಕೆಲವರು ವರ್ತಕರಾಗಿ, ಕೆಲವರು ಹೊತ್ತು ಮಾರಿ, ಜೀವನ ಮಾಡತೊಡಗಿದರು. ಇದು ೧೮೮೦ ಮತ್ತು ಆ ನಂತರ ನಡೆದುದು. ಅವರು ದಕ್ಷಿಣ ಅಫ್ರಿಕೆಯ ಬೆಳವಣಿಗೆಗೆ ಸಹಾಯ ಮಾಡಿ ತುಸು ಹಣವನ್ನೂ ಗಳಿಸಿದರು. ಅವರ ಮಕ್ಕಳು ವೃತ್ತಿಕ್ಷೇತ್ರದಲ್ಲಿ ಪ್ರವೇಶಿಸಿ ಡಾಕ್ಟರರೂ ವಕೀಲರೂ ಆದರು ಈಗ ದಕ್ಷಿಣ ಅಫ್ರಿಕೆಯಲ್ಲಿ ಹೋರಾಡುತಿರುವವರು ಇವರು, ಎಂದರು ಗಾಂಧೀಜಿ. ಅವರ ಹೋರಾಟ ಅಷ್ಟೇನೂ ಅವರ ಸ್ವಂತದ್ದಾಗಿರದೆ ಹಿಂದೀಯರ ಗೌರವರಕ್ಷಣೆಯ ಹೋರಾಟವಾಗಿದೆ. "ಅಲ್ಲಿ ಏನು ನಡೆಯುತಿದೆಯೆಂದು ನನಗೆ ಗೊತ್ತು. ಏಕೆಂದರೆ ನನ್ನ ಜೀವನದ ಅತಿ ಮಹತ್ವದ ೨೦ ವರ್ಷಗಳನ್ನು ಅಲ್ಲಿಯೆ ಕಳೆದಿರುವ ನಾನು ಒಂದು ಬಗೆಯಲ್ಲಿ ದಕ್ಷಿಣ ಅಫ್ರಿಕೆಯವನೇ ಆಗಿಬಿಟ್ಟಿದ್ದೇನೆ. ಸತ್ಯಾಗ್ರಹದ ಜನ್ಮವಾದುದೂ ಅಲ್ಲಿಯೆ. ಪಶ್ಚಿಮ ದೇಶಗಳು ಇಂದು ಪ್ರಾಯಶ್ಚಿತ್ತಾಗ್ನಿಯಲ್ಲಿ ದಗ್ಧವಾಗುತಿವೆ. ಗೆದ್ದವರ ಪಾದ ಮೂಲದಲ್ಲಿ ಸೋತವರು ಅಡ್ಡಬಿದ್ದಿದ್ದಾರೆ. ಆದರೆ ಗೆದ್ದವರಿಗೆ ತಮ್ಮ ಗೆಲವು ಸೋತವರ ಸೋಲಿಗಿಂತ ಸುಖಕರವಾಗಿಲ್ಲವೆಂದು ತಿಳಿದುಬಂದಿದೆ. ಆದರೂ ಪಾಶ್ಚಿಮಾತ್ಯ ನಾಗರಿಕತೆ ಮರಣವನ್ನು ಕಾಣುವದು ಎರಡನೆಯ ಮಹಾಯುದ್ಧದಲ್ಲಲ್ಲ. ಅದರ ಗೋರಿ ದಕ್ಷಿಣ ಅಫ್ರಿಕೆಯಲ್ಲಿ ಸಿದ್ಧವಾಗುತಿದೆ. ದಕ್ಷಿಣ ಅಫ್ರಿಕೆಯ ಬಿಳಿ ನಾಗರಿಕತೆಯ ಮುಂದೆ ಏಶಿಯಾದ ಬಿಳಿಯದಲ್ಲದ ನಾಗರಿಕತೆಯನ್ನು ಇರಿಸಿದರೆ ಅದೇ ಕಪ್ಪು ಇದೇ ಅದಕ್ಕಿಂತ ಬಿಳಿ ಎನಿಸುವದು. ನಮ್ಮ ಜನರು ಕೊನೆಯವರೆಗೂ ಗಟ್ಟಿ ನಿಂತು ಅಹಿಂಸೆಯನ್ನು ಬಿಡದಿದ್ದರೆ ಅವರ ಧೀರ ಸಂಗ್ರಾಮದಿಂದ, ದಕ್ಷಿಣ ಅಫ್ರಿಕೆಯಲ್ಲಿ ತನ್ನ ನಿಜರೂಪದಲ್ಲಿ ಪ್ರಕಟವಾಗಿರುವ ಪಾಶ್ಚಿಮಾತ್ಯ ನಾಗರಿಕತೆಯ ಹೆಣದ ಪೆಟ್ಟಿಗೆಗೆ ಕೊನೆಯ ಮೊಳೆ ಜಡಿದಂತಾಗುವದು. ಇದರಲ್ಲಿ ಸಂಶಯವಿಲ್ಲ"

ಫೀಲ್ಡ ಮಾರ್ಶಲ ಸ್ಮಟ್ಸರ ನೆವಗಳು

"ದಕ್ಷಿಣಅಫ್ರಿಕೆಯ ಬಿಳಿಯರು ಪಶುಗಳಂತಾಗತೊಡಗಿರುವರು. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳು ಒಂದನ್ನೊಂದು ಎದುರಿಸಿ ನಿಂತಿವೆ. ಅವುಗಳಲ್ಲಿ ಎಂಥ ಅಂತರ ಕಾಣಬರುತಿದೆ! ಹಿಂದೀಯರನ್ನು ನಿರ್ಬಂಧಿತ ಪ್ರದೇಶಗಳಲ್ಲೆ ವಾಸಿಸುವಂತೆ ಬಲಾತ್ಕಾರಗೊಳಿಸುವ ಪಾಶವೀಕಾಯಿದೆಗಳನ್ನು ಬಿಳಿಯರು ಮಾಡಿದ್ದಾರೆ. ಫೀಲ್ಡ ಮಾರ್ಶಲ ಸ್ಮಟ್ಸರು ಮಹಾತತ್ವಜ್ಞಾನಿ. ಅವರು ನನ್ನನ್ನು ಗೆಳೆಯನೆಂದು ಕರೆಯುತ್ತಾರೆ. ಏಶಿಯಾದ ಸಂಸ್ಕೃತಿಯ ವಿರುದ್ಧ ಹೇಳತಕ್ಕದ್ದೇನೂ ಅವರಲ್ಲಿಲ್ಲ. ಆದರೆ ಬಿಳಿ ನಾಗರಿಕತೆಯನ್ನು ಸುರಕ್ಷಿತವಾಗಿರಿಸಲು ಅವರು ಕ್ರಮ ತೆಗೆದುಕೊಳ್ಳಬೇಕಾಗಿ ಬಂದಿದೆ. ಬಿಳಿಯರಲ್ಲದವರಲ್ಲಿ ತಿರಸ್ಕಾರ ಬುದ್ಧಿಯೇನೂ ತಮಗಿಲ್ಲವೆಂದು ಅವರು ನನಗೆ ಹೇಳಿದರು. ಶ್ರೀಮತಿ ಸುಬ್ಬರಾಯನ್ನರು ಇಂಗ್ಲಂಡಿಗೆ ವ್ಯಾಸಂಗಕ್ಕಾಗಿ ಹೋದಾಗ ಫೀಲ್ಡ ಮಾರ್ಶಲ ಸ್ಮಟ್ಸರ ಮನೆಯಲ್ಲಿ ಉಳಿದುಕೊಂಡಿದ್ದರೆಂಬ ಮಾತು ಈ ಹೇಳಿಕೆಯನ್ನು ಪುಷ್ಟೀಕರಿಸುತ್ತದೆ. ಆದರೆ, ಯಾವ ಪೂರ್ವಗ್ರಹದಿಂದಲೂ ತಮ್ಮ ಬುದ್ಧಿ ದೂಷಿತವಾಗಿಲ್ಲದಿದ್ದರೂ ದಕ್ಷಿಣ ಅಫ್ರಿಕೆಯಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಸಂರಕ್ಷಿಸುವದು ತಮ್ಮ ಕರ್ತವ್ಯವೆಂದು ಫೀಲ್ಡ ಮಾರ್ಶಲ ಸಾಹೇಬರು ಹೇಳಿ ತಿಳಿವಳಿಕೆಯ ಮನುಷ್ಯನಾದ ನಾನು ಇದನ್ನು ಮನದಂದುಕೊಳ್ಳುವೆನೆಂದು ಹಾರೈಸಿದರು."

ತನ್ನ ಸಂರಕ್ಷಣೆಗೆ ಕಾಯಿದೆಯ ಬೆಂಬಲ ಬೇಕಾದ ಸಂಸ್ಕೃತಿ ಏನು ಸಂಸ್ಕೃತಿಯೋ ಗಾಂಧೀಜಿಗೆ ತಿಳಿಯದಾಗಿದೆ ಹಿಂದೀಯರು ಈ ಪ್ರತ್ಯೇಕೀಕರಣ ಕಾಯಿದೆಯನ್ನು ಸವಿನಯ, ಅರ್ಥಾತ್ ಅಹಿಂಸಾ ಮಾರ್ಗದಿಂದ, ಅಂದ ಬಳಿಕ ನಾಗರಿಕೋಚಿತ ರೀತಿಯಿಂದ ವಿರೋಧಿಸುತಿದ್ದಾರೆ. ನೈತಿಕ ಸಮರ್ಥನೆ ಯಾವುದೂ ಇಲ್ಲದ ಕಾಯಿದೆಯನ್ನು ಮುರಿದುದಕ್ಕಾಗಿ ದಂಡನೆ ಬಂದರೆ ಬರಲೆಂದು ಅವರು ಸ್ವಾಗತಿಸಿದರು. ಆದರೆ ಬಿಳಿಯ ಪುಂಡರೂ ತಮ್ಮ ಕಾಯಿದೆಗಳನ್ನು ಮುರಿಯುತ್ತಿದ್ದಾರೆ. ಅವರದು ಸವಿನಯ ಶಾಸನಭಂಗವಲ್ಲ, ಪಾಶಕಮಯ ಶಾಸನಭಂಗ ಹಿಂದೀ ಕರಾರುಬದ್ಧ ಕೂಲಿಕಾರರ ಮತ್ತು ವ್ಯಾಪಾರಿಗಳ ಮಕ್ಕಳು—ಅವರಲ್ಲಿ ಎಷ್ಟೋ ಜನ ಹರಿಜನ ಕುಲೋತ್ಪನ್ನರು--ಇಂಥ ಧೀರ ಸತ್ಯಾಗ್ರಹಿಗಳಾಗಿಬಿಟ್ಟಿದ್ದಾರೆಂಬುದು ಹಿಂದುಸ್ತಾನಕ್ಕೆ ಹೆಮ್ಮೆಯ ವಿಷಯ. ಇದಕ್ಕೆದುರಾಗಿ ಬಿಳಿಯರು ಚಿತ್ರಹಿಂಸೆಯ ನೀತಿಯನ್ನು ಅನುಸರಿಸುತಿದ್ದಾರೆ. 'ಎಷ್ಟಾದರೂ ಸವಿನಯ ಪ್ರತಿಕಾರದ ಜನ್ಮದಾತೃ ಏಶಿಯಾದಲ್ಲಿ. ಯೇಸು ಏಶಿಯಾದವನು. ಅವನು ಪುನಃ ಅವತರಿಸಿ ಇಂದು ದಕ್ಷಿಣ ಅಫ್ರಿಕೆಗೆ ಹೋಗಿ ಜೀವನ ಮಾಡುತ್ತಿದ್ದರೆ ಅವನೂ ನಿರ್ಬಂಧಿತ "ಘೆಟ್ಟೋ"ಗಳಲ್ಲಿ ಬದುಕಬೇಕಾಗುತಿತ್ತು."

ದಕ್ಷಿಣ ಅಫ್ರಿಕೆಯಲ್ಲಿರುವ ಹಿಂದೀಯರನ್ನು ಸದಾಕಾಲವೂ ಹೀಗೆ ಪೀಡಿಸುತ್ತ ಹೋಗುವದು ಸಾಧ್ಯವಿಲ್ಲೆಂದು ೧೯೧೪ ರಲ್ಲಿ ಮನಗಂಡಂತೆ ಈಗಾದರೂ ಫೀಲ್ಡ ಮಾರ್ಶಲ ಸ್ಮಟ್ಸರು ಅರಿತುಕೊಂಡು, ಹಿಂದೀಯರನ್ನು ಬೇಕುಬೇಕಾದಂತೆ ಪರೀಕ್ಷಿಸಿನೋಡಿದ ಬಳಿಕಾದರೂ ಅವರೊಡನೆ ಗೌರವಾರ್ಹ ಒಪ್ಪಂದಕ್ಕೆ ಬರುವರೆಂದು ಗಾಂಧೀಜಿ ಹಾರೈಸಿದರು. ಹಿಂದೀ ಸತ್ಯಾಗ್ರಹಿಗಳಲ್ಲಿ ಸಹಾನುಭೂತಿಯನ್ನು, ಅವರ ಧ್ಯೇಯದಲ್ಲಿ ಸಹಮತಿಯನ್ನು ಪ್ರದರ್ಶಿಸಲು ಬಿಳಿಯರ ಸಮಿತಿಯೊಂದು ಅಲ್ಲಿ ಸ್ಥಾಪಿಸಲ್ಪಟ್ಟಿದೆ. ಗಾಂಧೀಜಿಯ ಕಾಲದಲ್ಲಿಯೂ ಇದೇ ಬಗೆಯ ಸಂಗತಿ ಜರುಗಿತ್ತು. ಆದರೆ ಈ ಬಾರಿ ಅದು ಅಂದಿಗಿಂತ ದೊಡ್ಡ ಪ್ರಮಾಣದಲ್ಲಿರುವಂತೆ ತೋರುತ್ತದೆ. "ಇದು ವ್ಯಾಪಕವಾಗಿ, ಮುಂಡತನ ನಿಲ್ಲಿಸಲ್ಪಟ್ಟರೆ ಮತ್ತು ಏಶಿಯಾಟಿಕ್—ವಿರೋಧಿ ಕಾಯಿದೆಗಳು ಉಪಸಂಹರಿಸಲ್ಪಟ್ಟರೆ, ಆಗ ಪೂರ್ವ ಪಶ್ಚಿಮ ಸಂಸ್ಕೃತಿಗಳ ಮಧುರ ಸಮನ್ವಯ, ಐಕ ಆಗುವ ಆಶೆಯಿದೆ. ಇಲ್ಲದಿದ್ದರೆ ದಕ್ಷಿಣ ಅಫ್ರಿಕೆಯ ಪಾಶ್ಚಿಮಾತ್ಯ ನಾಗರಿಕತೆಯ ಮರಣವೆಂದು ಸಿದ್ಧವಾದೀತು"

ಕವಲುದಾರಿಯಲ್ಲಿ ಖಾದಿ

ಅ. ಭಾ. ಕಾಂಗ್ರೆಸ್ ಸಭೆಯಿಂದ ಪುಣೆಗೆ ಮರಳಿದ ನಂತರ ನಾಲ್ಕು ದಿನಗಳಲ್ಲಿ ಗಾಂಧೀಜಿಯು ಹೊತ್ತಿಲ್ಲ ಅ. ಭಾ. ಚರಖಾ ಸಂಘದ ಮತ್ತು ಕಸ್ತೂರಬಾ ಸ್ಮಾರಕ ನಿಧಿಯ ವಿಶ್ವಸ್ತ ಮಂಡಲದ ಸಭೆಗಳಲ್ಲೆ ಕಳೆದುಹೋಯಿತು.

ಕಾಲು ಶತಮಾನದ ಮೊದಲೇ ಕಾರ್ಯಪ್ರವೃತ್ತವಾಗಿರುವದರಿಂದ ಹಿಂದುಸ್ತಾನಕ್ಕೆ ಬಟ್ಟೆಯ ಕೊರತೆಯನ್ನು ಕುರಿತು ಇತರ ಕೆಲವು ಯುದ್ಧ ವಿಧ್ವಸ್ತ ದೇಶಗಳಂತೆ ನಿಸ್ಸಹಾಯ ಚಿಂತೆಯಲ್ಲಿ ಮುಳುಗುವ ಪ್ರಸಂಗವಿಲ್ಲ. ಕೈ ನೂಲು ತೆಗೆಯುವ ಪರಂಪರೆಯೂ ಎಲ್ಲೆಡೆಗಳಲ್ಲಿಯೂ ಹಬ್ಬಿರುವ ಜವಳಿ ಉದ್ಯೋಗದ ವಿವಿಧ ಅವಸ್ಥೆಗಳ ತಾಂತ್ರಿಕ ಪರಿಜ್ಞಾನವೂ ಹಿಂದುಸ್ತಾನಕ್ಕೆ ದೊರೆತ ಬೆಲೆ ಬಾಳುವ ಪಿತ್ರಾರ್ಜಿತ ಆಸ್ತಿಯೆಂದೇ ಹೇಳಬೇಕು. ಇದರಿಂದ ಈ ದೇಶ ಒಳ್ಳೆಯ ಅನುಕೂಲ ಪರಿಸ್ಥಿತಿಯಲ್ಲಿ ನಿಂತಿದೆ. ಕೌಶಲವನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಂಡರೆ ನಾವು ನಮ್ಮ ದೇಶದನ್ನಷ್ಟೇ ಅಲ್ಲ, ನೆರೆಹೊರೆಯ ಕೆಲ ದೇಶಗಳ ಬಟ್ಟೆಯ ಬರಗಾಲವನ್ನು ಎದುರಿಸುವದರಲ್ಲಿಯೂ ಸಹಾಯ ಮಾಡಬಲ್ಲೆವು. ತಾ. ೧೦ ನೆ ದಿನ ಪ್ರಾರ್ಥನಾ ಕಾಲದ ಸಭೆಯಲ್ಲಿ ಅದೇ ದಿನ ಸಂಜೆ ಅ. ಭಾ. ಚರಖಾ ಸಂಘದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಲ್ಪಟ್ಟ ತಮ್ಮ ಯೋಜನೆಯನ್ನು ವಿವರಿಸಿದರು.

ಅ ಭಾ. ಚರಖಾ ಸಂಘದವರು ಬಡ ನೂಲುವವರಿಗೂ ನೇಕಾರರಿಗೂ ಏಳು ಕೋಟಿ ರೂಪಾಯಿಗಳನ್ನು ಹಂಚಿದ್ದಾರೆಂದು ಗಾಂಧೀಜಿ ಹೇಳಿದರು ಅದು ಬಹಳ ಕೆಲಸ ಮಾಡಿದೆಯಾದರೂ ಅದರ ಮುಂದಿರುವ ಕೆಲಸದೊಡನೆ ಹೋಲಿಸಿದರೆ ಅದು ಸಾಧಿಸಿರುವದು ತೃಣಪ್ರಾಯವಾಗಿ ಕಾಣುವದು ಒಂದಾನೊಂದು ಕಾಲದಲ್ಲಿ ಇದ್ದಂತೆ ಪುನಃ ಹಿಂದುಸ್ತಾನವನ್ನೆಲ್ಲ ಖಾದಿಧಾರಿಯಾಗಿ ಮಾಡುವ ಭಾರ ಅವರದಾಗಿದೆ. ಹಿಂದೆ ಹಿಂದುಸ್ತಾನ ತನಗೆ ಬೇಕಾಗುವಷ್ಟು ಬಟ್ಟೆಗಳನ್ನು ಉತ್ಪಾದಿಸುತಿತ್ತು ಮಾತ್ರವಲ್ಲ, ನಿರ್ಯಾತ ಮಾಡಲು ಕೂಡ ಸಮರ್ಥವಾಗಿತ್ತು. ಆಗ ಹಿಂದುಸ್ತಾನದಲ್ಲೇನೂ ಗಿರಣಿಗಳಿದ್ದಿಲ್ಲ. "ಪ್ರತಿಯೊಬ್ಬ ಹೆಂಗಸಿಗೂ ತಕಲಿ ಇಲ್ಲವೆ ಚರಖಾ ರೂಪದ ತನ್ನದೇ ಆದ ಗಿರಣಿಯಿತ್ತೆಂದು ಹೇಳಬಹುದು" ಆಧುನಿಕ ಗಿರಣಿಗಳೆಲ್ಲ ಚರಖಾದ ಅವಸ್ಥಾಂತರಗಳೇ ಆಗಿವೆ ಮಾನವನು ಸಾತ್ವಿಕ ತಾಮಸಶಕ್ತಿಗಳ ಎರಕವಾಗಿದ್ದಾನೆ. ಚರಖಾದ ಹಿಂದಿದ್ದ ಶಕ್ತಿ ಸಾತ್ವಿಕವಾಗಿತ್ತು. ದಿವ್ಯವಾಗಿತ್ತು. ಅದರಲ್ಲಿ ಶೋಷಣೆಗೆ ಎಡೆಯಿದ್ದಿಲ್ಲ. ವಿದೇಶಿಯರು ಅದರಲ್ಲಿರುವ ಗುಪ್ತ ಸಂಭಾವ್ಯತೆಗಳನ್ನು ಕಂಡುಕೊಂಡು ಹವೆ, ವಿದ್ಯುತ್ತುಗಳನ್ನುಪಯೋಗಿಸಿ ಗಿರಣಿಗಳನ್ನು ನಿರ್ಮಿಸಿದರು. ಮತ್ತು ಜಗತ್ತಿನ ಮೋಸವರಿಯದ ಜನಾಂಗಗಳನ್ನು ಸೂರೆಮಾಡಲು ಅದನ್ನು ವಿನಿಯೋಗಿಸಿದರು. ಇದು ತಾಮಸ ಅಥವಾ ಆಸುರೀ ಶಕ್ತಿಯ ದ್ಯೋತಕವಾಗಿದೆ. ಹಿಂದುಸ್ತಾನದಲ್ಲಿ ಇಷ್ಟೆಲ್ಲ ಅರಿವೆ ಗಿರಣಿಗಳಿವೆ. ಆದರೂ ಹಿಂದುಸ್ತಾನ ನಗ್ನಪ್ರಾಯವಾಗಿದೆ. ಜಗತ್ತಿನಲ್ಲೆಲ್ಲ ಬಟ್ಟೆಯ ಕೊರತೆಯುಂಟು. ಇಂಡೋನೇಶಿಯಾ ಪ್ರಜಾರಾಜ್ಯದ ಮುಖ್ಯ ಮಂತ್ರಿ ಸುಲ್ತಾನ ಸಹರಿಯರರು ಹಿಂದುಸ್ತಾನವನ್ನು ಎದುರಿಸಿರುವ ಬರಗಾಲವನ್ನು ನಿವಾರಿಸಲು ತಮ್ಮಲ್ಲಿರುವ ಉಳಿತಾಯದ ಅಕ್ಕಿಯನ್ನು ಸಂತೋಷದಿಂದ ಕೊಡುವದಾಗಿ ಪಂಡಿತ ನೆಹರೂ ಅವರಿಗೆ ತಿಳಿಸಿದ್ದಾರೆ. ಇದಕ್ಕೆ ಪ್ರತಿಫಲವಾಗಿ ಅವರು ಹಣ ಬೇಡಲಿಲ್ಲ. ತೀವ್ರವಾದ ಬಟ್ಟೆಯ ಕೊರತೆಯಿಂದ ಕಷ್ಟಪಡುತಿರುವ ಅವರು ಅಕ್ಕಿಯ ಬದಲಿಗೆ ಅರಿವೆಯನ್ನು ಸಂತೋಷದಿಂದ ಸ್ವೀಕರಿಸುವುದಾಗಿ ಹೇಳಿದರು. ಬಟ್ಟೆಯನ್ನು ಉತ್ಪಾದಿಸಲು ಅವರಿಗೆ ಸಾಧ್ಯವಿಲ್ಲ. ಅಲ್ಲಿ ಜವಳಿ ಗಿರಣಿಗಳು ಇಲ್ಲ. ಅವರು ಚರಖಾಕ್ಕೆ ಶರಣು ಹೋಗಿಯೂ ಇಲ್ಲ. ಪಂಡಿತ ನೆಹರು ಅವರು ಈ ವಿಷಯವನ್ನು ಕೆಲ ಗಿರಣಿಯೊಡೆಯರಿಗೆ ತಿಳಿಸಿದರು. ಅವರು ಜಾವಾಕ್ಕೆ ಕಳಿಸಲು ಅಷ್ಟಿಷ್ಟು ಬಟ್ಟೆಯನ್ನು ಸಂತೋಷದಿಂದ ಕೊಟ್ಟರು ಹಿಂದುಸ್ತಾನದ ೪೦ ಕೋಟಿ ಜನರಲ್ಲಿ, ೭,೦೦,೦೦೦ ಹಳ್ಳಿಗಳಲ್ಲಿರುವ ೩೦ ಕೋಟಿ ಜನರಾದರೂ ದಿನಕ್ಕೆ ೧॥ ತಾಸು ನೂಲುವ ಹಟ ತೊಟ್ಟರೆ ಅವರು ಹಳ್ಳಿಗಳಿಗೆ ಬೇಕಾದ ಬಟ್ಟೆಯನ್ನಷ್ಟೇ ಅಲ್ಲದೆ ನಗರಗಳಿಗೆ ಕೂಡ ಒದಗಿಸಬಲ್ಲರು. "ಕೈನೂಲಿನ ಪುನರುಜ್ಜೀವನವೊಂದೇ ಹಿಂದುಸ್ತಾನಕ್ಕೆ ಅದರ ಪ್ರಾಚೀನ ವೈಭವವನ್ನು ಮತ್ತೆ ದೊರಕಿಸಿಕೊಡಬಲ್ಲದೆಂಬ ನಿಶ್ಚಯಜ್ಞಾನ ನನಗೆ ಹಿಂದುಸ್ತಾನಕ್ಕೆ ಬರುವ ಮೊದಲೇ ಹೊಳೆದಿತ್ತು. ಎಂದು ಗಾಂಧೀಜಿ ಹೇಳಿದರು. "ರಾಟಿಯು ಮಧ್ಯವರ್ತಿ ಸೂರ್ಯನೆಂದೂ ನಮ್ಮ ಗ್ರಾಮೀಣ ಅರ್ಥಿಕಪ್ರಣಾಳಿಯೆಂಬ ಗ್ರಹಮಂಡಲ ಆ ಸೂರ್ಯನ ಸುತ್ತ ತಿರುಗುತ್ತದೆಯೆಂದೂ ನಾನು ಎಷ್ಟೋ ವೇಳೆ ಹೋಲಿಸಿದ್ದುಂಟು. ನಮ್ಮನ್ನು ಎದುರಿಸಿರುವ ಬಿಕ್ಕಟ್ಟನ್ನು ಎದುರಿಸುವಂಗೋಸುವ ಜನಪ್ರಿಯ ಮಂತ್ರಿಗಳು, ಹಳ್ಳಿಗಳು ತಮ್ಮ ಬಟ್ಟೆ ತಾವೇ ಉತ್ಪಾದಿಸಿಕೊಳ್ಳಬೇಕೆಂಬ ಘೋಷಣೆ ಹೊರಡಿಸಬೇಕೆಂದು ನಾನು ಸೂಚಿಸಿದ್ದೇನೆ. ಹಳ್ಳಿಗಳಿಗೆ ಅರಳೆ ಒದಗಿಸಲಾಗುವದು, ಹಳ್ಳಿಗರು ಅದನ್ನು ನೂತು ಬಟ್ಟೆಯಾಗಿ ಮಾಡಬೇಕು. ಇದರಿಂದ ಅವರಿಗೆ ಪುಕ್ಕಟೆ ಸಿಕ್ಕಿದಂತೆ ಬಟ್ಟೆ ಒದಗುವದು. ಅ. ಭಾ. ಚರಖಾ ಸಂಘದವರು ಒಂದು ಯೋಜನೆ ಮಾಡಿ ಅದನ್ನು ಮಂತ್ರಿಗಳ ಮುಂದಿಡಬೇಕಾಗುವದು. ಹಿಂದುಸ್ತಾನದ ವಸ್ತ್ರಹೀನರನ್ನು ವಸ್ತ್ರಾಚ್ಛಾದಿತರಾಗಿ ಮಾಡಲು ಇದರ ಹೊರತು ಅನ್ಯ ಉಪಾಯವಿಲ್ಲೆಂದು ಮಂತ್ರಿಗಳು ಮನಗಂಡರೆ ಈ ಯೋಜನೆ ಏನೂ ತೊಡಕಿಲ್ಲದೆ ಮುಂದೆ ಸಾಗುವದು. ಈಗ ನಗರವಾಸಿಗಳು ತಮಗೆ ಖಾದೀ ಭಾಂಡಾರದಲ್ಲಿ ಬಟ್ಟೆ ಸಿಗುವದಿಲ್ಲವೆಂದೂ ತಾವು ಬಟ್ಟೆಯ ಬೆಲೆಯನ್ನು ಸ್ವಲ್ಪ ಮಟ್ಟಿಗೆ ತಾವೇ ನೂತ ನೂಲಿನ ರೂಪದಲ್ಲಿ ಸಲ್ಲಿಸಬೇಕಾಗುವದೆಂದೂ ದೂರಿಕೊಳ್ಳುತ್ತಿದ್ದಾರೆ. ಖಾದಿ ಯೋಜನೆಯಲ್ಲಿರುವ ಹೊಸ ಅಂತಸ್ತ್ವದ ಅರಿವು ಆದಾಗಾದರೆ ಈ ದೂರುಗಳು ಮಾಯವಾಗದಿರವು. ಹಳ್ಳಿಗರಿಂದ ನಿರೀಕ್ಷಿಸಲಾದಂತೆ ನಗರವಾಸಿಗಳೂ ತಮಗೆ ಬೇಕಾದ ಖಾದಿಯನ್ನು ತಾವೇ ಹುಟ್ಟಿಸಿಕೊಳ್ಳಲು ಯಾವ ಅತಂಕವೂ ಇಲ್ಲ.

ಕಸ್ತೂರಬಾ ನಿಧಿ

ಅದೇ ಭಾಷಣದಲ್ಲಿ ಗಾಂಧೀಜಿ ಕಸ್ತೂರಬಾ ಸ್ಮಾರಕ ನಿಧಿಯ ಕೆಲಸವನ್ನು ಕುರಿತು ಪ್ರಸ್ತಾಪಿಸಿದರು. ಅದರ ಕೆಲಸ ಅ. ಭಾ. ಚರಖಾ ಸಂಘದಕ್ಕಿಂತಲೂ ಕಠಿನವಾದುದೆಂದು ಅವರು ಅರಿಯಬಲ್ಲರು. ಅದು ಒಂದೂ ಕಾಲ ಕೋಟಿ ರೂಪಾಯಿಯನ್ನು ಕೂಡಿಸಿತ್ತು. ಆದರೆ ಅದನ್ನು ಹಳ್ಳಿಗಳಲ್ಲಿ ಹೆಂಗಸರು ಮಕ್ಕಳ ಹಿತಕ್ಕಾಗಿ ಉಪಯೋಗಿಸಬೇಕಾಗಿದೆ. "ಉದಾಹರಣೆಗಾಗಿ" ಹಳ್ಳಿಗಳಲ್ಲಿನ ಹೆರಿಗೆಯ ಕೆಲಸವನ್ನು ತೆಗೆದುಕೊಳ್ಳಬಹುದು ಹಳ್ಳಿಯ ಸೂಲಗಿತ್ತಿಯರು ಅಜ್ಞಾನಿಗಳೂ ಅಸ್ವಚ್ಛರೂ ಇರುತ್ತಾರೆ. ಹಳ್ಳಿಯ ಸ್ತ್ರೀಯರು ಪೇಟೆಯವರಿಗಿಂತ ಗಟ್ಟಿಮುಟ್ಟಾಗಿರುವರು. ಆದರೂ ಪ್ರಕೃತಿನಿಯಮಗಳನ್ನು ಉಲ್ಲಂಘಿಸು

೯ನೇ ಪುಟ ನೋಡಿರಿ

(೮ನೇ ಪುಟದಿಂದ ಮುಂದರಿದುದು)

ವದು ಸಾಧ್ಯವಿಲ್ಲ. ಹಳ್ಳಿಯ ಸೂಲಗಿತ್ತಿಗೆ ಸ್ವಚ್ಛತೆಯ ರೀತಿನೀತಿ ಕಲಿಸುವದೇನೂ ಹಗುರಾದ ಕೆಲಸವಲ್ಲ. ಅದು ವಯಸ್ಕರ ಶಿಕ್ಷಣದ ಕ್ಷೇತ್ರಕ್ಕೆ ಸೇರಿದ್ದು. ವಯಸ್ಕರಿಗೆ ಕಲಿಸುವ ಕೆಲಸ ಬಾಲಕರ ಶಿಕ್ಷಣಕ್ಕಿಂತ ಎಷ್ಟೋ ಕಠಿಣವೆಂದು ಎಲ್ಲರೂ ಬಲ್ಲರು. ಈ ಒಂದೂ ಕಾಲು ಕೋಟಿ ರೂಪಾಯಿಗಳನ್ನೂ ನಗರ ಮಾದರಿಯ ಒಂದೆರಡು ಆಸ್ಪತ್ರೆಗಳನ್ನು ತೆಗೆಯಲು ನಾನು ವೆಚ್ಚ ಮಾಡಿಬಿಡಲ್ಲೆ. ಆದರೆ ಅದರಿಂದ ಹಳ್ಳಿಯ ಹೆಂಗಸರಿಗೆ ಮಕ್ಕಳಿಗೆ ನಿಜವಾದ ಸೇವೆ ಸಲ್ಲಿಸಿದಂತಾಗಲಿಲ್ಲ. ನಾನು ಹಣವನ್ನು ದುಂದುಮಾಡಲು ಸಿದ್ಧವಿಲ್ಲ. ಕೆಲಸ ಬಹಳ ಮೆಲ್ಲಗೆ ಸಾಗಿದೆಯೆಂದು ಸಾರ್ವಜನಿಕರಿಗೆ ಅನಿಸುತಿದೆಯೆಂದು ನನಗೆ ಗೊತ್ತು. ಆದರೆ ಅವರು ಸ್ಥೈರಣೆ ಕಳೆದುಕೊಳ್ಳಬಾರದು. ಕೆಲಸ ಮೆಲ್ಲಗೆ ಸಾಗಿದ್ದರೂ ಸರಿಯಾಗಿ ಸಾಗಿದೆ. ನಾವು ಜನಸಂಚಾರವಿಲ್ಲದ ಸಮುದ್ರದಲ್ಲಿ ಹಡಗು ಹರಿಬಿಟ್ಟಿದ್ದೇವೆ. ಅದ್ದರಿಂದ ಎಚ್ಚರಿಕೆಯಿಂದ ಸಾಗುವದು ಅವಶ್ಯ.

ಸ್ವರ್ಣಮಯ ಸಿಂಹಳ

ಪುಣೆಯಿಂದ ಬೀಳ್ಕೊಳ್ಳುವ ದಿನದ ಪ್ರಾರ್ಥನಾ ಭಾಷಣವನ್ನ ಗಾಂಧೀಜಿಯವರು ಸಿಂಹಳದಲ್ಲಿರುವ ಹಿಂದೀಯರ ಸ್ಥಿತಿಗತಿಗಳನ್ನು ಬಣ್ಣಿಸಲು ವಿನಿಯೋಗಿಸಿದರು. ಅವರು ಸಿಂಹಳಕ್ಕೆ ಬಹಳ ವರ್ಷ ಹಿಂದೆ ಭೆಟ್ಟಿಕೊಟ್ಟದ್ದರು. ಮಂಜುಮುಸುರಿದ ಹಿಮಾಲಯದ ನಡುವಿನ ಕಾಶ್ಮೀರದೇಶ ಭಾರತಮಾತೆಯ ಕಿರೀಟವಾಗಿದ್ದರೆ, ಸಿಂಹಳ ಅಳೆಯ ಕಂಠವನ್ನು ಬಳಸಿದ ಕೇಯೂರ ಹಾದ ನಾಯಕಮಣಿಯಾಗಿದೆಯೆಂದು ಅವರು ನುಡಿದರು. ಸ್ವರ್ಣಮಯ ಸಿಂಹಳವೆಂಬ ಬಿರುದು ಅದಕ್ಕೆ ಚನ್ನಾಗಿ ಶೋಭಿಸುತ್ತದೆ. ಸಿಂಹಳದ ಬೆಳವಣಿಗೆಯಲ್ಲಿ ಹಿಂದೀಯರು ಮಹತ್ವದ ಪಾತ್ರ ವಹಿಸಿರುವರು. ಈಗ ಸಿಂಹಳೀಯರಿಗೆ ಒಂದು ಬಗೆಯ ರಾಜ್ಯಘಟನೆ ದೊರಕಿರುವದರಿಂದ (ಆ ಘಟನೆಯಲ್ಲಿ ಅಂಥ ಮಹತ್ವಾದ್ದೇನೂ ಇಲ್ಲ ಮತ್ತೆ!) ಹಿಂದೀಯರನ್ನು ಹೊರದೂಡಬೇಕೆಂದು ಅವರು ಅಪೇಕ್ಷಿಸುತ್ತಾರೆ. ದಕ್ಷಿಣ ಅಫ್ರಿಕೆಯಲ್ಲಿ ಹೇಗೋ ಹಾಗೆ ಇಲ್ಲಿಯೂ ಹಿಂದೀಯರು ಕೂಲಿಕಾರರಾಗಿ ಹೋದರು. ಅವರು ಅತ್ಯಂತ ಕಠಿಣವೂ ಅನಾರೋಗ್ಯಕರವೂ ಆದ ಸ್ಥಿತಿಯಲ್ಲಿ ಕೆಲಸಮಾಡಿದರು. ಅವರು ಅಲ್ಲಿಯೇ ವಸತಿಯನ್ನೂ ಮಾಡಿದರು. ಈಗ ಈ ದೇಶವನ್ನು ಬಿಟ್ಟು ಹೊರಡಿರೆಂದರೆ ಹೇಳಿದರೆ ಅವರಿಗೆ ಬಹಳ ಸಂಕಟವಾಗುವದು ಸ್ವಾಭಾವಿಕ. ಅವರು ಸಿಂಹಳೀಯರಿಗೆ ಸಮಾನವಾದ ನಾಗರಿಕ ಹಕ್ಕುಗಳನ್ನು ಕೇಳುತಿದ್ದಾರೆ. ಸಿಂಹಳೀಯರು ಹೇಳುತ್ತಾರೆ, ಹಿಂದೀಯರು ಏಕಕಾಲಕ್ಕೆ ಎರಡು ದೋಣಿಗಳಲ್ಲಿ ಕಾಲಿಡುವದು ತರವಲ್ಲ, ಎಂದು. ಅವರು ಹಿಂದೀಯರಾಗಿದ್ದರೆ ಹಿಂದುಸ್ತಾನಕ್ಕೆ ಮರಳಬೇಕು. ಅಲ್ಲದಿದ್ದರೆ ಅವರು ಸಿಂಹಳೀಯರೇ ಆಗಬೇಕು. ಇನ್ನು ಯಾವುದೇ ಸ್ಥಿತಿಯಲ್ಲಿ ಹಿಂದೀಯರನ್ನು ಸಿಂಹಳದಲ್ಲಿ ಇರಗೊಡಿಸಬಾರದೆನ್ನುವವರೂ ಬೇರೆ ಕೆಲವರಿದ್ದಾರೆ. ಇದು ವಿಚಿತ್ರ. ಹಿಂದೀಯರೂ ಸಿಂಹಳೀಯರೂ ಅಣ್ಣತಮ್ಮಂದಿರು. ಹಿಂದುಸ್ತಾನ ಸಿಂಹಳಗಳನ್ನು ಒಂದು ಅಗಲಕಿರಿದಾದ ಜಲಸಂಧಿ ಬೇರ್ಪಡಿಸಿದೆ. ಬಲಿಷ್ಠನಾದ ಮನುಷ್ಯ ಆ ಜಲಸಂಧಿಯನ್ನು ಈಸಿ ದಾಟಬಲ್ಲ. ಇಬ್ಬರೂ ಶ್ವೇತೇತರ ಜನರು ಸಿಂಹಳೀಯರು ಬೌದ್ಧ ಮತಾನುಯಾಯಿಗಳು. ಆ ಧರ್ಮ ಹುಟ್ಟಿದ್ದು ಹಿಂದುಸ್ತಾನದಲ್ಲಿ. ಹಿಂದೀಯರಿಗೂ ಸಿಂಹಳೀಯರಿಗೂ ಜಗಳವಾದರೆ ಹೇಗೆ ಸಹ್ಯವಾಗಬೇಕು? ಆ ಒಡಕನ್ನು ಮುಚ್ಚಿ ಎರಡೂ ದೇಶಗಳ ಜನರು ಒಂದಾಗಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಈ ವಿಷಯವನ್ನು ವಿಚಾರಿಸಲು ಅ. ಭಾ. ಕಾಂಗ್ರೆಸ್ಸು ನಾಲ್ಕು ಜನರ ಸಮಿತಿಯೊಂದನ್ನು ನೇಮಿಸುವ ಗೊತ್ತುವಳಿಯನ್ನು ಸ್ವೀಕರಿಸಿದೆ. ಅದು ಕಾಂಗ್ರೆಸ ಅಧ್ಯಕ್ಷ, ಶ್ರೀ ರಾಜಗೋಪಾಲಾಚಾರಿ, ಶ್ರೀ ರಾಮಚಂದ್ರನ್ ಮತ್ತು ಶ್ರೀ ಆರ್ಯನಾಯಕಂ ಇವರನ್ನೊಳಗೊಂಡಿದೆ. ಸಿಂಹಳದಲ್ಲಿರುವ ಹಿಂದೀ ಕೂಲಿಕಾರರು ಸಂಪು ಹೂಡಿದ್ದರು. ಕಾಂಗ್ರೆಸು ಆ ಸಂಪನ್ನು ನಿಲ್ಲಿಸಲು ಸಲಹೆ ಕೊಟ್ಟಿದೆ. ಕಾಂಗ್ರೆಸ್ಸಿಗೆ ಸಿಂಹಳೀಯರನ್ನು ಪೇಚಿಗೆ ಗುರಿಮಾಡುವ ಮನಸಿಲ್ಲ. ಅದಕ್ಕೆ ಸೌಹಾರ್ದದ ಒಡಂಬಡಿಕೆ ಬೇಕಾಗಿದೆ.

ಈ ವಿಷಯದಲ್ಲಿ ನಮ್ಮ ಕರ್ತವ್ಯವೇನು?—ಗಾಂಧೀಜಿ ಕೇಳಿದರು. ಉಭಯತರಿಗೂ ವಿವೇಕ ಪ್ರಕಾಶನೀಯಬೇಕೆಂದು ನಾವೆಲ್ಲರೂ ದೇವರನ್ನು ಪ್ರಾರ್ಥಿಸೋಣ. ಸಮುದ್ರದಾಚೆಯ ದೇಶಗಳಲ್ಲಿರುವ ನಮ್ಮ ಬಾಂಧವರು ಹೇಗೆ ಬಾಳುವೆ ಮಾಡುತಿರುವರೆಂದು ಅರಿತುಕೊಳ್ಳುವದು ನಮ್ಮ ಕರ್ತವ್ಯ. "ಅದಕ್ಕಾಗಿಯೆ ನಾನು ಸಿಂಹಳದಲ್ಲಿರುವ ಹಿಂದೀಯರನ್ನು ಕುರಿತು ಎಲ್ಲವನ್ನೂ ನಿಮಗೆ ವಿವರಿಸಿದೆನು." ಎಂದು ಗಾಂಧೀಜಿ ಮುಗಿಸಿದರು.

ಕೊನೆಗೊಮ್ಮೆ ಪಂಚಗಣಿಗೆ

ಗಾಂಧೀಜಿಯ ವಾರ್ಷಿಕ ಪಂಚಗಣಿ ಯಾತ್ರೆ, ಮುಂದೆ ಬಿದ್ದುದರಿಂದ ಅವರ ಹೃದಯ ಅಷ್ಟೇನೂ ನೊಂದಿರಲಿಲ್ಲ. ಏಕೆಂದರೆ ಅದು ಅವರ ಪಾಲಿಗೆ ಒಂದು ವಿಲಾಸಪ್ರವಾಸವಾಗಿರದೆ ವಾರ್ಧಕ್ಯವೆಂಬ ಗೆಳೆಯನಿಗಾಗಿ ಮಾಡಲೇಬೇಕಾದ ಕರ್ತವ್ಯಕರ್ಮವೇ ಆಗಿದೆ. ಇಲ್ಲಿ ಕಳೆದ ವರ್ಷ ಅವರು ಇಳಿದುಕೊಂಡಿದ್ದಾಗ ಯೋಜಿಸಲ್ಪಟ್ಟದ್ದ ಬಡವರ ಧರ್ಮಶಾಲೆ ಅಥವಾ ಮುಸಾಫರಖಾನೆಯಲ್ಲಿಯೆ ಉಳಿದುಕೊಳ್ಳಲು ಅವರಿಗೆ ಸಂತೋಷವೇ ಎನಿಸುತಿತ್ತು. ಆದರೆ ಆ ಗೋಸ್ವರ ಒಂದು ಯೋಗ್ಯ ಮನೆಯನ್ನು ಈಗಾಗಲೆ ಕೊಂಡುಕೊಂಡಿದ್ದರೂ ಅದಕ್ಕೆ ದುರಸ್ತಿಗಳಾಗಬೇಕಾಗಿವೆ. ಅದು ಮುಂದಿನ ವರ್ಷದ ವರೆಗೆ ಸಿದ್ಧವಾಗುವಂತಿಲ್ಲ. ಕಳೆದ ಮೂರು ತಿಂಗಳಿನ ಅತಿಶ್ರಾಂತ ಪರಿಶ್ರಮದ ನಂತರ ಅವರು ಇದೀಗ ಇಲ್ಲಿಗೆ ಬಂದು ಪುನಃ ಪ್ರಾಣದಾಯಕ ಮೌನಪೀಯೂಷವನ್ನು, ಪಂಚಗಣಿಯನ್ನು ಬಳಸಿರುವ ಶ್ಯಾಮಲ ಗಿರಿಗಳಿಂದ ಬೀಸುವ ಸುರಭಿತ ಶೀತಲ ಮಾರುತವನ್ನು ಮನಸಾರೆ ಆಪೋಶನ ಮಾಡಬಲ್ಲವರಾಗಿದ್ದಾರೆ. ಸಾರ್ವಜನಿಕ ಪ್ರಾರ್ಥನೆ ಮೊದಲಿನಂತೆ ನಮ್ಮ ನೆರೆಯಲ್ಲಿರುವ ಹೆಣ್ಣುವಕ್ಕಳ ಹಾಯಸ್ಕೂಲಿನಲ್ಲಿ ನಡೆಯುತ್ತದೆ. ಆ ಶಾಲೆಯ ಪಾರ್ಸಿ ಹೆಣ್ಣುಮಕ್ಕಳು ಪ್ರಾರ್ಥನಾ ಸಭೆಯಲ್ಲಿ ಹಾಡಿದ ಸುಮಧುರ ಗೀತಗಳು ಗಾಂಧೀಜಿಯ ಮನಸ್ಸಿಗೆ ಮುಟ್ಟಿದವು. ಆ ಹಾಡಿನ ವಸ್ತುವೇ ಹಾಗಿತ್ತೊ ಅಥವಾ ಅಧ್ಯಾತ್ಮಿಕ ಭಗಿರಥ ಪ್ರಯತ್ನದ ನಂತರ ಅತ್ಯಾವಶ್ಯಕವಾಗುವ ವಿಶ್ರಾಂತಿಯ ಕೃಪೆಯಿಂದಲೋ ಕಳೆದೆರಡು ದಿನಗಳಲ್ಲಿ ಅವರು ಪ್ರಾರ್ಥನಾ ಸಭೆಗಳಲ್ಲಿ ಮಾಡಿದ ಭಾಷಣಗಳಲ್ಲಿ ಒಂದು ಬಗೆಯ ಕಾತರತೆಯ, ಅಥವಾ ವಿಷಾದದ ಎಂದರೂ ತಪ್ಪಾಗದು, ರೇಖೆ ಒಡಮೂಡಿತ್ತು.

"ಅಲ್ಲದಿರಲು, ಮಾನವನ ಆತ್ಮ ಬಲು ದೂರ
ಸುಳಿದು ಸುತ್ತಿ
ಕೊನೆಗೊಮ್ಮೆ ಮರಳಿ ತಾ ತನ್ನನಪ್ಪಲಹು—
ದೇನು ವಿಫಲ ವೃತ್ತಿ?"

"ಇದೀಗ ಹಾಡಿದ ಹಾಡಿನಲ್ಲಿ ಜಗತ್ತು ದುಃಖ ಯಾತನೆಗಳ ಬೀಡೆಂದು ಹೇಳಿರುವದು ಉಚಿತವೇ ಆಗಿದೆ." ಎಂದು ಅವರು ಮೊದಲು ದಿನ ಹೇಳಿದರು. "ಅದನ್ನೆದುರಿಸುವ ಧೈರ್ಯವನ್ನು ನಮಗೆ ದೇವರೊಬ್ಬನೆ ಕೊಡಬಲ್ಲನು. ಆದರೆ ಕವಿ ಜಗತ್ತನ್ನು ಮಾಯೆ, ಸ್ವಪ್ನವೆಂದು ಹೇಳಿದ್ದಾನೆ. ಈ ಪರಿವರ್ತನಶೀಲವಾದ ಧಾವಿಸುವ ಜಗತ್ತಿನಲ್ಲಿ, ಎಲ್ಲವೂ ನ್ಯೂಗರೆಯುತಿರುವ ಮಾಯಕದಂತಿರುವ ಪ್ರಪಂಚದಲ್ಲಿ ಆನಂದ ಅಥವಾ ಜನರು ಸುಖವೆಂದು ಕರೆಯುತಿರುವ ಸಂವೇದ ಬರಿ ಮಾಯೆಯೋ ಸ್ವಪ್ನವೋ ಆಗಿರಬಹುದು, ನಿಜವಾಗಿ ಅದು ಹಾಗೆಯೆ ಇದೆ. ಆದರೆ ನಮ್ಮ ಸಹಬಾಂಧವರ ಕ್ಲೇಶಗಳನ್ನು ಮಿಥ್ಯೆಯೆಂದು ಮಾಯೆಯೆಂದು ಅಲ್ಲಿ ಹಾಕಿ ನಾವು ಕರ್ತವ್ಯದಿಂದ ನೈತಿಕ ವಿಮುಕ್ತಿಯನ್ನು ಪಡೆಯಲಾರೆವು. ಕನಸುಗಳು ಕೂಡ ಅವುಗಳದ್ದಷ್ಟು ಕಾಲ ಸತ್ಯವೇ, ವಾಸ್ತವಿಕವಾಗಿರುವವು. ಅಂತೆಯೆ ದುಃಖಪಡುತಿರುವವನಿಗೆ ಅವನ ಕ್ಲೇಶಗಳೂ ಕಠೋರವಾದ ಸತ್ಯಗಳಾಗಿರುವವು. ಒಟ್ಟಿನ ಮೇಲೆ ಜಗತ್ತು ಸತ್ಯವೇ ಇರಲಿ ಮಿಥ್ಯೆಯೆ ಇರಲಿ, ಜಗತ್ತಿನಲ್ಲಿ ನಾವಿರುವಷ್ಟು ಕಾಲ ನಾವು ಅರಿತುಕೊಂಡು, ಎದುರಿಸಿ, ವಿಧಿಪೂರ್ವಕ ಪಾಲಿಸಿಯೇತೀರಬೇಕಾದ ಕೆಲ ಕರ್ತವ್ಯಗಳಿವೆ."

ಎರಡನೆಯ ದಿನದ ಉಪದೇಶ "ಬಡತನದ ಭಾಗ್ಯ" ವನ್ನು ಕುರಿತದ್ದು ಅಂದು ಹಾಡಿದ ಗೀತದಲ್ಲಿ ದೇವರು ಬಡವರ ಬಂಧುವೆಂದು ಬಣ್ಣಿಸಿತ್ತು. ನಮ್ಮ ದೇಶದಲ್ಲಿ ಬಡತನಕ್ಕೆ ಒಂದು ಗೌರವವಿದೆ, ಎಂದು ಗಾಂಧಿಜಿ ಹೇಳಿದರು. ಇಲ್ಲಿ ಬಡವನು ತನ್ನ ಬಡತನಕ್ಕಾಗಿ ನಾಚಿಕೆಪಡುವದಿಲ್ಲ. ಶ್ರೀಮಂತನ ಅರಮನೆಗಿಂತ ತನ್ನ ಗುಡಿಸಲೇ ತನಗೆ ಮೇಲೆಂದು ಅವನು ಭಾವಿಸುತ್ತಾನೆ. ಅದರಲ್ಲೆ ಅವನು ಹೆಮ್ಮೆಯನ್ನು ಕೂಡ ತಾಳುತ್ತಾನೆ. ಪಾರ್ಥಿವ ವಸ್ತುಗಳಲ್ಲಿ ಅವನು ಬಡವನಾಗಿದ್ದರೂ ಅಧ್ಯಾತ್ಮ ಸಂಪತ್ತಿಯಲ್ಲಿ ದರಿದ್ರನಲ್ಲ. ಸಂತೃಪ್ತಿಯೇ ಅವನ ನಿಧಿ "ನಾವೆಲ್ಲರೂ ಶ್ರೀಮಂತರಾಗಿ ಅರಮನೆಗಳಲ್ಲಿರುವದು ಸಾಧ್ಯವಿಲ್ಲವೆಂದಮೇಲೆ ಶ್ರೀಮಂತರ ಅ ರ ಮ ನೆ ಗ ಳ ನ್ನಾ ದ ರೂ ಕೆಡಹಿ ಅವರನ್ನು ನಮ್ಮ ಮಟ್ಟಕ್ಕೆ ಇಳಿಸೋಣ" ಎಂದು ಅವನು ಹೇಳಬಹುದಾಗಿತ್ತು- ಆದರೆ ಅದರಿಂದ ಅವನಿಗಾಗಲಿ ಇನ್ನಾರಿಗಾಗಲಿ ಸುಖ-ಶಾಂತಿ ದೊರಕಿದಂತಾಗಲಿಲ್ಲ. ಪರಮಾತ್ಮನು ಆ ಬಗೆಯ ಬಡವನಿಗೆ ಬಂಧುವೂ ಆಗಲಾರ, ಉದ್ಧಾರಕನೂ ಆಗಲಾರ. ಪಾರ್ಥಿವ ವಸ್ತುಗಳ ಒಡೆತನದ ಅಸಮಾನತೆಯಿಂದ ಉದ್ಭವಿಸಿದ ಬಡತನ ಜಗತ್ತಿನ ಎಲ್ಲ ಕಡೆಗಳಲ್ಲಿಯೂ ಇದ್ದೇ ಇದೆ. ಅದು ಬಹಳ ಮಟ್ಟಿಗೆ ಅನಿವಾರ್ಯವೇ ಆಗಿರಬಹುದು. ಏಕೆಂದರೆ ಬುದ್ಧಿಬಲದಲ್ಲಾಗಲಿ ಅವಶ್ಯಕತೆಗಳಲ್ಲಾಗಲಿ ಎಲ್ಲ ಜನರು ಸಮಾನರಾಗಿಲ್ಲ ಅಪಾರ ಸಂಪತ್ತಿಯುಳ್ಳ ಮತ್ತು ಕುಬೇರನನ್ನೇ ದೇವರ ಸ್ಥಾನದಲ್ಲಿಟ್ಟು ಪೂಜಿಸುವ ಅಮೇರಿಕೆಯಲ್ಲಿ ಕೂಡ ಬಡವರಿದ್ದಾರೆ ರಂಗೂನದ ಬೀದಿಗಳಲ್ಲಿ ಬಿಕ್ಕೆ ಬೇಡುತಿದ್ದ ಶಾ ಅಲಮನ ಕೆಲ ಬಳಗದವರನ್ನು ಕವಿ ಮಲಬಾರಿಯವರು ಕಂಡಿದ್ದರು. ಅವರು ಆ ವಿಷಯವನ್ನು ಕುರಿತು ಸುಂದರ ಕವಿತೆಯೊಂದನ್ನು ಬರೆದಿದ್ದಾರೆ. ಅದು ತಮ್ಮ ಹೃದಯವನ್ನು ಆಳವಾಗಿ ಅಲುಗಿಸಿದೆಯೆಂದು ಗಾಂಧೀಜಿ ನುಡಿದರು. ಪರಮಾತ್ಮಬಂಧುವೂ ಪರಮಾತ್ಮಸಹಾಯನೂ ಆದವನು ಮಾತ್ರವೆ ನಿಜವಾದ ಶ್ರೀಮಂತನೆಂಬುದು ಅದರ ಸಾರ. ಹಿಂದುಸ್ತಾನದಲ್ಲಿ ಅತಿ ಕಡಿಮೆ ಅವಶ್ಯಕತೆಗಳುಳ್ಳ ಮನುಷ್ಯನೊಬ್ಬನಿದ್ದನು. ಅವನು ತನ್ನ ಕರವಸ್ತ್ರದಲ್ಲಿ ಕಟ್ಟಿಕೊಂಡು ಒಂದಿಷ್ಟು ಹಿಟ್ಟು, ಒಂದು ಚಿಟಿಕೆ ಉಪ್ಪು ಮತ್ತೆ ಕೆಲ ಮೆಣಸಿನಕಾಯಿಗಳನ್ನು ಸಂಗಡ ಒಯ್ಯುತಿದ್ದನು. ಒಂದು ಚಿಕ್ಕ ತಂಬಿಗೆಯೂ ಅದನ್ನು ಬಾವಿಗಿಳಿಸಿ ನೀರೆಳೆಯಲು ಒಂದು ನೇಣು ಅವನ ಹತ್ತಿರ ಇದ್ದವು. ಬೇರೇನನ್ನೂ ಅವನು ಇಟ್ಟುಕೊಂಡಿರಲಿಲ್ಲ ಅವನು ದಿನಕ್ಕೆ ೧೦-೧೨ ಮೈಲುಗಳಂತೆ ನಡೆದು ಪ್ರಯಾಣ ಮಾಡುತಿದ್ದನು ತನ್ನ ಕರವಸ್ತ್ರದಲ್ಲೆ ಹಿಟ್ಟು ಕಲಸಿ, ಕೆಲ ಕೊಂಬೆಗಳನ್ನು ಕೂಡಹಾಕಿ ಬೆಂಕಿ ಮಾಡಿ ಕೆಂಡದಲ್ಲಿಯೆ ರೊಟ್ಟಿ ಸುಡುತಿದ್ದನು. ಅದಕ್ಕೆ 'ಬಾಟಿ' ಯೆಂದು ಹೆಸರು ತಾವು ಅದರ ರುಚಿ ನೋಡಿರುವದಾಗಿಯೂ ಅದು ಬಹಳ ಸವಿಯಾಗಿತ್ತೆಂದೂ ಗಾಂಧೀಜಿ ಹೇಳಿದರು. ರುಚಿ ಆ ರೊಟ್ಟಿಯಲ್ಲಿದ್ದಿರದೆ ಪ್ರಾಮಾಣಿಕ ಪರಿಶ್ರಮದಿಂದುಂಟಾಗುವ ಹಸಿವೆಯಿಂದಲೂ ಆಯಾ ಮನುಷ್ಯನ ಮನಸ್ಸಿನಲ್ಲಿರುವ ತೃಪ್ತಿಯಿಂದಲೂ ಹುಟ್ಟುತ್ತದೆ. ಅಂಥ ಮನುಷ್ಯನಿಗೆ ದೇವರೇ ಸಹಾಯಕನು ಮತ್ತು ಗೆಳೆಯನು ಅವನಿಗೆ ತಾನು ರಾಜಮಹಾರಾಜರಿಗಿಂತಲೂ ಸುಖಿಯೆಂದನಿಸುತ್ತದೆ. ಅಂತರ್ಯದಲ್ಲಿ ಹೆರವರ ಸಂಪತ್ತಿಗೆ ಕರುಬುವವನಿಗೆ ದೇವರು ಗೆಳೆಯನಾಗಲಾರನು. ಎಲ್ಲರೂ ಈ ಮೇಲಿನ ಉದಾಹರಣೆಯನ್ನು ಅನುಸರಿಸಿ ಅನಿರ್ವಚನೀಯ ಶಾಂತಿಯನ್ನೂ ಸುಖವನ್ನೂ ಅನುಭವಿಸಿ ಅವನ್ನು ಇತರರ ಮೇಲೆ ಬಿಂಬಿಸಬಹುದು. ಬದಲಿಗೆ ಯಾರಾದರೂ ಶ್ರೀಮಂತಿಕೆಗಾಗಿ ಆತುರಪಟ್ಟರೆ ಒಂದಲ್ಲ ಒಂದು ಬಗೆಯ ಶೋಷಣೆಯನ್ನು ನಡೆಸಬೇಕಾಗುವದು. ಅದರೂ ಕೋಟ್ಯಂತರ ಜನರು ಕೋಟ್ಯಧೀಶರಾಗಲಾರರು- ನಿಜವಾದ ಸುಖ ಸಂತೃಪ್ತಿಯಲ್ಲಿಯೂ ಪರಮಾತ್ಮ ಸಂಸರ್ಗದಲ್ಲಿಯೂ ಮಾತ್ರ ಇದೆ.

ಪಂಚಗಣಿ
೧೫—೭—೪೬ ಪ್ಯಾರೇಲಾಲ

ಜ್ಯೂಗಳು ಮತ್ತು ಪ್ಯಾಲಿಸ್ಟ್ಯಾನ

ಜ್ಯೂ-ಅರಬ ವಿವಾದದ ಬಗ್ಗೆ ಸಾರ್ವಜನಿಕವಾಗಿ ಸಾಧಾರಣತಃ ನಾನು ಯಾವ ಬಗೆಯ ಅಭಿಪ್ರಾಯವನ್ನೂ ವ್ಯಕ್ತಮಾಡಿಲ್ಲ. ಸಕಾರಣವಾಗಿಯೆ ನಾನು ಹಾಗೆ ಮಾಡಿರುವೆನು. ಆ ಪ್ರಶ್ನೆಯಲ್ಲಿ ನನಗೇನೂ ವಿವಂಚನೆಯಿಲ್ಲೆಂದು ಇದರರ್ಥವಲ್ಲ. ಆ ಉದ್ದೇಶಕ್ಕಾಗಿ ನನಗೆ ಸಾಕಷ್ಟು ಸಂಗತಿಗಳು ಗೊತ್ತಿಲ್ಲ. ಜ್ಞಾನವು ಇಲ್ಲೆಂಬುದು ಇದರರ್ಥ ಇದೇ ಕಾರಣಕ್ಕಾಗಿ ಜಗತ್ತಿನಲ್ಲಿಯ ಅನೇಕ ಘಟನೆಗಳ ಬಗ್ಗೆ ನಾನು ಬರೆಯುವದನ್ನು ಬಿಟ್ಟುಕೊಟ್ಟಿರುವೆನು. ಅವುಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಮಾಡಲಿಲ್ಲ. ಅದರೂ ನನ್ನ ಸೈತುಂಬ ಬೇರೆ ಕೆಲಸ ಬೇಕಾದಷ್ಟಿವೆ. ವರ್ತಮಾನ ಪತ್ರದಲ್ಲಿಯ ನಾಲ್ಕು ಸಾಲುಗಳಿಂದ ಒಂದು ಬಗೆಯ ಎಚ್ಚರಿಕೆಯಾದಂತಾಗಿದೆ. ಗೆಳೆಯನೊಬ್ಬನು ಆ ಪತ್ರಿಕೆಯ ತುಣುಕನ್ನು ಕಳಿಸಿ ನನಗೊಂದು ಪತ್ರ ಬರೆದಿರುವನು ಅವನು ಅತ್ತ ನನ್ನ ಲಕ್ಷವನ್ನು ಎಳೆದಿರದಿದ್ದರೆ ನಾನು ಅದನ್ನು ಅಲಕ್ಷಿಸಿಯೆ ಬಿಡುತಿದ್ದೆನು. ಲುಯಿ ಫಿಶರರೊಡನೆ ಈ ಸಂಬಂಧದಲ್ಲಿ ದೀರ್ಘ ಸಂಭಾಷಣೆ ನಡಿಸುವಾಗ ಅಂಥ ಹಲವು ಸಂಗತಿಗಳನ್ನು ನಾನು ಹೇಳಿದ್ದುಂಟು. ಜ್ಯೂಗಳಿಗೆ ಜಗತ್ತು ಬಹಳ ಅನ್ಯಾಯ ಮಾಡಿದೆಂದು ನಾನು ನಂಬುತ್ತೇನೆ. ಯುರೋಪಿನಲ್ಲಿಯ ಅನೇಕ ಭಾಗಗಳಲ್ಲಿಯ ಜ್ಯೂ ವಸತಿಗಳಿಗೇ ಘೆಟ್ಟೋ ಎಂಬ ಹೆಸರಿದೆಂದು ನನಗೆ ತಿಳಿದ ಮಟ್ಟಿಗೆ ಹೇಳಬಲ್ಲೆನು.

ನಿರ್ದಯತನದಿಂದ ಅವರನ್ನು ಛಲಿಸಿರದಿದ್ದರೆ ಅವರು ಬಹುಶಃ ಪ್ಯಾಲಿಸ್ಟ್ಯಾನಕ್ಕೆ ಮರಳಿ ಬರುವ ಪ್ರಶ್ನೆಯೇ ಉದ್ಭವಿಸುತಿರಲಿಲ್ಲೆಂದು ಹೇಳಬಹುದು ಅವರು ಸಲ್ಲಿಸಿದ ಮಹತ್ವದ ಕಾಣಿಕೆಗಾಗಿಯೇ ಇಡೀ ಜಗತ್ತು ಅವರ ಮನೆಯಾಗುತ್ತಿತ್ತು.

ಆದರೆ ಅವರು ಅಮೇರಿಕೆ ಮತ್ತು ಬ್ರಿಟನ್‌ದ ಸಹಾಯದಿಂದ ಮತ್ತು ಈಗ ತೀವ್ರ ದಬ್ಬಾಳಿಕೆಯಿಂದ ಪ್ಯಾಲಿಸ್ಟ್ಯಾನದಲ್ಲಿಯೇ ವಾಸಿಸಬೇಕೆಂಬ ಹಟ ಹಿಡಿದು ಬಹಳ ತಪ್ಪು ಮಾಡಿದರೆಂದು ನನ್ನ ಅಭಿಪ್ರಾಯ. ಅವರ ನಾಗರಿಕತೆಯಿಂದಲೆ ಜಗತ್ತಿನ ಯಾವದೇ ದೇಶದಲ್ಲಿ ಅವರಿಗೆ ಸನ್ಮಾನನೀಯ ಅತಿಥ್ಯ ಸಿಕ್ಕುತಿತ್ತು. ಮಿತವ್ಯಯವೃತ್ತಿ, ಜ್ಞಾನವೈವಿಧ್ಯ ಮತ್ತು ಪ್ರಚಂಡ ಉದ್ಯಮ ಮೊದಲಾದವುಗಳಿಂದ ಅವರಿಗೆ ಎಲ್ಲೆಲ್ಲಿಯೂ ಸ್ವಾಗತಸಿಕ್ಕುತ್ತಿತ್ತು. ಹೊಸ ಒಡಂಬಡಿಕೆಯ ಅಪಾರ್ಥಮಾಡಿಕೊಂಡು ಕ್ರಿಶ್ಚನ್‌ರು ಅವರ ಬಗ್ಗೆ ಪೂರ್ವಗ್ರಹ ಮಾಡಿಕೊಂಡು ಅವರನ್ನು ಬಹಿಷ್ಕರಿಸಿದ್ದು ಕ್ರಿಶ್ಚನ ಸಮಾಜಕ್ಕೇ ಕಲಂಕಪ್ರಾಯವಾಗಿದೆ. "ಯಾವನೊಬ್ಬ ಜ್ಯೂ ತಪ್ಪು ಮಾಡಿದರೆ ಇಡೀ ಜ್ಯೂ ಸಮಾಜವನ್ನೇ ಅದಕ್ಕಾಗಿ ನಿಂದಿಸತಕ್ಕದ್ದು." ಐನ್‌ಸ್ಟೈನ್‌ನಂಥ ಯಾವನೊಬ್ಬ ಜ್ಯೂ ಮಹತ್ವದ ಸಂಶೋಧನೆ ಮಾಡಿದರೆ ಇಲ್ಲವೆ ಮುತ್ತೊಬ್ಬನು ದುಃಸಾಧ್ಯ ಸಂಗೀತವನ್ನು ರಚಿಸಿದರೆ ಅದರ ಶ್ರೇಯಸ್ಸೆಲ್ಲ ಕೇವಲ ಲೇಖಕರಿಗೇ ಸಲ್ಲುವದು. ಅದು ಅವರ ಜಾತಿಗೆ ಸಲ್ಲಲಾರದು. ಜ್ಯೂಗಳ ದುರಂತ ಛಲನೆಗಾಗಿ ಅವರ ದುರ್ದೆಸೆಗಾಗಿ ನನ್ನ ಸಹಾನುಭೂತಿಯಿರುವದೆಂಬುದು ಆಶ್ಚರ್ಯಕರವಲ್ಲ. ಆದರೆ ಇಂಥ ದುರ್ದೆಸೆಯಿಂದ ಅವರು ಶಾಂತಿಪಾಠವನ್ನು ಕಲಿಯಬೇಕಾಗಿತ್ತು. ಯಾವ ಪ್ರದೇಶದಲ್ಲಿ ತಮಗೆ ಸ್ವಾಗತವಿಲ್ಲವೊ ಅಂಥಲ್ಲಿ ಬಲುಮೆಯಿಂದ ಹೋಗಲು ಅಮೇರಿಕನ್‌ರ ಹಣ ಇಲ್ಲವೆ ಬ್ರಿಟಿಶರ ಶಸ್ತ್ರಾಸ್ತ್ರಗಳನ್ನು ಜ್ಯೂಗಳು ಏಕೆ ಅವಲಂಬಿಸಬೇಕು? ಪ್ಯಾಲಿಸ್ಟ್ಯಾನದಲ್ಲಿ ಒತ್ತಾಯದಿಂದ ವಸತಿಮಾಡಲು ಅವರು ಕ್ರಾಂತಿಗೇಕೆ ಎಳಸಬೇಕು? ಅವರು ತಮ್ಮ ಶ್ರೇಷ್ಠ ಮುನಿಗಳು ಕಲಿಸಿದ ಅನುಪಮ ಅಹಿಂಸಾಸ್ತ್ರದ ಉಪಯೋಗವನ್ನು ಅವರು ಮಾಡಿದ್ದರೆ. ಅವರ ಪ್ರಶ್ನೆ ಇಡೀ ಜಗತ್ತಿನ ಪ್ರಶ್ನೆಯಾಗುತ್ತಿತ್ತು. ಜ್ಯೂಗಳಾಗಿದ್ದ ಜೀಸಸ್‌ರು ಬಳಲುತಿರುವ ಜಗತ್ತಿಗಾಗಿ ಅನಂದದಿಂದ ಮುಳ್ಳಿನ ಕಿರೀಟವನ್ನೇ ಹಾಕಿಕೊಂಡರು. ಜ್ಯೂಗಳು ಹೀಗೆ ಮಾಡಿದ್ದರೆ ಜಗತ್ತಿಗೆ ಅವರು ಸಲ್ಲಿಸಿದ ಅನೇಕ ಕಾಣಿಕೆಗಳಲ್ಲಿ ಇದು ಅತ್ಯುತ್ತಮ ಮತ್ತು ಪ್ರಭಾವಶಾಲಿಯಾಗುತಿದ್ದಿತು. ಎರಡು ದೃಷ್ಟಿಯಿಂದ ಅದು ಕಲ್ಯಾಣಕರವಾಗುತಿದ್ದಿತು ಅದರಿಂದ ಅವರು ನಿಜಾರ್ಥದಲ್ಲಿ ಸುಖಿಗಳಾಗುತಿದ್ದರು. ಮತ್ತು ಶ್ರೀಮಂತರಾಗುತಿದ್ದರು. ಅಲ್ಲದೆ ಬಳಲುತಿರುವ ಜಗತ್ತಿಗೆ ಅದೊಂದು ಬಗೆಯ ಶಾಮಕ ಔಷಧವಾಗುತಿದ್ದಿತು.

ಪಂಚಗಣಿ ಮೋ. ಕ. ಗಾಂಧಿ
೧೬-೭-೧೯೪೬

ಟಿಪ್ಪಣಿ— ಮೇಲೆ ಉಲ್ಲೇಖಿಸಿದ ನಾಲ್ಕು ಸಾಲುಗಳು ಇಂತಿವೆ

"ಗಾಂಧಿಯು ಪ್ಯಾಲಿಸ್ಟ್ಯಾನದ ಪ್ರಶ್ನೆಯನ್ನು ಚರ್ಚಿಸಿದರು. 'ಜ್ಯೂಗಳ ಪ್ರಶ್ನೆ ಸಮರ್ಥವಾಗಿದೆ' ಅವರು ಒತ್ತಿಹೇಳಿದರು. ಆದರೆ ಅರಬರಿಗೂ ಅನ್ಯಾಯವಾಗತಕ್ಕದ್ದಲ್ಲ ಎಂದು ಅವರು ಅನಿಸಿದರು"

ಕಸ್ತೂರಬಾ ಸ್ಮಾರಕ ವಿಶ್ವಸ್ತಮಂಡಲ

ಈ ಸ್ಮಾರಕ ನಿಧಿಗಾಗಿ ಎಷ್ಟು ಅವಸರದಿಂದ ಹಣವನ್ನು ಎತ್ತಲಾಯಿತೋ ಅಷ್ಟು ಅವಸರದಿಂದ ಅದನ್ನು ವ್ಯಯಮಾಡುತಿರುವುದಿಲ್ಲ. ಮತ್ತು ಸಾರ್ವಜನಿಕರಿಗೆ ಆ ಹಣದ ವಿನಿಯೋಗವೆಂತಾಗುತಿದೆಂಬುದರ ಸುಳಿವು ಕೂಡ ಹತ್ತುವುದಿಲ್ಲ ಎಂದು ಕೆಲವರು ಆರೋಪಿಸುವುದುಂಟು. ಇವೆರಡೂ ಆರೋಪಗಳು ನಿರಾಧಾರವಾಗಿವೆ. ನಗರವಾಸಿಗಳಿಂದಲೆ ಹೆಚ್ಚು ಹಣ ಸ್ಮಾರಕನಿಧಿಗೆ ಬಂದಿದೆಂಬುದು ನಿಜವಾಗಿದ್ದರೂ ಹಳ್ಳಿಯ ಹೆಣ್ಣುಮಕ್ಕಳು ಮತ್ತು ಚಿಕ್ಕ ಮಕ್ಕಳ ಕಲ್ಯಾಣಕ್ಕಾಗಿ ಈ ಹಣವನ್ನು ಹಳ್ಳಿಗಳಲ್ಲಿಯೇ ವ್ಯಯ ಮಾಡಬೇಕೆಂಬುದೆ ಹಣ ಸಂಗ್ರಾಹಕರ ಉದ್ದೇಶವಾಗಿತ್ತೆಂಬುದೂ ಅಷ್ಟೇ ನಿಜವಾಗಿರುತ್ತದೆ ನಿಧಿಯ ಲೆಕ್ಕ ಪತ್ರಗಳನ್ನು ನೋಡಿದವರಿಗೆ ಆ ಹಣವೆಂತು ವ್ಯಯವಾಗುತಿದೆಂಬುದು ಗೊತ್ತಾಗಲಾರದು. ಈ ಟೀಕಾಕಾರರೆಲ್ಲ ನಗರವಾಸಿಗಳೇ ಆಗಿರುವರು. ಹಳ್ಳಿಗಳು ವೃತ್ತಪತ್ರಗಳನ್ನೋದುವುದಿಲ್ಲ ಅಲ್ಲದೆ ಈ ಹಣವೆಂತು ವ್ಯಯವಾಗುತಿದೆಂಬ ಬಗ್ಗೆಯೂ ಅವರು ಗಮನಿಸುವುದಿಲ್ಲ. ಯಾವ ಹಳ್ಳಿಗಳಲ್ಲಿ ಏನಾದರೂ ಅಲ್ಪಸ್ವಲ್ಪ ಕಾರ್ಯ ಪ್ರಾರಂಭವಾಗಿದೆಯೋ ಅಂಥ ಹಳ್ಳಿಗಳಲ್ಲಿಯ ಜನರು ಅದನ್ನು ಪ್ರತ್ಯಕ್ಷವಾಗಿ ನೋಡುತಿರುವರು.

ನಗರವಾಸಿಗಳಿಗಾಗಿ ಏನಾದರೂ ಕಾರ್ಯಮಾಡಿದ್ದಾದರೆ ಕೂಡಲೆ ಅದಕ್ಕೆ ಪ್ರಸಿದ್ಧಿ ಸಿಕ್ಕುತ್ತದೆ ಕಟ್ಟಡ ಇಲ್ಲವೆ ಪ್ರತಿಮೆ ಕೂಡಲೆ ಪತ್ರಿಕೆಗಳಲ್ಲಿ ಪ್ರಸಿದ್ಧಿಯನ್ನು ಪಡೆಯುತಿವೆ. ಅದರ ತಳಗಲ್ಲು ಕೂಡಿಸುವ ಸಮಾರಂಭ ಜರಗುತಿದೆ ಇಲ್ಲವೆ ಅದರ ಪ್ರಾರಂಭೋತ್ಸವ ಒಳ್ಳೆ ವೈಭವದಿಂದ ಮತ್ತು ಯೋಗ್ಯ ಸಮಾರಂಭದಿಂದ ಜರಗುತ್ತದೆ. ಹಳ್ಳಿಯ ಹೆಣ್ಣು ಮಕ್ಕಳಲ್ಲಿ ಹಳ್ಳಿಯ ಕಾರ್ಯಕ್ಕಾಗಿ ಇಂಥ ಪ್ರಚಾರ ಕಾರ್ಯ ಅಶಕ್ಯವೇ. ಕಸ್ತೂರಬಾ ಸ್ಮಾರಕ ವಿಶ್ವಸ್ತ ಮಂಡಲದಿಂದ ನಡೆದ ಕಾರ್ಯದ ವರದಿಯನ್ನು ಇಂದು ವಾಚಕರು ಆ ಮಂಡಲದ ಮುಖಾಂತರವಾಗಿಯೆ ತಿಳಿದುಕೊಳ್ಳಬಲ್ಲರು. ನಮ್ಮ ಏಳು ಲಕ್ಷ ಹಳ್ಳಿಗಳಲ್ಲಿ ಕೆಲ ಸಾವಿರ ಹಳ್ಳಿಗಳಲ್ಲಿಯಾದರೂ ಕೆಲಸ ನಡೆದು ಆ ಭಾಗದಲ್ಲಿಯ ಹೆಣ್ಣುಮಕ್ಕಳು ಮತ್ತು ಚಿಕ್ಕ ಮಕ್ಕಳು ತಮ್ಮ ಜೀವನದಲ್ಲಿ ಯೋಗ್ಯ ಪಾತ್ರವಹಿಸಲು ಸಮರ್ಥರಾದಾಗಲೆ ಎಲ್ಲರಿಗೂ ತಾನಾಗಿಯೆ ಈ ಕಾರ್ಯದ ಪರಿಚಯವಾಗುವದು. ಹಳ್ಳಿಯ ದಾಯಿಗಳು ಮತ್ತು ಸೂಲಗಿತ್ತಿಯರು ಶಿಕ್ಷಣ ಪಡೆಯುತ್ತಿರುವರೆಂಬುದಿಷ್ಟು ಇಂದು ಎಲ್ಲರಿಗೂ ಗೊತ್ತಾದರೆ ಸಾಕು.

ಪುಣೆಯಲ್ಲಿ ಇತ್ತೀಚೆ ಕೂಡಿದ್ದ ಮಂಡಲದ ಕಾರ್ಯಸಮಿತಿಯಲ್ಲಿ ೨೧ ಪ್ರಾಂತಗಳಲ್ಲಿ ಶಿಕ್ಷಣ ಶಿಬಿರಗಳನ್ನು ತೆರೆಯಬೇಕೆಂದು ಗೊತ್ತಾಗಿ ಅವುಗಳಿಗಾಗಿ ಹಣವನ್ನು ಮಂಜೂರು ಮಾಡುವ ಗೊತ್ತುವಳಿ ಸ್ವೀಕೃತವಾಯಿತು. ಈ ಶಿಬಿರಗಳಲ್ಲಿ ಶಿಕ್ಷಣ ಹೊಂದಿದ ಕಾರ್ಯಕರ್ತರೆಲ್ಲ ಹಳ್ಳಿಗಳಿಗೇ ಹೋಗುವರಾದ್ದರಿಂದ ನಗರಗಳಲ್ಲಿ ಅವರ ಶೋಕೊಂಡನ್ನು ಏರ್ಪಡಿಸದಿದ್ದರೆ ನಗರವಾಸಿಗಳಿಗೆ ಅವರ ಬಗ್ಗೆ ಏನೂ ಗೊತ್ತಾಗಲಾರದು. ಆದರೆ ಹಾಗೆ ಮಾಡುವದು ಸಮಿತಿಯ ಇಚ್ಛೆ ಇಲ್ಲ. ಅದು ಯೋಗ್ಯವೂ ಆಗಲಾರದು. ಈಗ ಕೈಕೊಂಡ ಕೆಲಸವು ಹೊಸ ಮಾದರಿಯದೆಂಬ ಅಂಶವನ್ನು ಗಮನಿಸಬೇಕಾಗಿದೆ. ಹೊಸ ವರ್ಗಗಳಿಂದಲೆ ಅದನ್ನು ಸಾಧ್ಯಮಾಡಿಕೊಳ್ಳಬೇಕಾಗಿದೆಂಬದನ್ನೂ ಮರೆಯತಕ್ಕದ್ದಲ್ಲ. ಆದುದರಿಂದ ಖಾದಿ ಮತ್ತು ಇತರ ಗ್ರಾಮೋದ್ಯೋಗಗಳಲ್ಲಿ ಹಿಂದೆ ಮತ್ತು ಈಗಲೂ ಯಾವರೀತಿ ಪ್ರಗತಿ ಸಾವಕಾಶವಾಗಿ ಆಯಿತೋ ಅದೇ ಬಗೆಯಾಗಿ ಈ ಕಾರ್ಯದಲ್ಲಿಯೂ ಪ್ರಗತಿ ಸಾವಕಾಶ ಆಗುವುದು ಅನಿವಾರ್ಯ. ಹಳ್ಳಿಗಳತ್ತ ಹಿಂದೆ ಮತ್ತು ಈಗಲೂ ಬಹಳ ಸ್ವಲ್ಪ ಲಕ್ಷ ಕೊಡಲಾಗುತ್ತದೆ ನಗರವಾಸಿಗಳಲ್ಲಿ ಹಳ್ಳಿಗಳ ಮನೋವೃತ್ತಿಯುಂಟಾದಾಗ ಏನಾದರೂ ನಿಜವಾದ ಬದಲಾವಣೆಯಾಗುವದು. ಅಲ್ಲಿಯ ವರೆಗೆ ಪತ್ರಿಕೆಗಳಾಗಲಿ ನಗರವಾಸಿಗಳಾಗಲಿ ಹಳ್ಳಿ ಸಂಘಟನೆಯಲ್ಲಿ ಹೆಚ್ಚು ಲಕ್ಷ ಪೂರಯಿಸಲಾರರು.

ಕೆಲ ಸಲ ಯಾವ ವಿಶಿಷ್ಟ ಉದ್ದೇಶಕ್ಕಾಗಿ ಹಣವನ್ನು ಸಂಗ್ರಹಿಸಲಾಗುತ್ತದೆ. ಯಾವದೇ ಉದ್ದೇಶಸಾಧನೆಗಾಗಿ ನೇರವಾಗಿ ಆ ಹಣವನ್ನು ವ್ಯಯಮಾಡಲಾಗುತ್ತದೆ. ಇದು ನ್ಯಾಯವೂ ಆಗಿದೆ. ಆದರೆ ಕಸ್ತೂರಬಾ ಸ್ಮಾರಕನಿಧಿಯ ಸಂಬಂಧದಲ್ಲಿ ಒಳ್ಳೆ ಎಚ್ಚರಿಕೆಯಿಂದ ಮುಂದಡಿಯಿಡುವದು ಅವಶ್ಯವಾಗಿದೆ. ಸಾವಿರಾರು ಜನರು ಹಣಕೊಟ್ಟಿರುವರು. ಆದರೆ ಹಣ ವೆಚ್ಚಮಾಡುವ ಕ್ಷೇತ್ರ ಮಾತ್ರ ೧೯೦೦ ಮೈಲು ಉದ್ದವಿದ್ದು ೪೦ ಕೋಟಿ ಜನರಿಗೆ ಅದರ ಪರಿಹಾರ ಸಿಕ್ಕಬೇಕಾಗಿದೆ. ಕೆಲಸ ಹೇಗೆ ನಡೆಸಬೇಕು ಎಲ್ಲಿ ಪ್ರಾರಂಭಿಸಬೇಕು ಎಂಬ ವಿಷಯಗಳನ್ನು ನಿರ್ಣಯಿಸಲು ಅವಧಿ ಮತ್ತು ವಿಚಾರ ಅವಶ್ಯ. ಕೂಡಲೆ ಕೆಲಸಗಾರರು ಸಿಕ್ಕಲಿಲ್ಲ. ಈಗ ಅವರ ಶಿಕ್ಷಣಕ್ಕಾಗಿ ವೇಳೆ ಬೇಕಾಗಿದೆ. ಅದುದರಿಂದ ವಿಶ್ವಸ್ತರು ಹಣವನ್ನು ಹಾಳು ಮಾಡುವದಿಲ್ಲ. ಇಲ್ಲವೆ ಅವಶ್ಯ ವಿದ್ದಲ್ಲಿ ವ್ಯಯ ಮಾಡಲು ಹಿಂಜರಿಯುವುದಿಲ್ಲ. ಎಂಬ ಬಗ್ಗೆ ಕಾಣಿಕೆ ಕೊಡುವವರು ಅವರಲ್ಲಿ ವಿಶ್ವಾಸವಿಡಬೇಕು.

ಆಯಾ ಕೇಂದ್ರಗಳಲ್ಲಿ ಬೇರೆ ಸಮಿತಿಗಳು ಸ್ಥಾಪಿಸಲ್ಪಡುವದರಿಂದ ಕೇವಲ ಕಾಣಿಕೆಕೊಟ್ಟವರೆ ಅವುಗಳಲ್ಲಿರಬೇಕೆಂಬ ತಕರಾರುಗಳು ಇದ್ದೇ ಇವೆ. ಆದರೆ ಹಾಗೆ ಮಾಡದೆ ಕಾಣಿಕೆ ಕೊಟ್ಟವರನ್ನೇ ಕಡಿಮೆ ಪ್ರಮಾಣದಲ್ಲಿ ಸಮಿತಿಗಳಲ್ಲಿ ತೆಗೆದುಕೊಳ್ಳಲಾಗಿದೆಂದೂ ತಕರಾರು. ಹಣವನ್ನು ಹೇಗೆ ವ್ಯಯ ಮಾಡಬೇಕೆಂಬುದನ್ನು ನಿರ್ಣಯಿಸಲು ಕಾಣಿಕೆ ಕೊಟ್ಟವರೇ ಯಾವಾಗಲೂ ಅತಿ ಸಮರ್ಥ ನ್ಯಾಯಾಧೀಶರಾಗಲಾರರು. ಉದಾಹರಣಾರ್ಥವಾಗಿ ಅನೇಕ ಜನರು ಕೃತ್ರಿಮ ಸರೋವರ ಕಟ್ಟಲು ೧೦ ಕೋಟಿ ರೂಪಾಯಿಗಳನ್ನು ದಾನಕೊಡಬಹುದು. ಎಂಜಿನಿಯರರ ಸಹಾಯವಿಲ್ಲದೆ ಆ ಕಾಣಿಕೆ ಕೊಟ್ಟವರೇನು ಮಾಡಬಲ್ಲರು? ಆ ಹಣದ ವ್ಯಯವೆಂತು ಮಾಡಬೇಕು. ಮತ್ತು ಕೆಲಸ ಹೇಗೆ ನಡೆಸಬೇಕೆಂಬುದನ್ನು ಎಂಜಿನಿಯರರಿಗೆ ಒಪ್ಪಿಸಬೇಕಾದುದು ಸ್ವಾಭಾವಿಕ. ಈ ವಾದಸರಣಿಯ ಬೆಂಬಲಕ್ಕಾಗಿ ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದು ಮೇಲೆ ವಿಧಿಸಿದ ರೀತಿಯಲ್ಲಿ ಪ್ರಾರಂಭಕ್ಕೆ ಪ್ರಾಂತಿಕ ಸಮಿತಿಗಳು ರಚಿಸಲ್ಪಟ್ಟವು. ಅನಂತರ ಇವೆಲ್ಲ ಹೆಣ್ಣು ಮಕ್ಕಳ ಕೆಲಸವೇ ಆದ್ದರಿಂದ ಶಕ್ಯವಿದ್ದ ಮಟ್ಟಿಗೆ ಹೆಣ್ಣು ಮಕ್ಕಳ ಏಜಂಟರಿಂದಲೇ ನಡೆಯ ತಕ್ಕದ್ದು. ಈ ಮಾರ್ಗದಿಂದ ಹೆಣ್ಣು ಮಕ್ಕಳ ಕಾರ್ಯಕರ್ತರಲ್ಲಿ ಅವಶ್ಯಕ ವಿಶ್ವಾಸವನ್ನಿಡಬೇಕೆಂಬುದಾಗಿ ಗೊತ್ತಾಯಿತು. ಈ ರೀತಿ ವಿಶ್ವಾಸವಿಟ್ಟರೆ ಸಂಸ್ಥೆಯನ್ನು ನಡೆಸಿಕೊಂಡು ಹೋಗುವ ಹೊಣೆಗಾರಿಕೆಯು ತಾವಾಗಿಯೆ ಅವರ ಕೈಗೆ ಹೋಗುವುದೆಂದು ಎಣಿಸಲಾಯಿತು ಇದಕ್ಕೆಲ್ಲ ಸಮಯಬೇಕು. ಅನೇಕ ಅಡಚಣೆಗಳನ್ನೆದುರಿಸಬೇಕಾಗುವದು. ಆದರೆ ಕೊನೆಗೆ ಕಾರ್ಯವು ಅಭಿವೃದ್ಧಿಹೊಂದಿ ಹೆಣ್ಣುಮಕ್ಕಳು ಆ ಭಾರವನ್ನು ಹೊರಲುಸಿದ್ಧರಾಗುವರೆಂದು ಆಶಿಸಲಾಗಿದೆ ಈ ಪ್ರಯೋಗವು ಸರಿಯಾಗಿದೆಯೊ ಇಲ್ಲವೊ ಎಂಬುದನ್ನು ಪರಿಣಾಮಗಳು ಸಿದ್ಧಮಾಡಬಲ್ಲವು.

ಪಂಚಗಣಿ ಮೋ. ಕ. ಗಾಂಧಿ
೧೪-೭-೧೯೪೬

(ಹರಿಜನ ಬಂಧುವಿನಿಂದ)

ಅಂಚೇ ನೋಕರರ ಬಗ್ಗೆ ನ್ಯಾ- ರಾಜಾಧ್ಯಕ್ಷರ ವರದಿ

ಹಿಂದುಸ್ತಾನ ಸರಕಾರದ ಒಪ್ಪಿಗೆ

ಕೆಳದರ್ಜೆಯ ನೋಕರರಿಗೆ ಪರಿಹಾರ

ಅಂಚೆ ಮತ್ತು ತಂತಿ ಖಾತೆಯ ಕೆಳ ದರ್ಜೆಯ ನೋಕರರ ಸಂಬಳವನ್ನು ವಿಚಾರ ಮಾಡಿ ವರದಿಯನ್ನು ಒಪ್ಪಿಸಲು ಮಧ್ಯಸ್ಥರೆಂದು ನೇಮಿಸಲ್ಪಟ್ಟಿದ್ದ ನ್ಯಾ. ರಾಜಾಧ್ಯಕ್ಷರು ತಮ್ಮ ವರದಿಯನ್ನೊಪ್ಪಿಸಿರುವರು. ಹಿಂದುಸ್ತಾನ ಸರಕಾರದವರು ಈ ವರದಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಕೆಲಸಗಾರರ ಮೂಲ ಸಂಬಳವನ್ನು ನೂರಕ್ಕೆ ೫ ರಿಂದ ೫೦ ರ ವರೆಗೆ ಏರಿಸಬೇಕೆಂದು ರಾಜಾಧ್ಯಕ್ಷರು ತಮ್ಮ ವರದಿಯಲ್ಲಿ ಅಭಿಪ್ರಾಯ ಪಟ್ಟಿರುವರು. ಅವರ ಸೂಚನೆಗಳ ಮುಖ್ಯಾಂಶ ಹಿಂತಿದೆ.

ಅಂಚೆ ಮತ್ತು ತಂತಿ ಖಾತೆಯ ನಾನ್ ಗೆಜೆಟೆಡ್ ಕೆಲಸಗಾರರಿಗೆ ಕೆಳಗಿನಂತೆ ಬಡತಿ ಕೊಡಬೇಕೆಂದು ಅವರು ಸೂಚಿಸಿರುವರು.

ಅಕೌಂಟಂಟರು, ಸಬ್ ಇನಸ್ಪೆಕ್ಟರರು ಮತ್ತು ಅದೇ ವರ್ಗದ ಇನ್ನಿತರ ಮೂಲ ಸಂಬಳದಲ್ಲಿ ನೂರಕ್ಕೆ ೫ ರಷ್ಟು ಬಡತಿ, ಈ ಬಡತಿ ಕನಿಷ್ಟ ಐದು ರೂಪಾಯಿಯಾದರೂ ಇರತಕ್ಕದ್ದು.

ಪೋಷ್ಟಮನ್, ಲಾಯಿನಮೆನ್, ಬಡಿಗರು, ಬಣ್ಣ ಹಚ್ಚುವವರು ಮತ್ತು ಮೆಸ್ತ್ರಿ ಜನರು:— ನೂರಕ್ಕೆ ೨೦ ರಷ್ಟು ಬಡತಿ.

ರನ್ನರ, ಅಟೆಂಡರ, ಪೋರ್ಟರ, ಬಾಯ್ ಮೆಸೆಂಜರ್ಸ, ಪ್ಯಾಕರ್ಸ, ಇತ್ಯಾದಿ— ನೂರಕ್ಕೆ ೨೫ ರಷ್ಟು ಬಡತಿ.

ಟಾಕ್ಸವರ್ಕ ಮೆಸೆಂಜರ್ಸರಿಗೆ ನೂರಕ್ಕೆ ೫೦ ರಷ್ಟು ಬಡತಿ.

ಇದಲ್ಲದೆ ಕೆಳಗಿನಂತೆ ದ್ರವ್ಯ ಸಹಾಯ ನೀಡಬೇಕೆಂದು ಅವರು ಸೂಚಿಸಿದ್ದಾರೆ.

ಈ ಸಹಾಯವನ್ನು ೧೯೪೫ ಜನವರಿಯಿಂದ ೧೯೪೬ ಜೂನವರೆಗೆ ಒಟ್ಟು ಹದಿನೆಂಟು ತಿಂಗಳ ಮಟ್ಟಿಗೆ ಕೊಡಬೇಕು.

ಅಂಚೆ ಖಾತೆಯವರು ಧಾನ್ಯ ಪೂರೈಸದಿರುವ ಸ್ಥಳಗಳಲ್ಲಿ ಹೊಸ ಪ್ರಮಾಣದ ಸಂಬಳದವರಿಗೆ ಮುಂಬೈಯಲ್ಲಿ ಕೊಡುತ್ತಿದ್ದ ಧಾನ್ಯ ಸವಲತ್ತಿನಷ್ಟು ಹಣವನ್ನು ಮುಟ್ಟಿಸಬೇಕು. (ಮುಂಬಯಿಯಲ್ಲಿ ಪ್ರತಿಯೊಬ್ಬನಿಗೆ ಧಾನ್ಯ ಸವಲತ್ತಿನ ರೂಪದಿಂದ ಪ್ರತಿ ತಿಂಗಳು ರೂ. ೩-೧೨-೦ ಸಿಗುತ್ತವೆ.)

ತುಟ್ಟಿ ಭತ್ತೆ ಕೊಡುವ ದೃಷ್ಟಿಯಿಂದ ವಿಭಾಗಿಸಿದ 'ಕ' ಪ್ರದೇಶಗಳನ್ನು 'ಬ' ಪ್ರದೇಶಗಳನ್ನಾಗಿ ಮಾರ್ಪಡಿಸಬೇಕು. ಅಂದರೆ 'ಕ' ವರ್ಗದ ಪ್ರದೇಶದಲ್ಲಿದ್ದ ಹೊಸ ಸಂಬಳ ಪ್ರಮಾಣದ ಕೆಲಸಗಾರರಿಗೆ ತುಟ್ಟಿಭತ್ತೆಯಲ್ಲಿ ಎರಡು ರೂಪಾಯಿ ಹೆಚ್ಚು ಲಭಿಸುವದು.

ಚಿತಗಾಂಗ ಜಿಲ್ಹೆಯಲ್ಲಿ ಭೀಕರ ನೆರೆಹಾವಳಿ

ಕೋಟಿ ರೂಪಾಯಿ ಹಾನಿ

೬೦೦ ಚೌರಸು ಮೈಲಿನಲ್ಲಿ ನೀರು

ಚಿತಗಾಂಗ ಜಿಲ್ಹೆಯಲ್ಲಿ ೬೦೦ ಚೌರಸ ಮೈಲಿನಲ್ಲಿರುವ ೫ ಲಕ್ಷ ಜನರಿಗೆ ನೆರೆಯಿಂದ ಧಕ್ಕೆಯುಂಟಾಗಿದೆಂದು ಜಿಲ್ಹಾ ಮ್ಯಾಜಿಸ್ಟ್ರೇಟರು ಪ್ರಕಟಿಸುತ್ತಾರೆ. ಬಂಗಾಲದ ಗವರ್ನರ ಸರ್ ಫೆಡರಿಕ್ ಬರೋಸರು ಚಿತಗಾಂಗದಲ್ಲಿ ವಿಮಾನದಲ್ಲಿ ಸಂಚರಿಸಿ ಪರಿಸ್ಥಿತಿಯನ್ನು ಕಣ್ಣಾರೆ ನೋಡಿಬಂದರು. ಪೀಡಿತ ಭಾಗಗಳಿಗೆ ಆಹಾರವನ್ನು ಎಸೆಯುತ್ತ ಹೋಗುವ ಪ್ರಸಂಗ ಬಂದಿದೆ. ಪ್ರತಿನಿತ್ಯ ೨೦ ಟನ್ನು ಆಹಾರ ಧಾನ್ಯಗಳನ್ನು ಪೂರಯಿಸಬೇಕಾಗುವದರಿಂದ ಈ ಕೆಲಸಕ್ಕೆ ನಾಲ್ಕು ವಿಮಾನಗಳು ಬೇಕಾಗಿವೆ. ಜಿಲ್ಹೆಯೊಳಗಿನ ಎಲ್ಲ ಸರಕಾರಿ ನವಕರರನ್ನು ಈ ಕೆಲಸದಲ್ಲಿ ತೊಡಗಿಸಲಾಗಿದೆ.

ಪ್ರಾಂತೀಯ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿಗಳು ಪ್ರಕಟನೆ ಹೊರಡಿಸಿ ಚಿತಗಾಂಗ, ನೌಖಾಲಿ, ಸಿಲ್ಹಾರ ಮತ್ತಿತರ ಕಡೆಗಳಿಂದ ಬಂದ ಸುದ್ದಿಯನ್ನು ನೋಡಿದರೆ ಎದೆಯೊಡೆಯುತ್ತದೆ. ಪೀಡಿತ ಭಾಗಗಳನ್ನು ಜನ ಬಿಡುತಿರುವರು. ಚಿತಗಾಂಗದ ಕಾಂಗ್ರೆಸಿಗರು ಆಗಲೆ ಪರಿಹಾರೋಪಾಯ ಕೈಕೊಂಡಿದ್ದಾರೆ. ಕಲಕತ್ತೆಯಲ್ಲಿಯೂ ಪರಿಹಾರ ಸಮಿತಿ ಸ್ಥಾಪಿತವಾಗಿದೆ. ಅದರ ಅಧ್ಯಕ್ಷ ನೆಲಿ ಸೇನಗುಪ್ತರು ಪ್ರಕಟನೆ ಹೊರಡಿಸಿ ಪರಿಹಾರ ನಿಧಿಗೆ ಸಹಾಯ ಮಾಡಬೇಕೆಂದು ಬಿನ್ನವಿಸಿಕೊಂಡಿದ್ದಾರೆ.

ಸರಕಾರದ ಪ್ರಕಟನೆ

ಚಿತಗಾಂಗದಲ್ಲಿ ನೆರೆಹಾವಳಿ ಎಣಿಸಿದಷ್ಟು ಭೀಕರವಾಗಿಲ್ಲೆಂದು ಬಂಗಾಲ ಸರಕಾರದ ಪರಿಹಾರಾಧಿಕಾರಿ ಸರ್ ವಾಲರ ಗುರ್ನರರು ಅಭಿಪ್ರಾಯಪಟ್ಟಿರುವರು. ವಿಮಾನಗಳಿಂದ ಇನ್ನೂ ಮೂರು ವಾರ ಆಹಾರವನ್ನು ಪೂರಯಿಸುತ್ತ ಹೋಗಬೇಕಾಗುವುದು. ಸರಕಾರೇತರ ಸಂಸ್ಥೆಗಳು ಸರಕಾರದೊಡನೆ ಸಹಕರಿಸುತ್ತವೆ. ಪೀಡಿತ ಭಾಗವಲ್ಲಿ ಒಬ್ಬನೂ ಹಸಿವೆಯಿಂದ ಸಾಯದಂತೆ ಆಹಾರವನ್ನು ಪೂರಯಿಸಲಾಗುತ್ತದೆ. ಔಷಧೀಯ ವ್ಯವಸ್ಥೆಯನ್ನೂ ಮಾಡಲಾಗಿದೆಂದು ಮುಂತಾಗಿ ಅವರು ಹೇಳಿದರು.

ಬ್ರಹ್ಮಪುತ್ರಾ ನದಿಗೆ ಮಹಾಪೂರು ಬಂದಿರುವದರಿಂದ ಸಿರಾಜಗಂಜ ನಗರದ ಪೂರ್ವಭಾಗದಲ್ಲಿ ನೀರು ಹೊಕ್ಕಿದೆ. ಅಂಚೆ ತಂತಿ ಕಚೇರಿ ಸಬ್ ಜೇಲ ಪೂರೈಕೆ ಕಚೇರಿ ಮೊದಲಾದ ಸರಕಾರಿ ಕಚೇರಿಗಳಲ್ಲಿಯೂ ಕೆಲ ಮುಖ್ಯ ಬೀದಿಗಳಲ್ಲಿಯೂ ನೀರು ನಿಂತಿದೆ. ನದಿಯ ದಂಡೆಯ ಮೇಲಿದ್ದ ಮೃಗಗಳೆಲ್ಲ ನಗರವನ್ನು ಸೇರಿದ್ದರಿಂದ ತೊಂದರೆಯಾಗಿದೆ. ಇಂಥ ಆ ಮೃಗಗಳನ್ನು ಕೊಲ್ಲಲಾಯಿತು. ಸಿಲ್ಹಟ ಜಿಲ್ಹೆಯಲ್ಲಿಯೂ ನೆರೆಹಾವಳಿಯಾಗಿದೆ.

ಬಂಗಾಲದ ಆಹಾರ ಪರಿಸ್ಥಿತಿ

ಸರಕಾರ ಅಲಕ್ಷಿಸುತಿದೆ

ಬಂಗಾಲ ಸರಕಾರವು ಬರಗಾಲವನ್ನು ಹತ್ತಿಕ್ಕಲು ತನ್ನ ಸರ್ವಶಕ್ತಿಯನ್ನು ಉಪಯೋಗಿಸುವರ ಬದಲು ಪ್ರಾಂತದಲ್ಲಿ ಮುಸ್ಲಿಂ ಲೀಗ ಸಂಸ್ಥೆಯನ್ನು ಬಲಪಡಿಸುವದಕ್ಕಾಗಿ ಉಪಯೋಗಿಸುತ್ತಿದೆಯೆಂಬನು ನಮಗೆ ಬಂದ ಸುದ್ದಿಗಳಿಂದ ತಿಳಿಯುತ್ತದೆ. ಎಂದು ಬಂಗಾಲ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಉಪಸಮಿತಿಯು ಆಹಾರದ ಬಗ್ಗೆ ತಾನು ತಯಾರಿಸಿದ ವರದಿಯಲ್ಲಿ ಕಾಣಿಸಿದೆ.

ಬಂಗಾಲ ಶಾಸನ ಸಭೆಯ ಕಾಂಗ್ರೆಸ ಸದಸ್ಯರು ಕಳಿಸಿದ ಸುದ್ದಿಗಳ ಆಧಾರದ ಮೇಲೆ ಈ ವರದಿಯನ್ನು ತಯಾರಿಸಲಾಗಿದೆ

ಈ ವರದಿಯು ತಿಳಿಸುವದೇನೆಂದರೆ-ಬಂಗಾಲ ಸರಕಾರದವರು ಈಗ ಕಣ್ತೆರೆಯದಿದ್ದರೆ ಪ್ರಾಂತದ ಆಹಾರ ಪರಿಸ್ಥಿತಿಯು ಕೈಮೀರಿ ಹೋಗಲಿದೆ ಈ ಸರಕಾರಕ್ಕೆ ಲಂಚಗುಳಿತನವನ್ನು ನಿರ್ಮೂಲ ಮಾಡುವ ಮನಸ್ಸಿಲ್ಲ. ಮೇಲಾಗಿ ಇದು ಜನತೆಯ ವಿಶ್ವಾಸಕ್ಕೂ ಪಾತ್ರವಾಗಿಲ್ಲ. ಇದಕ್ಕೂ ಹೆಚ್ಚಿನ ದುರ್ದೈವದ ಸಂಗತಿಯೆಂದರೆ, ಬಂಗಾಲಕ್ಕೀಗ ಕಷ್ಟಪರಿಸ್ಥಿತಿಯು ಒದಗಿರುವಾಗ ಹಾಗು ಎಲ್ಲ ಜಾತಿಯ ಜನರೂ ಉಪವಾಸದಿಂದ ಸಾಯುತ್ತಿರುವಾಗ ಈ ಸರಕಾರವು ಜಾತಿಯ ಕಾರಣಗಳಿಗಾಗಿ ಮತ್ತು ಮುಸ್ಲಿಂ ಲೀಗ ಸಂಸ್ಥೆಯನ್ನು ಬಲಪಡಿಸುವದಕ್ಕಾಗಿ ತನ್ನ ಸರ್ವಶಕ್ತಿಯನ್ನು ಉಪಯೋಗಿಸುತ್ತಿದೆ. ಸರಕಾರದ ಈ ಧೋರಣೆಯು ಬದಲಾಗದಿದ್ದರೆ ಬಂಗಾಲಕ್ಕೆ ಮಹಾ ಗಂಡಾಂತರ ಒದಗುವದು ನಿಶ್ಚಿತ.

ಈ ಪ್ರಾಂತದಲ್ಲಿ ನೂರಕ್ಕೆ ಏಳರಷ್ಟು ಆಹಾರ ಕೊರತೆಯುಂಟೆಂದು ಸರಕಾರವು ಅಂದಾಜ ಮಾಡಿದೆ. ನಿಜವಾಗಿ ನೋಡಿದರೆ ಕೊರತೆಯು ಸುಮಾರಾಗಿ ನೂರಕ್ಕೆ ೨೦ ರಷ್ಟಿರುವದು. ಅಂದರೆ ೬೫೦ ಲಕ್ಷಜನರಲ್ಲಿ ೧೩೦ ಲಕ್ಷ ಜನರಿಗೆ ಆಹಾರ ದೊರೆಯುತ್ತಿಲ್ಲ.

ಆಹಾರ ಧಾನ್ಯಗಳ ಹಂಚಿಕೆಯ ಬಗ್ಗೆ ಸರಕಾರವು ಮಾಡಿರುವ ವ್ಯವಸ್ಥೆಯು ಪರಿಪೂರ್ಣವಿಲ್ಲ. ಮೇಲಾಗಿ ಲಂಚಗುಳಿತನದ ಪ್ರಭಾವವು ಇದರ ಮೇಲೆ ಬಿದ್ದಿದೆ ಧಾನ್ಯವಸೂಲಿಯನ್ನು ಬಿಗುಪಡಿಸಲಾಗುವದೆಂಬ ಸುದ್ದಿ ಹಬ್ಬಿದೆ ಸರಕಾರವು ತನ್ನ ಮನೆಯನ್ನು ಚೊಕ್ಕಟವಾಗಿಟ್ಟುಕೊಳ್ಳದೆ ಈ ಕ್ರಮವನ್ನು ಜಾರಿಗೆ ತಂದರೆ ಪ್ರಜೆಗಳಲ್ಲಿ ಹಾಹಾಕಾರವೇಳುವದು ದೊಡ್ಡ ಊರುಗಳಲ್ಲಿ ಸೀದಾ ಪದ್ಧತಿಯು ಬಳಕೆಯಲ್ಲಿ ಬರಬೇಕು. ಹಳ್ಳಿಯಲ್ಲಿ ಸಂಪೂರ್ಣ ಸೀದಾ ಪದ್ಧತಿಯ ವ್ಯವಸ್ಥೆ ಮಾಡುವದು ಅಸಾಧ್ಯವೆಂದುತೋರಿದರೆ ಸುಧಾರಿತ ಸೀದಾ ಪದ್ಧತಿಯನ್ನವರು ಬಳಕೆಯಲ್ಲಿ ತರಬೇಕು ಯುನಿಯನ ಆಹಾರ ಸಮಿತಿಗಳನ್ನು ಹಿಡಿತದಲ್ಲಿಟ್ಟುಕೊಂಡು ಇವು ಲಂಚಗುಳಿತನದಲ್ಲಿ ಉದ್ಯುಕ್ತವಾಗದಂತೆ ಮುಂಜಾಗ್ರತೆ ತಾಳಬೇಕು. ಸಬ್ ಡಿವಿಜನಲ ಮತ್ತು ಜಿಲ್ಲಾ ಆಹಾರ ಸಮಿತಿಗಳಲ್ಲಿ ಅಧಿಕಾರಿಗಳು ಇರಕೂಡದು. *

ನಿಜವಾದ ಗಂಡಾಂತರ

[೭ ನೇ ಪುಟದಿಂದ ಮುಂದರಿದದ್ದು]

ಈ ಪರಿಸ್ಥಿತಿಯಲ್ಲಿ ಒಂದು ವೇಳೆ ಘಟನಾಸಮಿತಿ ಅಯಶಸ್ವಿಯಾದರೆ ಅದಕ್ಕೆ ಬ್ರಿಟಿಶರ ಘಾತಕ ಕೈವಾಡವೇ ಯಾವಾಗಲೂ ಕಾರಣವಾಗಲಾರದು. ನಾವು ಮೂರ್ಖರಿರುವೆವೊ ಹೀಚರಿರುವೆವೊ ಇಲ್ಲವೆ ಎರಡೂ ಇರುವೆವೊ ಅದೇನೆ ಇದ್ದರೂ ಅಂತರ್ ಗಂಡಾಂತರದ ಬಗ್ಗೆ ನಾವು ಎಷ್ಟು ವಿವಂಚನೆ ಪಡುತ್ತೇವೊ ಅಷ್ಟು ಬಾಹ್ಯ ಗಂಡಾಂತರದ ಬಗ್ಗೆ ವಿವಂಚನೆ ಪಡಬಾರದೆಂದು ನನಗೆ ಸ್ಪಷ್ಟವಾಗಿ ತೋರುತ್ತದೆ. ಅಂತರ್ ಗಂಡಾಂತರ ನಮ್ಮ ಆತ್ಮವನ್ನೆ ನಾಶಗೊಳಿಸುತ್ತದೆ. ಎರಡನೆಯದು ಅದಕ್ಕೆ ಹೊಳಪು ಕೊಡುತ್ತದೆ.

ಮುಂಬಯಿ ೨
೯-೭-೪೬ ಮೋ. ಕ. ಗಾಂಧಿ

ಧಾರವಾಡ

ಹಾನಗಲ್ಲ ಹಾವೇರಿ ನಡುವಿರುವ ವರದಾ ನದಿಯ ಸಂಗೂರ ಹೊಳಿನ ಮೇಲೆ ಹಾನಗಲ್ಲಿನ ಎರಡು ಚಕ್ಕಡಿಗಳು ರಾತ್ರಿ ೨॥ ಗಂಟೆಯ ಸುಮಾರಿಗೆ ತೇಲಿ ಹೋದವು ಒಂದು ಬಂಡಿಯೊಳಗಿನ ಒಬ್ಬ ಹುಡುಗನು ಎತ್ತಿನ ಬಾಲ ಹಿಡಿದು ಪಾರಾಗಿ ಬಂದಿದ್ದಾನೆ ಉಳಿದಿಬ್ಬರು ಕಾಣೆಯಾಗಿದ್ದಾರೆ. ನದಿಯ ಹತ್ತರ ಚಕ್ಕಡಿ ಎರಡು ಎತ್ತು ತೇಲುಪಿದ್ದು ಎತ್ತು ಸತ್ತಿವೆ.

ಧಾರವಾಡ ಜಿಲ್ಹಾ ಕಿರಾಣಿ ವರ್ತಕರ ಸಂಘದ ಸಾಮಾನ್ಯ ಸಭೆ ಸೇರಿ ನಿಯಂತ್ರಿತ ಕಿರಾಣಿ ವಸ್ತುಗಳ ಮಾರಾಟವನ್ನು ತಮಗೆ ಕೊಡಬೇಕೆಂದು ನಿರ್ಣಯಿಸಲಾಯಿತು.

ಹುಬ್ಬಳ್ಳಿ ಭಾರತ ಮಿಲ್ಲಿನ ಹಿಂದಿರುವ ಪೂನಯ್ಯನ ಮಠದಲ್ಲಿಯ ಮುಂಬಯಿ ಸರಕಾರದ ಕೂಲಿಕಾರ ಕಲ್ಯಾಣ ಕೇಂದ್ರದಲ್ಲಿ ಇದೇ ಅಗಷ್ಟ ೧ ರಿಂದ ನಿರಕ್ಷರರಾದ ಕೂಲಿಕಾರರಿಗೆ ಪ್ರೌಢ ಶಿಕ್ಷಣ ವರ್ಗಗಳನ್ನು ತೆರೆಯಲಾಗುವದು. ೩೦ ನೇ ತಾರೀಖಿನೊಳಗಾಗಿ ಹೆಸರು ಹಚ್ಚಿಸಬೇಕು.

ಸುಪ್ರಸಿದ್ಧ ಕ್ರಾಂತಿಕಾರ ಶ್ರೀ ವಿರುಪಾಕ್ಷಪ್ಪ ಅಂಗಡಿಯವರು ೧೨ ವರುಷಗಳ ನಂತರ ಮರಳಿ ಸ್ವಗ್ರಾಮಕ್ಕೆ ಬಂದಿದ್ದು ಅಲ್ಲಲ್ಲಿನ ಜನರು ಅವರಿಗೆ ಸಂಭ್ರಮದ ಸ್ವಾಗತವನ್ನಿತ್ತರು. ಅವರು ಹಾವೇರಿ, ಮೋಟೆಬಿನ್ನೂರ ಮೊದಲಾದ ಗ್ರಾಮಗಳಿಗೆ ಭೆಟ್ಟಿಕೊಟ್ಟರು.

ಧಾರವಾಡ ಬೋರ್ಸ್ಟಲ್ ಸ್ಕೂಲಿನ ಬಾಲ ಕೈದಿಗಳು ಮತ್ತು ಅಧಿಕಾರಿಗಳ ನಡುವೆ ಯಾವದೋ ಕಾರಣದಿಂದ ತಂಟೆ ಹುಟ್ಟಿ ೫೦ ಬಾಲ ಕೈದಿಗಳನ್ನು ಅಧಿಕಾರಿಗಳು ಹೊಡೆದಿರುವರೆಂಬ ಸುದ್ದಿ ಧಾರವಾಡದಲ್ಲಿ ಹಬ್ಬಿದ್ದು ಜೇಲ ಸಂದರ್ಶಕರು ಕೂಡಲೆ ಈ ಪ್ರಕರಣದ ವಿಚಾರ ಮಾಡಬೇಕಾಗಿ ಕೋರಲಾಗಿದೆ.

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭೆ ಸೇರಿ ಶ್ರೀ ಜಿ ಅರ್ ನಲವಡಿಯವರು ಅಧ್ಯಕ್ಷರು, ಕಾಂತೇಶ ಕಮಲಾಪುರ ಮತ್ತು ಎಲ್ ಜ ಬೇಂದ್ರೆಯವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಶ್ರೀ ಅರ್. ಎಸ್. ಹುಕ್ಕೇರಿಕರ; ಎನ್ ಕೆ. ದೀಕ್ಷಿತ, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ ಮತ್ತು ಡಾ. ನಂದೀಮಠರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಹುಬ್ಬಳ್ಳಿ ಗಿರಣಿ ಕಾಮಗಾರ ಸಂಘದ ಕಾರ್ಯದರ್ಶಿ ಶ್ರೀ ಎನ್. ಬಿ. ಹಿರೇಮಠರು ತಮ್ಮ ಹಾಗು ತಮ್ಮ ಸಂಗಡಿಗರ ಮೇಲೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಹೊರಡಿಸಿದ ನೋಟೀಸನ್ನು ರದ್ದುಗೊಳಿಸಬೇಕೆಂದು ಮಾಡಿಕೊಂಡ ಅರ್ಜಿಯ ವಿಚಾರಣೆಮಾಡಿ ಶಾಂತತೆಯ ರಕ್ಷಣೆಯ ಸಲುವಾಗಿ ಅಜ್ಞೆಯನ್ನು ಜಾರಿಯಲ್ಲಿಡುವದು ಅವಶ್ಯವಾಗಿದೆಂದು ನ್ಯಾ. ರು ನಿರ್ಣಯಕೊಟ್ಟರು.

ಧಾರವಾಡ ತಾಲೂಕ ಅಮ್ಮಿನಭಾವಿಯ ದೇಸಾಯರೂ ಗೌಡರೂ ಆಗಿದ್ದ ಶ್ರೀ ಬಲ್ಲಾಳರಾವ ದೇಸಾಯಿ ಇವರನ್ನು ಅದೇ ಊರಿನ ಶ್ರೀ ಶಾಮದೇಸಾಯಿ ಎಂಬವನು ಚೂರಿ ಮತ್ತು ಕುಡಗೋಲಿನಿಂದ ಅಮಾನುಷ ಏಟು ಹಾಕಿ ತಲೆ ಮತ್ತು ಹೊಟ್ಟೆಯ ಮೇಲೆ ಗಾಯಮಾಡಲು ಧಾರವಾಡ ಸಿವಿಲ್ ಆಸ್ಪತ್ರೆಗೆ ಅವರನ್ನು ಸಾಗಿಸಲಾಯಿತು. ಅಲ್ಲಿ ಅವರ ಮರಣೋನ್ಮುಖ ಜವಾನಿ ತೆಗೆದುಕೊಳ್ಳಲಾಯಿತು. ಸಾಯಂಕಾಲ ಅವರು ಮರಣ ಹೊಂದಿದರು. ಕೊಲೆಗಡಕನು ಹಿಂದುಗಡೆ ತಾನೇ ಬಂದು ಪೋಲೀಸರ ಕಡೆಗೆ ಹಾಜರಾಗಿರುವನು.

ಬಂಕಾಪುರ ಮತ್ತು ಸುತ್ತಲಿನ ೧೨ ಸಾವಿರ ಜನರಿಗೆ ಧಾನ್ಯ ಎಣ್ಣೆ ಸಕ್ಕರೆ ಹತ್ತೀಕಾಳು ಸಿಕ್ಕದ ಬಹಳ ತೊಂದರೆಯಾಗಿದೆ. ಕಾಳು ಕೊಡಲು ಒಂದೇ ಅಂಗಡಿ ಇದ್ದುದರಿಂದ ವಿಶೇಷ ತೊಂದರೆ. ಜುಲೈ ತಿಂಗಳಲ್ಲಿ ಎತ್ತಿಗೆ ಹತ್ತಿಕಾಳು ಕೊಡಬೇಕಾಗಿದ್ದರೂ ಈ ವರೆಗೆ ಹತ್ತೀಕಾಳು ಬಂದಿಲ್ಲೆಂದು ಹೇಳಲಾಗುತ್ತದೆ. ಬಟ್ಟೆಯ ಸ್ಥಿತಿಯೂ ಹೀಗೆಯೇ ಇದೆ. ಅಧಿಕಾರಿಗಳು ಇತ್ತಕಡೆ ಗಮನಿಸಬೇಕು.

ಶ್ರೀ ವ್ಹಿ. ಟಿ. ಮಾಗಡಿಯವರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಜನರಲ್ ಸೆಕ್ರೆಟರಿಗಳಾಗಿಯೂ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರು ಸಹಕಾರ್ಯದರ್ಶಿಗಳಾಗಿಯೂ ಅಧ್ಯಕ್ಷರಿಂದ ನೇಮಕ ಹೊಂದಿದ್ದಾರೆ. ಕೆ. ಎ. ಕೂರಂಬಯ್ಯ, ಬಿ. ಎಂ. ಅಜ್ಜಯ್ಯ ಮತ್ತು ಸಿದ್ಧನಗೌಡಾ ಪಾಟೀಲ ಇವರನ್ನು ಕಾರ್ಯಕಾರೀ ಮಂಡಲದಲ್ಲಿ ತೆರವು ಉಳಿದಿದ್ದ ಸ್ಥಳಗಳಿಗೆ ನೇಮಿಸಿದ್ದಾರೆ.

ಕರ್ನಾಟಕ ಇತಿಹಾಸ ಸಂಶೋಧಕರಾದ ಶ್ರೀ ನಾ. ಶ್ರೀ ರಾಜಪುರೋಹಿತರ ಷಷ್ಠ್ಯಬ್ದ ಮಹೋತ್ಸವವನ್ನು ಜರುಗಿಸಲು ಶ್ರೀ ವಿ. ಬಿ. ಹಾಲಭಾವಿಯವರ ಅಧ್ಯಕ್ಷತೆಯಲ್ಲಿ ಒಂದು ಮಂಡಳ ಸ್ಥಾಪಿತವಾಗಿದೆ. ಪ್ರೊ. ಎನ್. ಅರ್. ಕುಲಕರ್ಣಿ ಮತ್ತು ಪ್ರೊ. ಅರ್. ವಾಯ್. ಧಾರವಾಡ ಇವರು ಕಾರ್ಯದರ್ಶಿಗಳು.

ಹುಬ್ಬಳ್ಳಿ ನಗರಸಭೆಯವರು ತಮ್ಮ ಯಾವತ್ತು ನವಕರರಿಗೆ ತಿಂಗಳಿಗೆ ೨೦ ರೂಪಾಯಿಗಳಂತೆಯೂ ೧೪೦ ರೂಪಾಯಿಗಳಿಗಿಂತ ಹೆಚ್ಚು ಸಂಬಳವಿದ್ದವರಿಗೆ ನೂರಕ್ಕೆ ೧೭॥ ಯಂತೆಯೂ ತುಟ್ಟಿಭತ್ತೆ ಮಂಜೂರು ಮಾಡಿದ್ದಾರೆ.

ಕರ್ನಾಟಕ

ಬೆಳಗಾವಿ

ಗೋಕಾಕ ತಾಲೂಕಿನ ಮೆಳವಂಕಿಯಲ್ಲಿ ಒಬ್ಬ ಕಳ್ಳ ವ್ಯಾಪಾರಿಯನ್ನು ಬೆದರಿಸಿ ಕೆಲ ಸಾರ್ವಜನಿಕ ಕಾರ್ಯಕರ್ತರೆನ್ನುವವರು ಹಣ ತೆಗೆದುಕೊಂಡರೆಂದು ಆ ವ್ಯಾಪಾರಿಯು ದೂರಿಕೊಂಡದ್ದರಿಂದ ಪೋಲೀಸರು ಈಗ ಆ ಬಗ್ಗೆ ತಪಾಸಣೆ ನಡೆಸಿರುವರು. ಹಡಗಿನಹಾಳದಲ್ಲಿಯೂ ಕಳ್ಳವ್ಯಾಪಾರದ ಹೆಂಗಸೊಬ್ಬಳಿಂದ ಬೆದರಿಕೆಯಿಂದ ಹಣ ತೆಗೆದುಕೊಂಡರೆಂದು ದೂರು ಬಂದಿದ್ದು ಆ ಬಗ್ಗೆಯೂ ಪೋಲೀಸರ ತಪಾಸಣೆ ನಡೆದಿದೆ.

ಬಳ್ಳಾರಿ

ಬಳ್ಳಾರಿ ಜಿಲ್ಹಾ ತೃತೀಯ ಹರಿಜನ ಪರಿಷತ್ತು ೧೧ನೇ ತಾರೀಕು ಕಾಮಲಾಪುರದಲ್ಲಿ ಶ್ರೀ ಫಕೀರಪ್ಪಾ ಘೋಡಕೆ ಎಂ. ಎಲ್. ಸಿ ಇವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು ಮದ್ರಾಸ ಸರಕಾರದ ಸುದ್ದಿ ಖಾತೆಯ ಮಂತ್ರಿಗಳಾದ ಶ್ರೀ ಕೂರ್ಮಯ್ಯನವರು ಪರಿಷತ್ತನ್ನು ಪ್ರಾರಂಭಿಸಿದರು. ಕಾಂಗ್ರೆಸ ಮತ್ತು ಮಹಾತ್ಮರ ಪರಿಶ್ರಮದಿಂದ ಹರಿಜನೋದ್ಧಾರ ಕಾರ್ಯ ಭರದಿಂದ ಸಾಗಿದೆಂದು ಹರಿಜನ ಮುಖಂಡರಿಬ್ಬರೂ ಹೇಳಿದರು.

ಶ್ರೀ ಕೂರ್ಮಯ್ಯನವರು ಹಂಪಿಗೆ ಭೆಟ್ಟಿ ಕೊಟ್ಟು ಹೊಸಪೇಟೆಯಲ್ಲಿ ಶ್ರೀ ಥಕ್ಕರಬಾಪಾ ಹರಿಜನ ರಾತ್ರಿ ಶಾಲೆಯ ಪ್ರಾರಂಭೋತ್ಸವ ನೆರವೇರಿಸಿ ಮದ್ರಾಸಿಗೆ ಮರಳಿದರು.

ಈ ಸಲದ ಕನ್ನಡ ಸಾಹಿತ್ಯ ಸಮ್ಮೇಲನವನ್ನು ಹರಪನಹಳ್ಳಿಯಲ್ಲಿ ಜರುಗಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯವರು ನಿರ್ಣಯಿಸಿದ್ದಾರೆಂದು ಅಧಿಕೃತವಾಗಿ ತಿಳಿದು ಬರುತ್ತದೆ.

ಬಳ್ಳಾರಿ ಜಿಲ್ಹಾ ಸಾಹಿತ್ಯ ಸಮ್ಮೇಲನ ಅಗಷ್ಟ ೩-೪ ಕ್ಕೆ ಆದವಾನಿಯಲ್ಲಿ ಜರಗುವದು. ಶ್ರೀ ಟಿ. ಎಚ್. ಎಂ. ಸದಾಶಿವಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀ ಷಣ್ಮುಖಪ್ಪ ಅಂಗಡಿಯವರು ಸಮ್ಮೇಲನವನ್ನು ಪ್ರಾರಂಭಿಸುವರು.

ಮಂತ್ರಾಲಯ-ತುಂಗಭದ್ರಾಗಳಲ್ಲಿ ೧೧-೮-೪೬ ರಿಂದ ೧೭-೮-೧೯೪೬ ರ ವರೆಗೆ ನಡೆಯುವ ಶ್ರೀರಾಘವೇಂದ್ರಸ್ವಾಮಿಗಳ ರಥೋತ್ಸವಕ್ಕಾಗಿ ತೆರಳಲಿರುವ ಯಾತ್ರಿಕರು ಕಾಲರಾ ಪ್ರತಿಬಂಧಕ ಮೈಲೀ ಹಾಕಿಸಿಕೊಂಡು ಆ ಬಗ್ಗೆ ಸರ್ಟಿಫಿಕೇಟ ತೋರಿಸಬೇಕು. ತುಂಗಭದ್ರಾದಲ್ಲಿ ಉಚಿತ ವೈದ್ಯಕೀಯ ಸಹಾಯ ಏರ್ಪಡಿಸಲಾಗಿದೆಂದು ಮುಂತಾಗಿ ಬಳ್ಳಾರಿ ಜಿಲ್ಹಾ ಲೋಕಲ್ ಬೋರ್ಡ ಅಧ್ಯಕ್ಷ ಡಾ. ಅರ್. ನಾಗನಗೌಡರು ಪ್ರಸಿದ್ಧಿಸುತ್ತಾರೆ

ಗೊಲ್ಲರಹಳ್ಳಿ ಗಡಿ ಗ್ರಾಮದಿಂದ ಮೈಸೂರ ಸೀಮೆಗೆ ಕಳ್ಳತನದಿಂದ ಹೋಗುತ್ತಿದ್ದ ೧೪ ಬಂಡಿಗಳಲ್ಲಿಯ ೯೮ ಚೀಲ ಬೆಲ್ಲವನ್ನು ಪೋಲೀಸರು ಹಿಡಿದು ಮ್ಯಾಜಿಸ್ಟ್ರೇಟರೆದುರು ಹಾಜರ ಮಾಡಿರುವರು. ಈ ಬಗ್ಗೆ ಇಬ್ಬರು ಪೋಲೀಸರನ್ನು ಗ್ರಾಮದವರಿಬ್ಬರನ್ನು ರಿಮಾಂಡಿನಲ್ಲಿಟ್ಟರುವರೆಂದು ತಿಳಿಯುತ್ತದೆ.

ವಿಜಾಪುರ

ಬದಾಮಿ ಸಬ್ ಟ್ರೇಜರಿಯಲ್ಲಿ ೫೫೦೦ ರೂಪಾಯಿಗಳ ಕಳವು ಆಗಿರುತ್ತದೆ. ಪೋಲೀಸರು ಶೋಧ ನಡೆಸಿದ್ದು ಡಿ. ಎಸ್. ಪಿ. ಯವರು ಆಗಮಿಸಿ ಒಬ್ಬ ಕಾರಕೂನ ಹಾಗು ಸಿಪಾಯಿಯ ಮನೆ ಝಡತಿ ಮಾಡಿದರು. ಆದರೆ ಏನೂ ದೊರೆಯಲಿಲ್ಲೆಂದು ತಿಳಿಯುತ್ತದೆ.

ಬಾಗಲಕೋಟೆಯ ಚರಖ ಸಂಘದವರು ಆರಂಭಿಸಿದ ಪರಿಶ್ರಮಾಲಯಕ್ಕೆ ಮಹಿಳೆಯರ ವಿದ್ಯಾರ್ಥಿಗಳು ಸುಮಾರು ೨೦ ಜನ ಹೋಗುತಿರುವರು. ಕಾಡರಕೊಪ್ಪದಲ್ಲಿಯ ಪರಿಶ್ರಮಾಲಯಕ್ಕೆ ಮಾಮಲೇದಾರರು ಭೆಟ್ಟಿಕೊಟ್ಟು ಅಲ್ಲಿಯವರಿಗೆ ೮—೧೦ ಆಣೆ ಕೂಲಿ ಬೀಳುವದನ್ನು ನೋಡಿ ಸಂತೋಷ ವ್ಯಕ್ತ ಮಾಡಿದರು.

ವಿಜಾಪುರ ಜಿಲ್ಹೆಯಲ್ಲಿ ಸುಮಾರು ಒಂದು ತಿಂಗಳಿಂದ ಮಳೆಯೇ ಆಗದ್ದರಿಂದ ಜನ ಗಾಬರಿಗೊಂಡಿರುವರು. ಮಳೆಯ ದಾರಿಯನ್ನು ಒಂದೇಸವನೆ ನೋಡುತಿರುವರು.

ವಿಜಾಪುರ ಜಿಲ್ಹಾ ಮಾಧ್ಯಮಿಕ ಶಿಕ್ಷಕರ ಸಂಘ ಸ್ಥಾಪನೆಯ ವಿಷಯವಾಗಿ ವಿಜಾಪುರದಲ್ಲಿ ೧೧ನೆಯ ತಾರೀಖು ಸಭೆ ಸೇರಿ ಪ್ರಾಸ್ತಾವಿಕ ಚರ್ಚೆಯಾಗಿ ಸಂಘವನ್ನು ವ್ಯವಸ್ಥಿತವಾಗಿ ಮೂರ್ತಸ್ವರೂಪಕ್ಕೆ ತರಬೇಕೆಂದು ಗೊತ್ತಾಗಿ ಸದಸ್ಯರನ್ನು ಮಾಡಿಕೊಳ್ಳುವ ಕಾರ್ಯ ನಡೆಸಬೇಕೆಂದು ಗೊತ್ತಾಯಿತು. ಸದಸ್ಯರ ಯಾದಿ ಸಿದ್ಧವಾಗಿ ವ್ಯವಸ್ಥಾಪಕ ಮಂಡಲ ಆರಿಸುವವರೆಗೆ ಶ್ರೀ. ಮಂಗಲಗಿ ಮತ್ತು ಸ್ವಾಮಿಯವರು ಕಾರ್ಯದರ್ಶಿಗಳಿರಬೇಕೆಂದು ಗೊತ್ತಾಯಿತು.

ವಿಜಾಪುರ ನಗರದ ಎಲ್ಲ ಶಿಂದಿ ಅಂಗಡಿಗಳ ಮತ್ತು ಗಡಂಗಗಳ ಲಿಲಾವು ಈ ವರ್ಷ ೬೨೩೬೬೦ ರೂಪಾಯಿಗಳಿಗೆ ಆಗಿದ್ದು ಕಳೆದ ವರ್ಷ ೬೬೫೬೧೦ ರೂಪಾಯಿಗಳಿಗೆ ಆಗಿದ್ದವು. ಈ ವರ್ಷ ೪೧ ಸಾವಿರ ರೂಪಾಯಿ ಕಡಿಮೆ ಬಂದಂತಾಗಿದೆ.

ಉತ್ತರ ಕನ್ನಡ

ಸಿರಸಿಯಲ್ಲಿ ಕೆಲದಿನಗಳಿಂದ ಕಳವುಗಳು ನಡೆದೇ ಇದ್ದರೂ ಒಂದೂ ಪತ್ತೆಯಾಗಿಲ್ಲ. ಅಂಗಡಿಗಳ ಹಲಗೆಗೆ ಕನ್ನಹಾಕಿ ಒಳಗಿನ ವಸ್ತುಗಳನ್ನು ಕದಿಯುವ ಮಾದರಿಯ ಕಳವುಗಳು ನಡೆದೇ ಇವೆ.

ಕನ್ನಡ ಸಂಸ್ಥಾನ

ಆನೇಗುಂದಿ ಸಂಸ್ಥಾನದ ಮಹಾರಾಜ ಕೃಷ್ಣಮ್ಮನವರು ೭ ನೇ ತಾರೀಕು ಮಧ್ಯಾಹ್ನ ೧೨ ಗಂಟೆಗೆ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮರಣ ಕಾಲಕ್ಕೆ ಇವರಿಗೆ ೧೦೨ ವರ್ಷ ವಯಸ್ಸಾಗಿತ್ತು. ಇವರ ಹಿರಿಯ ಚಿರಂಜೀವ ರಾಜಾ ಶ್ರೀಕೃಷ್ಣದೇವರಾಯರು ಈಗ ಪಟ್ಟಕ್ಕೆ ಬಂದಿದ್ದು ಕಿರಿಯರಾದ ಶ್ರೀಮಂತ ತಿರುಮಲದೇವರಾಯರು ನಿಜಾಮ ಪ್ರಭುಗಳಿಂದ ಶಿಕ್ಷಣಕ್ಕಾಗಿ ಕಳಿಸಲ್ಪಟ್ಟಿದ್ದಾರೆ.

ಭದ್ರಾವತಿಯ ಮೊದಲನೆ ವರ್ಗದ ಮ್ಯಾಜಿಸ್ಟ್ರೇಟರ ಕೋರ್ಟಿನ ಬಾಗಿಲ ಮುರಿದು ೮೦೦ ರೂಪಾಯಿ ಬೆಲೆ ಬಾಳುವ ರತ್ನಗಳನ್ನೂ ಹಣವನ್ನೂ ಕಳವು ಮಾಡಿದ್ದಾರೆ. ಪೋಲೀಸರ ಶೋಧ ನಡೆದಿದೆ.

ದಾವಣಗೇರಿಯ ಮಂಡೀಪೇಟೆಯಲ್ಲಿ ಕಳವುಗಳ ಹಾವಳಿ ಹೆಚ್ಚಿದೆ. ಈ ಸ್ಥಳ ಜನನಿಬಿಡವಾಗಿದ್ದು ತಾಲೂಕ ಕಚೇರಿ ಪೋಲೀಸ ಸ್ಟೇಶನ ಹತ್ತರವೇ ಇದೆ. ಹೀಗಿದ್ದರೂ ಕಳವುಗಳಾಗುತಿರುವುದರಿಂದ ಜನ ಗಾಬರಿಗೊಂಡಿರುವರು.

ಈ ವಾರದಲ್ಲಿ ಮಿರಜ, ಫಲಟಣದ ರಾಜಾಸಾಹೇಬರು ಮತ್ತು ದಿವಾಣರು ಶ್ರೀ ನ. ಚಿಂ. ಕೇಳಕರರೊಡನೆ ಮುಖ್ಯ ಮಂತ್ರಿ ಬಾಳಾಸಾಹೇಬ ಖೇರರನ್ನು ಭೆಟ್ಟಿಯಾಗಲಿರುವರು. ದಕ್ಷಿಣ ಸಂಸ್ಥಾನಗಳ ಸಂಘ ರಾಜ್ಯದ ಸಂಬಂಧದಲ್ಲಿಯೆ ಮಾತುಕತೆ ನಡೆಯಲಿವೆ.

ಜಮಖಂಡಿ ಸಂಸ್ಥಾನದಲ್ಲಿ ೧೯೪೨ ಚಳವಳಿಯಲ್ಲಿ ಚಾವಡಿ ಸಾಲೆ ಮುಂತಾದವು ಸುಡಲ್ಪಟ್ಟಿದ್ದರಿಂದ ಒಟ್ಟಿಗೆ ೨೦೩೭೫ ರೂಪಾಯಿ ಹಾನಿಯಾಯಿತು. ಅದಕ್ಕಾಗಿ ಕಲ್ಲೊಳ್ಳಿ, ಜಗದಾಳ, ನಾವಲಗಿ ಮೊದಲಾದ ಗ್ರಾಮಗಳಲ್ಲಿ ಸಾಮುದಾಯಿಕ ದಂಡ ವಸೂಲ ಮಾಡಲಾಯಿತು. ದುರಸ್ತಿಗಾಗಿ ಸರಕಾರಕ್ಕೆ ೧೭೮೬೫ ರೂ. ವೆಚ್ಚ ಬಂದಿದ್ದು ೩೯೦೦ ದಂಡ ವಸೂಲಾಗಿಲ್ಲ. ವಸೂಲಾದ ದಂಡವನ್ನು ಮರಳಿ ಕೊಡುವ ವಿಚಾರ ಸರಕಾರಕ್ಕಿರುವದಿಲ್ಲವೆಂದು ಶಾಸನ ಸಭೆಯಲ್ಲಿ ಅಧಿಕೃತವಾಗಿ ಹೇಳಲಾಯಿತು.

ಸಿದ್ದಾಪುರ ಜವಳಿ ವರ್ತಕರ ಸಭೆ ಸೇರಿ ಶ್ರೀ ಟಿ. ಎಸ್. ತವದಿಯವರ ಅಧ್ಯಕ್ಷತೆಯಲ್ಲಿ ಜವಳಿ ವ್ಯಾಪಾರಸ್ಥರ ಸಂಘ ಸ್ಥಾಪಿತವಾಯಿತು. ಎಚ್ ವಿ ಧೋಂಗಡೇಕರರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಮುಂಬಯಿ

ಬಹು ದಿನಗಳಿಂದ ಅಸ್ವಸ್ಥರಾಗಿದ್ದ ಶ್ರೀ ವಿ ಡಿ ಸಾವರಕರರ ಪ್ರಕೃತಿ ಅಕಸ್ಮಾತ್ತಾಗಿ ಹೆಚ್ಚು ಕೆಟ್ಟದ್ದರಿಂದ ಅವರನ್ನು ದವಾಖಾನೆಗೆ ಸೇರಿಸಲಾಗಿದೆ. ಅವರು ಸಂಪೂರ್ಣ ವಿಶ್ರಾಂತಿ ಪಡೆಯಬೇಕೆಂದು ಡಾಕ್ಟರರ ಸಲಹೆ.

ಮುಂದಿನ ತಿಂಗಳು ಕರಾಚಿಗೆ ಬರಲಿದ್ದ ೯೦೦೦ ಟನ್ ಗೋದಿ ಹೇರಿಕೊಂಡಿದ್ದ ಆಸ್ಟ್ರೇಲಿಯನ್ ಹಡಗವು ಮುಂಬಯಿಗೆ ಬರಬೇಕೆಂದು ವಿಧಿಸಲಾಗಿದೆಯಂತೆ.

ಅಹಮದಾಬಾದದಲ್ಲಿ ಮತ್ತೆ ೧೫ ನೇ ತಾರೀಕು ಅಲ್ಲಲ್ಲಿ ತಿವಿತಗಳು ನಡೆದವು. ಭಾಲಗರವಾಡದ ಒಬ್ಬನನ್ನು ತಿವಿದುಕೊಂಡರು. ದಾನಪೀಠದ ಹತ್ತರ ಓರ್ವ ಸ್ತ್ರೀಯನ್ನು ತಿವಿದಿದ್ದಾರೆ. ಅವಳನ್ನೀಗ ಆಸ್ಪತ್ರೆಯಲ್ಲಿ ಹಾಕಿದೆ. ಘೀಕಾಂತ ರಸ್ತೆ ಬಳಿ ದೇಶೀ ಬಾಂಬೊಂದು ಸಿಕ್ಕಿದೆ. ಇವತ್ತು ಒಟ್ಟು ೫೦ ಜನರನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಪೇಟೆಗಳು ಇನ್ನೂ ಮುಚ್ಚಿವೆ.

ನಾಶಿಕದ ಲೇಬರ ಆಫೀಸರ ವ್ಹೋರಾ ಇವರು ಕೃಷ್ಣರಾವ ಅಠವಲೆ ಎಂಬ ವ್ಯಾಪಾರಸ್ಥರನ್ನು ಮೋಸಗೊಳಿಸಿ ೨೦೦೦ ರೂಪಾಯಿ ತೆಗೆದುಕೊಂಡರೆಂದು ೩ ತಿಂಗಳ ಸಶ್ರಮ ಶಿಕ್ಷೆ ಮತ್ತು ೧೦೦೦ ರೂಪಾಯಿ ದಂಡಕ್ಕೊಳಗಾದರು.

ಅಹಮದಾಬಾದದ ನಾಡೋಳಿ ಬೀದಿಯಲ್ಲಿಯ ಅನಿಲ್ ಸ್ಟಾರ್ಚ ಫ್ಯಾಕ್ಟರಿಯ ವಖಾರಕ್ಕೆ ಅಕಸ್ಮಾತ್ ಬೆಂಕಿ ಹತ್ತಿ ಬಹಳ ಹಾನಿಯಾಯಿತು. ಅಗ್ನಿಶಾಮಕ ನಾಲ್ಕು ಯಂತ್ರಗಳು ಸುಮಾರು ೧೦ ಗಂಟೆ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದವು.

ತಾಪೀ ನದಿಯ ಆಚೆಗೆ ಆಹಾರ ಪದಾರ್ಥಗಳನ್ನು ಸಾಗಿಸಲು ದಂಡಿನವರು ತಾತ್ಪೂರ್ತಿಕ ಕಟ್ಟಿದ ಪೂಲನ್ನು ಈಗ ಮುಚ್ಚಿ ಬಿಟ್ಟಿದ್ದಾರೆ. ಈ ಪೂಲಿನ ಮುಖಾಂತರ ಒಟ್ಟಿಗೆ ೧೦ ಸಾವಿರ ಟನ್ ಧಾನ್ಯ ಮತ್ತು ೧೦೦೦ ಟನ್ ಕಟ್ಟಿಗೆ ಇತರ ಪದಾರ್ಥಗಳನ್ನು ಒಯ್ಯಲಾಗಿತ್ತು.

ಕಲ್ಯಾಣ ರೆಸಿಡೆಂಟ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಕಾರಕೂನರಾಗಿದ್ದ ಎಸ್. ಟಿ. ನಾಯಕ ಇವರು ಲಂಚ ತೆಗೆದುಕೊಂಡರೆಂದು ಸಸ್ಪೆಂಡ ಮಾಡಲ್ಪಟ್ಟರು. ಮುಂದಿನ ವಿಚಾರಣೆ ನಡೆದಿದೆ.

ಮಹಾತ್ಮಾ ಗಾಂಧಿಯವರು ವಿಶ್ರಾಂತಿಗಾಗಿ ಪಂಚಗಣಿಗೆ ಬಂದಿರುವರು. ಪಂಚಗಣಿಯಲ್ಲಿ ೫೦ ಸಾವಿರ ರೂಪಾಯಿ ಬೆಲೆ ಬಾಳುವ ಬಂಗಲೆ ಮತ್ತು ಧರ್ಮಶಾಲೆಗಳನ್ನು ಕಸ್ತೂರಬಾ ರಾಷ್ಟ್ರೀಯ ಸ್ಮಾರಕದ ಕೆಲಸಕ್ಕಾಗಿ ಉಪಯೋಗಿಸಲು ಮಹಾತ್ಮರಿಗೆ ಸಮರ್ಪಿಸಲಾಗಿದೆ.

ಪುಣೆ ಸೀಟಾ ಕಚೇರಿಯ ಇಬ್ಬರು ಅಧಿಕಾರಿಗಳು ಲಂಚ ಪಡೆಯುವಾಗ ಲಂಚ ನಿವಾರಕ ಸಿಪಾಯಿ ಕೈಗೆ ಸಿಕ್ಕರು. ಅವರನ್ನೀಗ ಕೆಲಸದಿಂದ ದೂರಮಾಡಿದ್ದು ಖಟ್ಲೆ ಹಾಕಲಾಗಿದೆ.

ಭಾರತಕ್ಕೆ ಅಮೇರಿಕೆಯಿಂದ ಆಹಾರ ಪದಾರ್ಥ ತುಂಬಿಕೊಂಡ ಮೊದಲನೆ ಹಡಗ ಮುಂಬಯಿಗೆ ಬಂದಿದ್ದು ಇದರಲ್ಲಿ ಪೂರ್ಣ ಮೆಕ್ಕೆ ಜೋಳವಿದ್ದು ಅದನ್ನು ಮಾರ್ಮಗೋವಾ ಬಂದರದಲ್ಲಿಳಿಸಲಾಗುವದು. ಒಟ್ಟು ೮೩೫೦ ಟನ್ ಮೆಕ್ಕೆ ಜೋಳ ಇದರಲ್ಲಿದೆ. ಅಮೇರಿಕೆಯಿಂದ ಇನ್ನು ೯ ಹಡಗಗಳು ಆಹಾರಗಳನ್ನು ತರಲಿವೆ.

ಜಗತ್ತನ್ನು ಸರ್ವಾಧಿಕಾರಿತ್ವದ ದವಡೆಯೊಳಗಿಂದ ಪಾರುಮಾಡಿದ ವೀರರ ಸಹಾಯಕ್ಕೆಂದು ಸರ ಹೋಮೀ ಮೇಥಾ ಇವರು ವಿಜಯನಿಧಿಯೊಳಗಿಂದ ೬೦ ಲಕ್ಷ ರೂಪಾಯಿಗಳನ್ನು ಮುಂಬಯಿ ಗವರ್ನರರ ಕಡೆಗೆ ಕೊಟ್ಟರು.

ಪುಸ್ತಕಗಳನ್ನು ಮುಂಬಯಿ ಮಾರಾಟಕರದಿಂದ ಮುಕ್ತಮಾಡಬೇಕೆಂದು ಗುಜರಾಥ ಪುಸ್ತಕ ವ್ಯಾಪಾರಿಗಳು ಬಿನ್ನವಿಸಿದ್ದಾರೆ. ಮಾರಾಟ ಕರದ ಆಕರಣೆಯನ್ನು ೬ ತಿಂಗಳ ಮುಂದೆ ಹಾಕಬೇಕೆಂದು ಮುಂಬಯಿ ಮಾರಾಟಕರ ವಿರೋಧಕ ಸಮಿತಿಯವರು ಕೇಳಿಕೊಂಡಿದ್ದಾರೆ.

ಬಿಹಾರ

ಪ್ರವಾಸಿಕರ ಮೋಟರೊಂದು ದೇವಗಢದಿಂದ ಭಾಗಲಪುರಕ್ಕೆ ಬರುವಾಗ ಮಾರ್ಗದಲ್ಲಿ ಕದಮೋರೆ ಹತ್ತರ ನದಿಯಲ್ಲಿ ಮುಗಚಿ ಬಿದ್ದದ್ದರಿಂದ ಏಳು ಜನರು ಕೂಡಲೆ ಸತ್ತರು. ಮತ್ತು ಎಂಟು ಜನರಿಗೆ ತೀವ್ರ ಗಾಯಗಳಾದವು. ಅವರ ಪರಿಸ್ಥಿತಿ ಚಿಂತಾಜನಕವಾಗಿದೆ.

ಹಿಂದುಸ್ತಾನ

ಸಂಯುಕ್ತಪ್ರಾಂತ

ದಿಲ್ಲಿಯ ವಿಂಡ್ಸರ ಅರಮನೆಯಲ್ಲಿ ಇದೇ ೨೦ ನೇ ತಾರೀಖು ಮಧ್ಯಾಹ್ನ ೧೨ ಗಂಟೆಗೆ ಸೇರಲಿರುವ ಘಟನಾ ಸಮಿತಿಯ ತಜ್ಞರ ಸಭೆಗೆ ಬರಬೇಕೆಂದು ಪಂಡಿತ ಜವಾಹರಲಾಲರು ಸರ್ ಎನ್ ಗೋಪಾಲಸ್ವಾಮಿ ಅಯ್ಯಂಗಾರ ಪ್ರೊ. ಹುಮಾಯುನ ಕಬೀರ ಶ್ರೀ ಡಿ. ಆರ್ ಗಾಡಗೀಳ ಮತ್ತು ಶ್ರೀ ಅಸಫಅಲ್ಲಿಯವರನ್ನು ಆಮಂತ್ರಿಸಿದ್ದಾರೆ.

ಸರ್ ತೇಜಬಹದ್ದೂರ ಸಪ್ರುರವರ ಆರೋಗ್ಯ ಸರಿಯಿಲ್ಲದ್ದರಿಂದ ಕಾಂಗ್ರೆಸ್ಸು ಘಟನಾ ಸಮಿತಿಯ ತನ್ನ ಪ್ರತಿನಿಧಿಯಾದಿಯಲ್ಲಿ ಅವರ ಹೆಸರನ್ನು ಸೇರಿಸಲ್ಲ. ಅವರು ಗುಣ ಹೊಂದಿದ ಕೂಡಲೆ ಅವರಿಗೆ ಘಟನಾ ಸಮಿತಿಯಲ್ಲಿ ಒಂದು ಸ್ಥಳ ಮಾಡಿಕೊಡಲಾಗುವದು.

೧೯೪೨ ನೇ ಇಸ್ವಿಯ ಚಳವಳಿಯಲ್ಲಿ ವಸೂಲಾದ ೩೫ ಲಕ್ಷ ರೂಪಾಯಿ ಸಾಮೂಹಿಕ ದಂಡವನ್ನು ತಿರುಗಿ ಕೊಡಲು ಪ್ರಾಂತಿಕ ಸರಕಾರದವರು ನಿರ್ಧರಿಸಿರುವರೆಂದು ಸ್ವಾಮಿ ಸಂಪೂರ್ಣಾನಂದರು ಪ್ರಾಂತದ ಆಯವ್ಯಯ ಪತ್ರಿಕೆ ಮಂಡಿಸುವಾಗ ಹೇಳಿದರು.

ಝಾಂಸಿ ರೇಲ್ವೆ ಕೆಲಸಗಾರ ಸಂಘದ ಅಧ್ಯಕ್ಷರಾದ ಶ್ರೀ ಬೆಂಜಾಮಿನ್ ಎಂಬವರನ್ನು ಕೆಲಸದಿಂದ ತೆಗೆದದ್ದರಿಂದ ಸ್ಥಳಿಕ ರೇಲ್ವೆ ಕಾರಖಾನೆಯ ೩೦೦೦ ಕೆಲಸಗಾರರು ೧೩ ನೇ ತಾರೀಕು ೪ ಗಂಟೆ ಧರಣೆ ಸಂಪು ಹೂಡಿದ್ದರು. ವಿದ್ಯುತ್ ಯಂತ್ರಾಲಯದ ಹಾಗು ನೀರಿನ ಪೂರೈಕೆಯ ಕೆಲಸಗಾರರು ಕೆಲ ಹೊತ್ತು ಸಂಪು ಹೂಡಿದ್ದರು. ಕಡೆಗೆ ಮ್ಯಾನೇಜರರು ಈ ವಿಷಯವನ್ನು ಮುಖ್ಯ ಕಚೇರಿಗೆ ತಿಳಿಸುವದಾಗಿ ಆಶ್ವಾಸನ ಕೊಟ್ಟದ್ದರಿಂದ ಸಂಪು ಹಿಂತೆಗೆದುಕೊಳ್ಳಲಾಯಿತು.

ಹಿಂದುಸ್ತಾನದಲ್ಲಿ ರಾಜಕೀಯ ಕೆಲಸದ ಒತ್ತಡ ಮತ್ತು ಘಟನಾ ಸಮಿತಿ ಕಾರ್ಯವಿದ್ದುದರಿಂದ ಶ್ರೀಮತಿ ವಿಜಯಲಕ್ಷ್ಮಿಯವರು ಯುರೋಪ ಸಂಚಾರವನ್ನು ರದ್ದುಗೊಳಿಸಿರುವರು. ಅಂತರ್ ರಾಷ್ಟ್ರೀಯ ಮಹಿಳೆಯರ ಶಾಂತಿ ಮತ್ತು ಸ್ವಾತಂತ್ರ್ಯ ಪರಿಷತ್ತಿಗೆ ಅವರು ಹೋಗಲಿದ್ದರು. ಅದು ಲಕ್ಸೆಂಬರ್ಗದಲ್ಲಿ ಅಗಸ್ಟ ೪ ರಿಂದ ೬ ರ ವರೆಗೆ ಕೂಡಲಿದ್ದಿತು.

ಪಂಜಾಬ

ಪಂಜಾಬ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ದಾವುದ ಗಜನವಿಯವರು ಕಾಂಗ್ರೆಸ ಅಧ್ಯಕ್ಷರು ಸೀಖರಿಗೆ ತೋರಿಸಿದ ಪಕ್ಷಪಾತದ ನೆವದಿಂದ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟು ಮುಸ್ಲಿಂ ಲೀಗ ಸೇರಿದ್ದಾರೆ. ಕಾಂಗ್ರೆಸ್ಸಿನ ಪರವಾಗಿ ಘಟನಾ ಸಮಿತಿಗೆ ಕೊಟ್ಟ ನಾಮಪತ್ರವನ್ನೂ ಅವರು ಹಿಂತೆಗೆದುಕೊಂಡಿದ್ದಾರೆ.

ಘಟನಾ ಸಮಿತಿಗೆ ಕೊಟ್ಟ ನಾಮಪತ್ರಗಳನ್ನೆಲ್ಲ ಶೀಖರು ಹಿಂತೆಗೆದುಕೊಂಡಿರುವರು. ಅದರಂತೆ ದಿ. ಬ. ಎಸ್ ಡಿ ಸಿಂಹ, ಬಿ ಎಲ್ ರಾಲಿಯಾರಾಮ, ಶ್ರೀ ವೀರೇಂದ್ರ, ಖಾ. ಬ ರಿಯಾಸತಅಲ್ಲಿ ಚೌಧರಿ ಸುಂದರಸಿಂಗ ಮೊದಲಾದವರು ನಾಮಪತ್ರಗಳನ್ನು ಹಿಂತೆಗೆದುಕೊಂಡಿರುವರು. ೨೮ ಸ್ಥಳಗಳಿಗೆ ೩೬ ಜನರುಳಿದಿರುವರು.

ಪಂಜಾಬದ ಮುಖ್ಯ ಮಂತ್ರಿ ಸರ್ ಮಲಿಕ ಖಿಜರ ಹಯಾತಖಾನರು ಇನ್ನೂ ಇಂಗ್ಲಂಡದಿಂದ ಹೊರಟಿಲ್ಲ. ಡಾಕ್ಟರದ ಸಲಹೆ ಮೇರೆಗೆ ಅವರು ತಮ್ಮ ಪ್ರಯಾಣವನ್ನು ಹಿಂದಕ್ಕೆ ಹಾಕಿದ್ದಾರೆ.

ಲುಧಿಯಾನಾದ ಮುಖ್ಯ ಪೇಟೆಯಲ್ಲಿಯ ಅಂಗಡಿಯೊಂದಕ್ಕೆ ಬೆಂಕಿ ಹತ್ತಿ ಒಬ್ಬ ಆರು ವರ್ಷದ ಬಾಲಕ ಸುಟ್ಟು ಭಸ್ಮವಾಗಿದ್ದು ೧೬ ಜನರಿಗೆ ವಿಶೇಷ ಅಪಾಯವಾಗಿದೆ. ಎರಡು ಲಕ್ಷ ರೂಪಾಯಿ ಹಾನಿಯಾಗಿದೆ.

ಲ್ಯಾಲಪುರ ಜಿಲ್ಹೆಯಲ್ಲಿ ಝಾಂಗ ಕಾಲುವೆಗೆ ಮಹಾಪೂರ ಬಂದು ಒಡೆದದ್ದರಿಂದ ೪ ಲಕ್ಷ ರೂಪಾಯಿ ಹಾನಿಯಾಯಿತು.

ಹೊಸದಿಲ್ಲಿ

ದಕ್ಷಿಣ ಅಫ್ರಿಕೆಯ ಸರಕಾರವು ಪಾಸುಮಾಡಿರುವ ಘೆಟ್ಟೊ ಕಾಯಿದೆಯನ್ನು ನಿಷೇಧಿಸುವ ಮತ್ತು ದಕ್ಷಿಣ ಅಫ್ರಿಕೆಯ ಅಂಗ್ಲರು ಬಂದರೆ ಅವರಿಗೆ ಉಪಹಾರಗೃಹಗಳಲ್ಲಿ ಅವಕಾಶ ಕೊಡದಿರುವ ಠರಾವು ಹೊಸದಿಲ್ಲಿಯ ಹೋಟೆಲ ಕೆಲಸಗಾರ ಸಂಘದ ಸಭೆಯಲ್ಲಿ ಸ್ವೀಕೃತವಾಯಿತು. ಈ ಸಂಘದ ಸದಸ್ಯರ ಸಂಖ್ಯೆ ೫೦೦೦ ಇರುವದ.

ಕಾಂಗ್ರೆಸ್ಸಿನ ಮಹಾಧಿವೇಶನವು ಬಹುಶಃ ದಿಲ್ಲಿಯಲ್ಲಿ ಬೇಗನೆ ಕೂಡುವದೆಂದು ತಿಳಿಯುತ್ತದೆ. ಕಾಂಗ್ರೆಸ ಕಾರ್ಯಸಮಿತಿಯು ಮುಂದಿನ ಸಭೆಯಲ್ಲಿ ಈ ಬಗ್ಗೆ ನಿಶ್ಚಿತ ನಿರ್ಣಯ ಕೈಕೊಳ್ಳಲಾಗುವದೆಂದೂ ತಿಳಿಯುತ್ತದೆ.

ತಮಗೆ ಈಗ ಸಿಕ್ಕುತಿರುವ ಸಂಬಳ ಬಹಳ ಕಡಿಮೆ ಇದ್ದು ೨೦೦ ರೂಪಾಯಿಗಳಿಂದ ೬೦೦ ರೂಪಾಯಿಗಳ ವರೆಗೆ ಸಂಬಳ ಸಿಕ್ಕಬೇಕೆಂದು ಸಂಬಳ ಸಮಿತಿಯವರ ಪ್ರಶ್ನಮಾಲಿಕೆಗೆ ಉತ್ತರ ಕೊಡುವಾಗ ಸರಕಾರದ ಬಹುಶಃ ಎಲ್ಲ ಖಾತೆಯವರು ತಿಳಿಸಿರುವರು. ಕನಿಷ್ಠ ಸಂಬಳ ೧೦೦ ರೂಗಿಂತ ಕಡಿಮೆ ಇರಬೇಕೆಂದು ನ್ಯಾಯ ಬಗೆಹರಿಸಲು ಸಂಧಾನ ಮಂಡಳಗಳಿರಬೇಕೆಂದೂ ಅವರು ಅಭಿಪ್ರಾಯ ಪಟ್ಟಿರುವರು. ಪಿಂಚಣಿಯನ್ನು ತಾತ್ಪೂರ್ತಿಕವಾಗಿ ಕಾಲುಪಾಲು ಹೆಚ್ಚಿಸಬೇಕೆಂದು ಅವರು ಕೇಳಿಕೊಂಡಿರುವರು.

ಹಿಂದುಸ್ತಾನ ಸರಕಾರವು ಸಯಾಮ ಸರಕಾರಕ್ಕೆ ೫ ಕೋಟಿ ರೂಪಾಯಿಗಳ ದೀರ್ಘಾವಧಿ ಸಾಲ ಕೊಟ್ಟಿದೆ. ಈ ಸಾಲವನ್ನು ೧೯೪೬ ರಿಂದ ೨೦ ವರ್ಷಗಳೊಳಗಾಗಿ ಸಯಾಮವು ನೂರಕ್ಕೆ ೩ ರಂತೆ ಬಡ್ಡಿಯನ್ನು ತೀರಿಸತಕ್ಕದ್ದೆಂದು ಪ್ರಕಟನೆ ಹೊರಟಿದೆ.

ಮದ್ರಾಸ

ಮದ್ರಾಸ ಪ್ರಾಂತದಿಂದ ಘಟನಾ ಸಮಿತಿಯ ೪೫ ಸಾಮಾನ್ಯ ಸ್ಥಳಗಳಿಗಾಗಿ ೫೯ ಹುರಿಯಾಳುಗಳು ನಾಮಪತ್ರಗಳನ್ನು ಕೊಟ್ಟಿದ್ದಾರೆ. ಇವರಲ್ಲಿ ಕಾಂಗ್ರೆಸ್ಸಿನವರು ಎಲ್ಲ ೪೫ ಸ್ಥಳಗಳಿಗೆ ತಮ್ಮ ಪ್ರತಿನಿಧಿಗಳನ್ನು ನಿಲ್ಲಿಸಿರುವರು. ಕಾಂಗ್ರೆಸ್ಸಿನ ಪರವಾಗಿ ಆರಿಸಲ್ಪಟ್ಟಿದ್ದ ಶ್ರೀ ಕಮಲಾದೇವಿಯವರು ಹಿಂತೆಗೆದುಕೊಂಡದ್ದರಿಂದ ಶ್ರೀ ಶ್ರೀನಿವಾಸ ಮಲ್ಯರು ಅವರ ಬದಲು ನಾಮಪತ್ರ ಕೊಟ್ಟಿರುವರು.

ಬಂಗಾಲ--ಆಸಾಮ

ಜಮಶೇದಪುರ ಟಾಟಾ ಕೆಲಸಗಾರ ಯೂನಿಯನ್ನಿನವರು ಈ ಒಂದು ತಿಂಗಳಲ್ಲಿ ೫೦ ಸಾವಿರ ರೂಪಾಯಿಗಳಷ್ಟು ಸಂಪಿನ ನಿಧಿ ಕೂಡಿಸಿರುವರಲ್ಲದೆ ಇನ್ನೂ ನಿಧಿ ಸಂಗ್ರಹ ಕಾರ್ಯ ನಡೆದಿದೆ. ಟಾಟಾ ಕಾರಖಾನೆಗಳ ವ್ಯವಸ್ಥಾಪಕರು ತಮ್ಮ ಕೆಲಸಗಾರರ ಸಂಬಳ ಪ್ರಮಾಣ ಹೆಚ್ಚಿಸುವದು ಬೋನಸ್ಸು ತಾತ್ಪೂರ್ತಿಕ ಕೆಲಸಗಾರರನ್ನು ಕಾಯಂ ಮಾಡಿಕೊಳ್ಳುವದು ಮುಂತಾದ ವಿಷಯಗಳಲ್ಲಿ ತಮ್ಮ ಧೋರಣವನ್ನು ಇನ್ನೂ ಸ್ಪಷ್ಟಪಡಿಸಿಲ್ಲದ್ದರಿಂದ ಕೆಲಸಗಾರರಲ್ಲಿ ಅಸಮಾಧಾನವುಂಟಾಗಿದೆ.

ಇಂಪೀರಿಯಲ್ ಬ್ಯಾಂಕಿನ ಕಲಕತ್ತಾ ವಿಭಾಗದ ನೋಕರರು ಅಗಸ್ಟ ೧ ರಿಂದ ಸಂಪು ಹೂಡುವವರಿದ್ದು ಆ ಬಗ್ಗೆ ಅಧಿಕಾರಿಗಳಿಗೆ ಮೊದಲರಿಕೆಯನ್ನೂ ಕಳಿಸಿದ್ದಾರೆ. ಒಟ್ಟು ೨೦೦ ಶಾಖೆಗಳ ೨೫೦೦ ನೋಕರರು ಸಂಪು ಹೂಡುವರು.

ಘಟನಾ ಸಮಿತಿಯ ಚುನಾವಣೆಯಲ್ಲಿ ಭಾಗವಹಿಸಬಾರದೆಂದು ಆಸಾಮು ಶಾಸನ ಸಭೆಯ ಯುರೋಪಿಯನ್ ಪಕ್ಷದವರು ನಿರ್ಧರಿಸಿದ್ದಾರೆ.

ಮಧ್ಯಪ್ರಾಂತ

ಖೊಟ್ಟಿ ಬಿಲ್ಲು ಮಾಡಿ ಲೆಕ್ಕದ ಪತ್ರಿಕೆಯಲ್ಲಿ ಲೆಕ್ಕ ತಿದ್ದಿ ಸರಕಾರವನ್ನು ಮೋಸಗೊಳಿಸಿದರೆಂಬ ಆರೋಪದ ಮೇಲೆ ಸುಭೇದಾರ ಮೇಜರ ಸಾರಂಗಪಾಣಿ ಇವರಿಗೆ ಸ್ಪೆಶಲ್ ಟ್ರಿಬ್ಯುನಲ್‌ದವರು ೭ ವರ್ಷ ಸಶ್ರಮ ಶಿಕ್ಷೆ ಮತ್ತು ೪೧ ಸಾವಿರ ರೂಪಾಯಿ ದಂಡ; ದಂಡ ಕೊಡದಿದ್ದರೆ ಮತ್ತೆ ೨ ವರ್ಷ ಶಿಕ್ಷೆ ವಿಧಿಸಿದರು. ಕಾಂಟ್ರ್ಯಾಕ್ಟರ ಅಬ್ದುಲಗಣಿ ಇವರಿಗೆ ೭ ವರ್ಷ ಶಿಕ್ಷೆ ... ಸಾವಿರ ರೂ. ದಂಡ; ದಂಡ ಕೊಡದಿದ್ದರೆ ಮತ್ತೆ ೨ ವರ್ಷ ಶಿಕ್ಷೆ ವಿಧಿಸಿದರು. ಉಳಿದ ಮೂವರು ಆರೋಪಿಗಳು ದೋಷಮುಕ್ತರಾದರು. ಈ ಖಟ್ಲೆ ೧೮ ತಿಂಗಳು ನಡೆದು ೧೪೦ ಸಾಕ್ಷಿಗಳಾಗಿದ್ದವು.

ಬ್ರಹ್ಮದೇಶದಲ್ಲಿಯ ಕಮ್ಯುನಿಸ್ಟ ಪಕ್ಷ ಮತ್ತು ಕೆಂಪು ನಿಶಾನೆ ರೈತರ ಯೂನಿಯನಗಳು ದೇಶದ ಆಡಳಿತದಲ್ಲಿ ಕೈಹಾಕುವ ಉದ್ದೇಶವುಳ್ಳವಾಗಿ ಸಾರ್ವಜನಿಕ ಶಾಂತತೆಗೂ ದೇಶದ ಸುವ್ಯವಸ್ಥೆಗೂ ಭಂಗತರುತಿರುವುದರಿಂದ ಬ್ರಹ್ಮದೇಶದ ಗವರ್ನರರು ಈ ಸಂಸ್ಥೆಗಳನ್ನು ಅಕ್ರಮ ಸಂಸ್ಥೆಗಳೆಂದು ಸಾರಿದ್ದಾರೆ.

ಬೆಂಗಳೂರು-ಮೈಸೂರು

ಅಂಚೆ ಸಂಪಿನ ಪರಿಣಾಮವಾಗಿ ಬೆಂಗಳೂರಿಗೆ ದಿನಕ್ಕೆ ಬರುತ್ತಿದ್ದ ೩೫-೪೦ ಸಾವಿರ ಟಪಾಲು ವಸ್ತುಗಳು ಈಗ ೨೦ ಸಾವಿರಕ್ಕಿಳಿದು ಹೋಗಿವೆಯೆಂದು ಅಧಿಕಾರಿಗಳು ಹೇಳುತ್ತಾರೆ. ನೂರಕ್ಕೆ ೮೦ ಪತ್ರಗಳು ಹೇಗಾದರೂ ಹಂಚುವಳಿ ಕೇಂದ್ರಗಳಿಂದ ಹಂಚಲ್ಪಡುತ್ತಿದ್ದರೂ ಉಳಿದ ೨೦ ಪತ್ರಗಳು ಹಾಗೆಯೇ ರಾಶಿಬೀಳುತ್ತಿವೆ. ಅಂಚೆ ನೌಕರರು ಕೇಂದ್ರ ಸಂಪಿನ ಸಮಿತಿಯಿಂದ ಆದೇಶ ಬರುವವರೆಗೂ ಸಂಪು ಸಾಗಿಸಲು ನಿರ್ಧರಿಸಿದ್ದಾರೆ

ಬೆಂಗಳೂರು ದಂಡಿನ ನಗರ ಸಭಾ ಸದಸ್ಯರೂ ಅ. ಭಾ. ಹಿಂದುಳಿದ ವರ್ಗದ ರಾಷ್ಟ್ರೀಯ ಯುವಕ ಸಂಘದ ಅಧ್ಯಕ್ಷರೂ ಆದ ಶ್ರೀ ಜಯಶೀಲರು ಅವರು ಪುಣೆಯಲ್ಲಿ ನಡೆದ ಅಂಬೇಡಕರ ವಾದಿಗಳ ಸತ್ಯಾಗ್ರಹ ಸಂಬಂಧದಲ್ಲಿ ಒಂದು ಹೇಳಿಕೆ ಹೊರಡಿಸಿ ಡಾ. ಅಂಬೇಡಕರರೂ ದಿ. ಬ. ಎನ್ ಶಿವರಾಜರೂ ಸತ್ಯಾಗ್ರಹಿಗಳ ಮುಂದಾಳುಗಳಾಗಲೆಂದು ಆಹ್ವಾನ ಕೊಟ್ಟಿದ್ದಾರೆ.

ಸರ್ ಮಿರ್ಜಾ ಇಸ್ಮಾಯಿಲರು ಮೈಸೂರು ದಿವಾಣರಾಗಿದ್ದಾಗ ಸ್ಥಾಪಿಸಲ್ಪಟ್ಟಿದ್ದ (೧೯೩೮) “ಪಾಲಿಟಿಕಲ್ ಅಫೇರ್ಸ ಕಮಿಟಿ” (ರಾಜಕೀಯ ವಿಷಯಗಳ ಸಮಿತಿ) ಯೆಂಬ ಸಲಹೆ ಸಮಿತಿಯನ್ನು ಇದೀಗ ರದ್ದುಗೊಳಿಸಲಾಗಿದೆಯೆಂದು ಸರಕಾರದವರು ಪ್ರಕಟಿಸಿದ್ದಾರೆ. ಸರ್ ಮಿರ್ಜಾ ಅವರು ಈ ಸಮಿತಿ ಮೈಸೂರಿನ “ಪ್ರೀವಿ ಕೌನ್ಸಿಲ್” ಆಗಿ ರೂಪುಗೊಳ್ಳುವದೆಂದು ಆಶ್ವಾಸನ ಕೊಟ್ಟಿದ್ದರು ಆದರೆ ಅವರ ದಿವಾಣಗಿರಿ ಸಮಾಪ್ತವಾದ ಮೇಲೆ ಈ ಸಮಿತಿಯನ್ನು ಉಪೇಕ್ಷಿಸಲಾಗಿತ್ತು. ಈಗ ಅದನ್ನು ರದ್ದುಗೊಳಿಸಿದ್ದರಿಂದ ಪ್ರಜಾಪ್ರತಿನಿಧಿಗಳಿಗೆ ತಮ್ಮ ಅಭಿಪ್ರಾಯವನ್ನು ಬಿಂಬಿಸುವ ಮಧ್ಯಮಾರ್ಗಬಹುದಾಗಿದ್ದ ಒಂದು ಸಂಸ್ಥೆಯೂ ಹೋದಂತಾಯಿತು.

ಮೈಸೂರು ಕೃಷ್ಣರಾಜೇಂದ್ರ ಗಿರಣಿಯ ಸಂಪು ಮುಕ್ತಾಯವಾಗಿದೆ.

ಬೆಂಗಳೂರಿನ ದಿನಪತ್ರಿಕೆ ಯಾದ “ವಿಶ್ವಕರ್ನಾಟಕ”ದಲ್ಲಿ ಪ್ರಕಟವಾದ ಕೆಲ ಅಗ್ರಲೇಖಗಳು ಸಂಸ್ಥಾನ ಪ್ರಜರ ಹಿತಕ್ಕೆ ಧಕ್ಕೆ ತರುವವೆಂದಾರೋಪಿಸಿ ಜಾಮೀನು ಏಕೆ ಕೇಳಬಾರದೆಂದು ವಿಚಾರಿಸುವ ನೋಟೀಸನ್ನು ಸರಕಾರ ಅದರಮೇಲೆ ಪ್ರಯೋಗಿಸಿದೆ.


ಮೈಸೂರು ಸಂಸ್ಥಾನದಲ್ಲಿಯ ಪತ್ರಿಕೆಗಳ ಸಂಪಾದಕರೂ ಒಡೆಯರೂ ಶ್ರೀ ಪಿ. ಆರ್ ರಾಮಯ್ಯ (ತಾಯಿನಾಡು ಒಡೆಯರು) ಅವರ ಅಧ್ಯಕ್ಷತೆಯಲ್ಲಿ “ಮೈಸೂರು ಪತ್ರಿಕೆಗಳ ಒಡೆಯರ ಮತ್ತು ಸಂಪಾದಕರ ಸಂಘ”ವೆಂಬ ಸಂಸ್ಥೆಯನ್ನು ಕಟ್ಟಿಕೊಂಡಿದ್ದಾರೆ.

ಚಿತ್ರದುರ್ಗ ಜಿಲ್ಹಾಧಿಕಾರಿಗಳಾದ ಶ್ರೀ ಎಂ ರಾಮಸಾಮಯ್ಯನವರು ತಾ ೧೮–೧೧ ಕ್ಕೆ ದಿವಾಣರನ್ನೂ ಕೆಂದಾಯ ಮಂತ್ರಿಗಳನ್ನೂ ಕಂಡು ಜಿಲ್ಹೆಯ ಬರಗಾಲದ ಸಂಬಂಧದಲ್ಲಿ ದೀರ್ಘ ಚರ್ಚೆ ನಡೆಸಿ ಈ ಜಿಲ್ಹೆಯಲ್ಲಿ ಪರಿಹಾರ ಕ್ರಮಗಳು ಯಶಸ್ವಿಯಾಗಿ ಸಾಗಿವೆಯೆಂದೂ ಪರಿಸ್ಥಿತಿ ಸುಧಾರಿಸುತ್ತಿದೆಯೆಂದೂ ಅಭಿಪ್ರಾಯಪಟ್ಟರು.

ಮೈಸೂರು ಕಾಂಗ್ರೆಸ ಅಧ್ಯಕ್ಷ ಶ್ರೀ ಸಿ ನಿಜಲಿಂಗಪ್ಪನವರು ತಮ್ಮ ರದ್ದಾದ ವಕೀಲಿ ‘ಸನದನ್ನ’ ತಿರುಗಿಕೊಡಬೇಕೆಂದು ಹಾಕಿದ ಅರ್ಜಿ ತಾ ೧೨ ಕ್ಕೆ ಹಾಯಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ ಶ್ರೀಯುತರು ಅದನ್ನು ಒತ್ತಾಯಪಡಿಸಲು ಅಪೇಕ್ಷಿಸಲಿಲ್ಲವಾದುದರಿಂದ ಅವರ ಅರ್ಜಿಯನ್ನು ಕಿತ್ತುಹಾಕಲಾಯಿತು.

ಕೆಂಪೇಗೌಡ ರಸ್ತೆಯಲ್ಲಿರುವ (ಬೆಂಗಳೂರು) ಹೆರಿಗೆ ಆಸ್ಪತ್ರೆಯ ಅಭಿವೃದ್ಧಿಗಾಗಿ ಶ್ರೀ ರಾಮನಾರಾಯಣ ಚೆಲ್ಲಾರಾಮರು ೨೫೦೦೦ ರೂಪಾಯಿ ದಾನ ಮಾಡಿದ್ದಾರೆ.

ಪ್ರಸಿದ್ಧ ಈಸೂರು ದುರಂತ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ ಸಾಹುಕಾರ ರುದ್ರಪ್ಪನವರ ಮಗ ಶ್ರೀ ಶಾಂತವೀರಪ್ಪನವರು ೪ ವರ್ಷಗಳ ಕಠಿಣ ಶಿಕ್ಷೆಯನಂತರ ತಾ ೧೬ ಕ್ಕೆ ಬಿಡುಗಡೆಯಾದರು. ಅಲ್ಲದೆ ಆಮರಣ ಶಿಕ್ಷೆಗೊಳಗಾಗಿರುವ ಶ್ರೀ ಮೂಡಬಾಗಿಲು ವೀರಬಸಪ್ಪ, ಪುಣಜಿ ಚನ್ನಬಸಪ್ಪ, ಉಜ್ಜಳ್ಳಿ ಗುರುಶಾಂತಪ್ಪ, ಸಂಡದ ಗುರುಶಾಂತಪ್ಪ, ಸುಬ್ಬರಾವ, ನಾಗೇಶಾಚಾರಿ, ಫಣಿಯಪ್ಪಾಚಾರಿ, ಇವರೂ ೧೦ ದಿನಗಳ ಪೆರೋಲಮೇಲೆ ಬಿಡುಗಡೆ ಹೊಂದಿದ್ದಾರೆ.



ಅಧಿಕ ಲಾಭದ ತೆರಿಗೆಯನ್ನು ತಿರುಗಿ ಕೊಡಲಾಗುವದೆಂಬ ಪ್ರಕಟನೆ ಹೊರಟದ್ದರಿಂದಲೂ ಅಮೇರಿಕೆಗೆ ಹಿಂದುಸ್ತಾನದಲ್ಲಿ ವ್ಯಾಪಾರಕ್ಕೆ ಮುಕ್ತದ್ವಾರ ದೊರೆಯುವದೆಂದು ಅಂಗ್ಲೊ ಅಮೇರಿಕನ್ ಸಾಲ ಒಪ್ಪಂದದಿಂದ ವಿದಿತವಾಗಿರುವದರಿಂದಲೂ ಮುಂಬಯಿ ಶೇರ ಪೇಟೆಯ ಮೇಲೆ ಪರಿಣಾಮವಾಯಿತು. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ಕಳೆದ ವಾರಾಂತ್ಯದಲ್ಲಿ ೩೨೫೦-೦-೦ ಕ್ಕೆ ಇಳಿದಿದ್ದವುಗಳು ಈವಾರ ಏರುತ್ತ ೩೩೪೨೦-೦ ಗೆ ಹೋಗಿ ಮತ್ತೆ ತುಸು ಇಳಿದು ೩೩೨೨-೮-೦ ಕ್ಕೆ ಬಂದವು. ಡಾಯಿಂಗ ೨೭೨೭-೮-೦ ರಿಂದ ೨೮೦೦-೦-೦ ಕ್ಕೆ ಬಂದು ೨೭೮೬-೦-೦ ರಲ್ಲಿದೆ ಕೊಹಿನೂರು ೯೫೨-೦-೦ ರಿಂದ ೧೦೩೬-೦-೦ ಕ್ಕೇರಿದೆ. ಸ್ವದೇಶಿ ೮೪೨-೦-೦ ರಿಂದ ೮೮೫-೦-೦ ಕ್ಕೆ ಗೋಕಾಕ ೪೦೭-೦-೦ ರಿಂದ ೪೧೯-೦-೦ ಕ್ಕೆ ಸೆಂಚುರಿ ೧೨೦೦-೦-೦ ರಿಂದ ೧೨೨೫-೦-೦ ಕ್ಕೆ ಸೆಂಟ್ರಲ ಇಂಡಿಯಾ ೯೮೮-೦-೦ ರಿಂದ ೫೧೯-೦-೦ ಕ್ಕೆ ಬೇಲಾಪೂರ ೩೩೪-೦-೦ ರಿಂದ ೩೪೭-೦-೦ ಕ್ಕೆ ಸಿಂಧ್ಯ ಸ್ಟೀಮ ೫೫-೦-೦ ರಿಂದ ೫೭-೮-೦ ಗೆ ಅಸೋಸಿಯೇಟೆಡ್ ಸಿಮೆಂಟ್ಸ ೨೬೦-೦-೦ ರಿಂದ ೨೬೫-೦-೦ ಕ್ಕೇರಿತು.

ಇಂಪೀರಿಯಲ್ ಬ್ಯಾಂಕ ನ್ಯೂ ಎಫ್. ಸಿ. ಪಾಲುಗಳು ೩೩೧೦-೦-೦ ರ ವರೆಗೂ ಏರಿದ್ದವುಗಳು ೩೨೬೫-೦-೦ ಕ್ಕಿಳಿದು ಹೋಗಿವೆ ಬ್ಯಾಂಕ ಕಾರಕೂನರು ಸಂಪು ಹೂಡಲಣಿಯಾಗಿದ್ದಾರೆ. ಇದರ ಪರಿಣಾಮ ಪಾಲುಗಳ ಮೇಲೆ ಆಗಬಹುದು. ಸೆಂಟ್ರಲ ಬ್ಯಾಂಕ ೧೫೩-೦-೦ ಕ್ಕೇರಿದೆ. ರಿಝರ್ವ ಬ್ಯಾಂಕ ೧೭೮-೦-೦ ರಿಂದ ೧೭೭-೮-೦ ಗಿಳಿದಿದೆ.

ಸರಕಾರಿ ಜಿ. ಪಿ. ನೋಟು ೧೦೫-೩-೬. ೩॥ (೧೯೪೭-೫೦) ಸಾಲ ೧೦೨-೧೧-೦ ರಲ್ಲಿ ಇಳಿಮುಖ.

ಚಿನ್ನ -ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಈವಾರ ಪುನಃ ಬೆಲೆಗಳು ಕೆಳಗಿಳಿದವು ತಯಾರಿ ಚಿನ್ನ ೮೬-೧೨-೦ಕ್ಕೆ ಮತ್ತು ವಾಯಿದಾ ೮೫-೪-೦ಕ್ಕೆ ಇಳಿದು ಹೋದವು. ಸಾವರೀನ್ ೬೧-೦-೦ ಬೆಳ್ಳಿ ೧೫೩-೮-೦ ರಿಂದ ೧೫೪-೪-೦.

ಅರಳೆಪೇಟೆ

ತಯಾರಿ ಅರಳೆ ದರ ಸರಕಾರದವರು ಗೊತ್ತುಪಡಿಸಿದ ಪರಮಾವಧಿ ಧಾರಣೆಯ ಮಟ್ಟಕ್ಕೇರಿ ಬಿಟ್ಟಿದೆ. ಅಮೇರಿಕನ್ ಹತ್ತಿ ಇನ್ನೂ ಏರುತ್ತಲಿದೆ. ಆದರೂ ಹಿಂದುಸ್ತಾನ ಸರಕಾರ ಅರಳೆಯ ಪರಮಾವಧಿ ಧಾರಣೆ ಏರಿಸುವ! ಲಕ್ಷಣವಿಲ್ಲ ಜುಲೈ ವಾಯಿದೆ ಹತ್ತಿ ೪೬೦-೦-೦ಕ್ಕಿಂತ ಮೇಲಿನ ಮಟ್ಟದಲ್ಲಿ ಚಲಿಸುತಿದೆ. ತಾ ೧೭ಕ್ಕೆ ೪೬೪-೪-೦ ರಲ್ಲಿ ಅದು ಇತ್ತು. ಸೆಪ್ಟೆಂಬರ ವಾಯಿದೆ ರೂ ೪೭೨-೪-೦

ಎಣ್ಣೆ ಕಾಳು

ಶೇಂಗಾ	೧೨೦—೦—೦
ಅಗಸಿ	೨೬—೪—೦
ಅಗಸಿ ಎಣ್ಣೆ	೧೭—೦—೦

ಶಿವಮೊಗ್ಗೆ

ತಾ ೧೬

ದೇಶಾವರ ನಂ೧	ಮಣ ೧ ಕ್ಕೆ	೨೬	ರಿಂದ	೨೭
,,	,, ೨	೨೪॥	,,	೨೫॥
,,	,, ೩	,, ೨೩	,,	೨೪
ರಾಜಾ ಅಲವು				೨೪—೨೫
ಸುಲಿ				೨೪—೨೫
ವಂತಿ ಬೆಟ್ಟ				೧೮॥ ೧೯
ಬೆಟ್ಟ		,, ೧೬॥		,, ೧೮

ಅಡಿಕೆಗೆ ಬೇಡಿಕೆಯಿದ್ದರೂ ಟಪಾಲು ಸಂಪಿನಿಂದ ನಿರ್ಯಾತಕ್ಕೆ ತಡೆಯಾಗುತಿದೆ. ಅಡಿಕೆ ಗಿಡಗಳಿಗೆ ಬರುವ ಕೊಳೆ ರೋಗ ಪ್ರಾರಂಭವಾಗಿರುವದರಿಂದ ಈ ವರ್ಷ ಪೀಕು ಕಡಿಮೆ ಬರಬಹುದೆಂದು ನಿರೀಕ್ಷಿಸಲಾಗಿದೆ.

ವಂತಿ	,,	೧೫॥	,,	೧೭॥
ಮೆಣಸು ,,	,,	೧೯	,,	೨೦

ಬೆಟ್ಟ ಜಾತಿಗೆ ಒಳ್ಳೆ ಬೇಡಿಕೆಯುಂಟು.

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.		೧೪—೧೬
ಅರಿಷಿಣ ಹೇರು		೮೦-೮೮
ಶೇಂಗಾ ಖಂಡಿ	,,	೧೦೮
ಮೆಣಸಿನಕಾಯಿ ಹೇರು	,,	೧೭೫—೧೯೫
ಮಿರಜಿ ತಂಬಾಕು ಹೇರು		೧೦೦-೨೦೦
ತಂಬಾಕ ಪಂಢರಪುರಿ	”	೧೫೦—೨೫೦
ತಂಬಾಕು ಅಕೋಳ (ಹೇರು)		೨೨೫—೩೭೫

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೩೦೦-೩೦೫
,,	ನಂ. ೨	೨೯೦-೩೦೫
,,	ನಂ. ೩	೨೮೦-೨೮೫
ಜಿನ		೨೨೦-೨೩೫
ಸಾಜಿನ		೨೧೦-೨೧೫
ಡಬಲರೋಲರ		೨೧೦-೨೨೫

ದಿವಾಣಗಿರಿಗೆ ರಾಮಸ್ವಾಮಿ ಮುದಲಿಯಾರ ?

ಮೈಸೂರು ಸಂಸ್ಥಾನದಲ್ಲಿ ವಿರೋಧ

ಮೈಸೂರು ಸಂಸ್ಥಾನದ ಈಗಿನ ದಿವಾಣರಾದ ಶ್ರೀ ಎನ್ ಮಾಧವರಾಯರು ನಿವೃತ್ತರಾದೊಡನೆ ಅವರ ಸ್ಥಾನದಲ್ಲಿ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿದ್ದ ಸರ್ ರಾಮಸ್ವಾಮಿ ಮುದಲಿಯಾರರು ನೇಮಿಸಲ್ಪಡಬಹುದೆಂಬ ವಾರ್ತೆಯನ್ನು ಅಸೋಸಿಯೇಟೆಡ್ ಪ್ರೆಸ್ ಸುದ್ದಿ ಸಂಸ್ಥೆ ಹಬ್ಬಿಸಿರುವದರಿಂದ ಸಂಸ್ಥಾನದಲ್ಲಿ ಒಂದು ಬಗೆಯ ಕಹಿವಾತಾವರಣವುಂಟಾಗಿದೆ. ಪ್ರಜೆಗಳಿಗೆ ಹೊಣೆಗಾರ ಸರಕಾರವನ್ನು ದಯಪಾಲಿಸುವ ಕಾಲ ಬಂದಿರುವಾಗ ಮೈಸೂರಿನ ಪ್ರಜೆಗಳಲ್ಲದ, ಅದರ ರಾಜಪ್ರಜೆಗಳ ಬಗ್ಗೆ ವಾತ್ಸಲ್ಯದ ಯಾವದೇ ಪರಂಪರೆಯಿಲ್ಲದ ಹೊರಗಿನವರನ್ನು ನೇಮಿಸುವ ಸಂಕಲ್ಪಕ್ಕೆ ಅನೇಕ ಪತ್ರಿಕೆಗಳು ಕಟ್ಟುನಿಟ್ಟಾದ ವಿರೋಧವನ್ನು ವ್ಯಕ್ತಗೊಳಿಸಿವೆ. ಮೇಧಾವಿಯಾಗಿದ್ದರೂ ಸರ್ ರಾಮಸ್ವಾಮಿ ಮುದಲಿಯಾರರು ಈ ವರೆಗೂ ರಾಜಕಾರಣದಲ್ಲಿ ವಹಿಸುತ್ತ ಬಂದಿರುವ ಪ್ರತಿಗಾಮಿ ಪಾತ್ರವನ್ನು ನೆನೆದು ಈ ವಿರೋಧ ಇನ್ನಷ್ಟು ತೀಕ್ಷ್ಣವಾಗಿದೆ. ೧೯೪೨ ರಲ್ಲಿ ಮೈಸೂರಿನ ಸಮೀಪದ ಹಳ್ಳಿಯೊಂದನ್ನು ಸರ್ ಸಾಹೇಬರು ೪೦ ಎಕರೆ ಭೂಮಿಯನ್ನು ಕೊಂಡಿದ್ದರಂತೆ. ಈ ಸಂಗತಿಯನ್ನು ಅವರು ಮೈಸೂರಿನ ಪ್ರಜೆಯೆಂದು ಸಾಧಿಸಲು ಉಪಯೋಗಿಸಲಾಗುವದೋ ಏನೋ. ರಾಮಸ್ವಾಮಿಯವರ ನೇಮಕವನ್ನು ಪ್ರತಿಭಟಿಸುತ್ತ ಮೈಸೂರ ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ನಾಯಕ ಶ್ರೀ ಹನುಮಂತಯ್ಯನವರೂ ಹಿಂದೂ ಮಹಾಸಭೆಯ ನಾಯಕ ಭೂಪಾಲಂ ಚಂದ್ರಶೇಖರಯ್ಯನವರೂ ಒಂದು ಹೇಳಿಕೆ ಹೊರಡಿಸಿದ್ದಾರೆ.

ಬರಗಾಲ ಪ್ರದೇಶಗಳ ಪರಿಹಾರಕ್ಕಾಗಿ ಈಗಾಗಲೆ ಮಂಜೂರು ಮಾಡಿದ ಹಣವಲ್ಲದೆ ತುಮಕೂರಿಗೆ ೧,೬೫,೦೦೦ ರೂಪಾಯಿ, ಕೋಲಾರ ಜಿಲೆಗೆ ೧,೨೬,೦೦೦ ರೂಪಾಯಿ, ಚಿತ್ರದುರ್ಗಕ್ಕೆ ೧೦,೫೭,೦೦೦ ರೂಪಾಯಿ, ಹೊಸ ಬರಗಾಲ ಕಾಮಗಾರಿಗಾಗಿ ಮೈಸೂರು ಸರಕಾರದವರು ಮಂಜೂರು ಮಾಡಿದ್ದಾರೆ.

ಶಿವಮೊಗ್ಗೆಯ ಶ್ರೀ ಗುಲಾಂ ಅಬೀದ ಅವರು ಮೈಸೂರು ಪ್ರತಿನಿಧಿ ಸಭೆಯ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿದ್ದಾರೆ.

ಮೈಸೂರು ನಗರದಲ್ಲಿಯ ತಾ ೧೫ ಕ್ಕೆ ಕೆಳದರ್ಜೆಯ ಅಂಚೆ ನೌಕರರ ಸಂಪು ಪ್ರಾರಂಭವಾಗಿದೆ. ನಂಜನಗೂಡಿಗೂ ಸಂಪು ಹಬ್ಬಿದೆ.

ದಕ್ಷಿಣ ಕನ್ನಡ

ತಾ ೭ಕ್ಕೆ ಸೇರಿದ ಮಂಗಳೂರ ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಕಾರ್ಯಕಾರಿ ಮಂಡಳದವರು ಹಾಯಸ್ಕೂಲಿನ ೧, ೨, ಮತ್ತು ೩ನೇ ಫಾರ್ಮುಗಳಲ್ಲಿಯೂ ಹಾಯರ ಎಲಿಮೆಂಟರಿ ಶಾಲೆಗಳಲ್ಲಿ ೬,೭,೮ನೆ ವರ್ಗಗಳಲ್ಲಿಯೂ ಹಿಂದುಸ್ತಾನಿ ಶಿಕ್ಷಣವನ್ನು ಒತ್ತಾಯದ್ದನ್ನಾಗಿ ಮಾಡಬೇಕೆಂದು ಸರಕಾರವನ್ನು ಕೇಳಿಕೊಂಡಿದ್ದಾರೆ.

ಉಪಾಹಾರ ಗೃಹಗಳಲ್ಲಿ ಹರಿಜನರಿಗೆ ಪ್ರವೇಶಕೊಡಬೇಕೆಂದು ಮಂಗಳೂರು, ಉಡುಪಿ ನಗರಸಭೆಗಳೂ ದ. ಕ ಜಿಲ್ಹಾ ಬೋರ್ಡ ಆಜ್ಞಾಪಿಸಿದ್ದರಿಂದ ಒಂದು ಬಗೆಯ ಬಿಗುಕಾನದ ವಾತಾವರಣವುಂಟಾಗಿದೆ. ಪ್ರಾರಂಭದಲ್ಲಿ ಕೆಲದಿನ ಹರಿಜನರಿಗೆ ನಿರಾತಂಕವಾಗಿ ಪ್ರವೇಶದೊರೆತರೂ ಮುಂದೆ ಆಕ್ಷೇಪಗಳು ಏಳಹತ್ತಿದವು. ಇದನ್ನು ವಿಚಾರಿಸಿ ತಕ್ಕಕ್ರಮ ಕೈಕೊಳ್ಳಲು ಹರಿಜನ ಪ್ರಮುಖರು ಒಂದು ಸಮಿತಿಯನ್ನು ರಚಿಸಿಕೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಹಾ ಕಾಂಗ್ರೆಸ್ ಸಮಿತಿ ಆಯ್ಕೆಗೆ ಸದ್ಯದಲ್ಲಿಯೇ ಚುನಾವಣೆ ನಡೆಯುವದಿದ್ದು ತಾ ೨೫-೭-೪೬ ಕ್ಕೆ ನಾಮಪತ್ರಕೊಡುವ ಕೊನೆಯ ದಿನವಾಗಿದೆ. ತಾ ೨೭ಕ್ಕೆ ನಾಮಪತ್ರ ಪರಿಶೀಲನೆ, ೩೦ ಕ್ಕೆ ಹಿಂತೆಗೆದುಕೊಳ್ಳುವ ಕೊನೆಯದಿನ ತಾ ೧೨-೮-೪೬ಕ್ಕೆ ಮತದಾನ ೧೬-೮-೪೬ ಪರಿಣಾಮಗಳ ಪ್ರಸಿದ್ಧಿ ತಕರಾರು ಕಳಿಸುವ ಕೊನೆಯದಿನ ೨೩—೮...೪೬ ಎಂದು ತಿಳಿಯುತ್ತದೆ. ಶ್ರೀ ಎನ್ ಆರ್ ಕಲ್ಲೆಯವರು ಚುನಾವಣೆ ಅಧಿಕಾರಿಯಾಗಿ ನೇಮಿಸಲ್ಪಟ್ಟದ್ದಾರೆ.

ಪುಣೆಯಲ್ಲಿ ಅಂಬೇಡಕರವಾದಿಗಳ ಸತ್ಯಾಗ್ರಹ

ನೂರಾರು ಜನರ ಬಂಧನ ಮತ್ತು ಶಿಕ್ಷೆ

ಪುಣೆಯಲ್ಲಿ ಮುಂಬಯಿ ಶಾಸನ ಸಭಾಧಿವೇಶನ ಪ್ರಾರಂಭವಾದೊಡನೆ (ತಾ ೧೫) ಕೌನ್ಸಿಲ ಭವನದ ಮುಂದೆ ಅಂಬೇಡಕರವಾದಿ ಅಸ್ಪೃಶ್ಯ ವರ್ಗದವರ ವಿಚಿತ್ರ ಸತ್ಯಾಗ್ರಹವೊಂದು ಆರಂಭವಾಯಿತು. ಅದರ ಫಲವಾಗಿ ನೂರಾರು ಜನರು ಬಂಧಿಸಲ್ಪಟ್ಟು ಶಿಕ್ಷೆಗೆ ಗುರಿಯಾಗಿದ್ದಾರೆ.

ಬ್ರಿಟಿಶ ರಾಯಭಾರದವರು ತಮ್ಮ ಸೂಚನೆಗಳಲ್ಲಿ ದಲಿತ ವರ್ಗದವರಿಗೆ ಮಾಡಿದ ಅನ್ಯಾಯಗಳ ಬಗ್ಗೆ ಪ್ರತಿಭಟನೆ ಸೂಚಿಸುವದಕ್ಕಾಗಿ ಮುಂಬಯಿ ಶಾಸನ ಸಭೆಯ ಮುಂದೆ ಮತಪ್ರದರ್ಶನ ಮಾಡಲು, ಅಂಬೇಡ್ಕರವಾದಿ ದಲಿತ ವರ್ಗದವರು ಅಪೇಕ್ಷಿಸಿದರು. ಜಿಲ್ಹಾ ಮ್ಯಾಜಿಸ್ಟ್ರೇಟರು ಇದರಿಂದ ಸಾರ್ವಜನಿಕ ಶಾಂತಿಗೆ ಬಾಧಕವಾಗಬಹುದೆಂದು ಪ್ರತಿಬಂಧಕ ಆಜ್ಞೆಯನ್ನು ಹೊರಡಿಸಿದರು. ಆದರೆ ಹರಿಜನ ಸತ್ಯಾಗ್ರಹಿಗಳು ಆ ಪ್ರತಿಬಂಧವನ್ನು ಮುರಿದು ತಾ ೧೫ ಕ್ಕೆ ೨೦ ಜನರ ತಂಡವಾಗಿ ಬಂದು “ಅಹಿಂಸಾತ್ಮಕವರ್ತನೆ” ಮತಪ್ರದರ್ಶನ ಮಾಡಿದರು. ಅವರೆಲ್ಲರನ್ನು ಬಂಧಿಸಲಾಯಿತು. ಅವರಲ್ಲಿ ೧೦ ಜನರಿಗೆ ಎಚ್ಚರಿಕೆ ಕೊಟ್ಟು ಬಿಟ್ಟು ಉಳಿದ ೧೦ ಜನರಿಗೆ ತಲಾ ೨೫ ರೂ. ದಂಡ ಅಥವಾ ೧೫ ದಿನ ಸಾದಾ ಶಿಕ್ಷೆ ವಿಧಿಸಲಾಯಿತು. ಅವರು ದಂಡ ಕೊಡದೆ ಶಿಕ್ಷೆ ಅನುಭವಿಸಲೊಪ್ಪಿದರು. ಮೊದಲನೆ ದಿನ ಶಿಕ್ಷೆಗೆ ಗುರಿಯಾದವರಲ್ಲಿ ದಲಿತ ವರ್ಗದ ಮಹಾಮಂಡಲದ ಕಾರ್ಯಕಾರಿ ಮಂಡಲ ಸದಸ್ಯರಾದ ಕುಮಾರಿ ಶಾಂತಾ ದಾಣಿ ಮತ್ತು ಶ್ರೀಮತಿ ಗೀತಾ ಗಾಯಕವಾಡರಿರುವರು.

ಸತ್ಯಾಗ್ರಹಿಗಳು ಮೆರವಣಿಗೆ ಹೊರಟು ಪ್ರತಿಬಂಧಿತ ಪ್ರದೇಶದಲ್ಲಿ ಪ್ರವೇಶಿಸಿ ಕಾಯಿದೆ ಭಂಗ ಮಾಡುವ ಕ್ರಮವಿಟ್ಟದ್ದಾರೆ.

ಎರಡನೆ ದಿನ ೧೨೦ ಜನರನ್ನು ಬಂಧಿಸಲಾಯಿತು. ಮೂರನೆ ದಿನ ೧೧೪ ಜನರಿಗೆ ಶಿಕ್ಷೆಯಾಯಿತು ಅವರಲ್ಲಿ ಅನೇಕ ಸ್ತ್ರೀಯರಿದ್ದಾರೆ ನಾಲ್ಕನೆಯ ದಿನವೂ ನೂರಾರು ಬಂಧನಗಳಾಗಿವೆ, ೫೦ ರೂ. ದಂಡ ಅಥವಾ ೩ ತಿಂಗಳ ಶಿಕ್ಷೆ ವರೆಗೆ ವಿಧಿಸಲ್ಪಟ್ಟಿದೆ.

ಕಾಂಗ್ರೆಸ್ಸಿನ ಪ್ರಯತ್ನದಿಂದ ಸಾಧಿಸಲ್ಪಟ್ಟದ್ದೆಂದು ಹೇಳಲಾದ ಬ್ರಿಟಿಶ ರಾಯಭಾರದ ಸೂಚನೆಗಳಲ್ಲಿ ದಲಿತರ ಹಿತಗಳನ್ನು ಉಪೇಕ್ಷಿಸಲಾಗಿದೆಯೆಂದೂ ಕಾಂಗ್ರೆಸ್ಸು ಯಾವಾಗಲೂ ದಲಿತರನ್ನು ಅಲಕ್ಷಿಸುತ್ತ ಬಂದಿದೆಯೆಂದೂ ದೂಷಿಸುವ ಹೇಳಿಕೆಯನ್ನು ಸತ್ಯಾಗ್ರಹಿಗಳ ಪರವಾಗಿ ನ್ಯಾಯಾಲಯದಲ್ಲಿ ಓದಿ ಹೇಳಲಾಯಿತು.



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜುಲೈ ತಾ. ೨೨ ರಿಂದ ೨೮ ರ ವರೆಗೆ

ಮೇಷ

ಪ್ರಕೃತಿ ಮತ್ತು ಸ್ತ್ರೀ ಸುಖ ಬಹಳ ಉತ್ತಮ. ಆದರೆ ಮಕ್ಕಳಿಂದ ಕೆಲ ಅಸಕೃತ್ಯ ಸಂಭವಿಸುವದರಿಂದ ಮನಸ್ಸು ಬಹಳ ವ್ಯಗ್ರವಾಗುವದು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆ ಅಲ್ಪಸ್ವಲ್ಪ ನಡದೇಇದೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವು ಬಹಳ ಕಡಿಮೆ ಮತ್ತು ವೆಚ್ಚ ಮಾತ್ರ ಮಿತಿಮೀರಿ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಮತ್ತು ವೆಚ್ಚ ಬಹಳ, ಆದರೆ ಯಶಸ್ಸು ಸಿಕ್ಕುವಂಥ ಅನೇಕ ಲಕ್ಷಣಗಳು. ಮಿತ್ರರಲ್ಲಿ ವಿರೋಧ ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಬಹಳ ಉತ್ತಮ. ಅಶ್ವಿನಿಯ ಕೊನೆಯ ೪ ಮತ್ತು ಭರಣಿಯ ಮೊದಲನೆ, ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೨, ೨೩, ೨೬, ೨೭, ಸ್ವಲ್ಪ ಅನುಕೂಲ.

ವೃಷಭ

ಪ್ರಕೃತಿ ಉತ್ತಮ. ಆದರೆ ಮನಸು ಅಸ್ವಸ್ಥ ಹೆಂಡತಿಗೂಡ ಬಹಳ ವಿರೋಧ. ಆದರೆ ಪ್ರಾಪಂಚಿಕ ಸುಖ ಒಟ್ಟಾರೆ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಬಹಳ ಲಾಭ ಉತ್ತಮ ಆದರೆ ಪ್ರತಿಷ್ಠೆ ಇಲ್ಲವೆ ಲೌಕಿಕದ ಅಂಜಿಕೆ ಪ್ರತಿ ಕೆಲಸದಲ್ಲಿ ಸಾಹಸದ ಇಲ್ಲವೆ ಧುಡುಂ ಪ್ರವೇಶದ ಸರತಿ. ಬಂಧುವರ್ಗದವರು ಗೊಂದಲದ ವ್ಯವಹಾರ ಮಾಡುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣ ಗಳಿಗೆ ಹೆಚ್ಚು ತೊಂದರೆ, ತಾ. ೨೬, ೨೭, ೨೮, ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ ಆದರೆ ಕುಟುಂಬದಲ್ಲಿಯ ಇತರರೊಡನೆ ಕಲಹದ ದೊಡ್ಡ ಧುಂಬು ಬಂಧುವರ್ಗದವರಲ್ಲಿ ವಿರೋಧ. ಮಕ್ಕಳಲ್ಲಿ ಒಬ್ಬರಿಗೆ ಅಪಘಾತದ ಕ್ಲೇಶದ ಅಂಜಿಕೆ. ಪ್ರತಿಷ್ಠೆಯ ವಿಷಯಗಳಲ್ಲಿ ಪರಸ್ಪರ ತಪ್ಪು ತಿಳುವಳಿಕೆಯಾಗುವದರಿಂದ ಹಾವೆಂದು ಹಗ್ಗವನ್ನು ಉಪಯೋಗಿಸುವ ಯೋಗ. ಉದ್ಯೋಗದಲ್ಲಿ ಪ್ರಗತಿ ತಡೆಯಲ್ಪಟ್ಟದೆಂದೆನಿಸಿದರೂ ಲಾಭ ಮತ್ತು ಪ್ರತಿಷ್ಠೆ ಮನಸ್ಸಿನಂತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ ಪ್ರತಿಯೊಂದು ಕೆಲಸದಲ್ಲಿ ಅಪೂರ್ವ ಸಾಹಸದಿಂದ ಶತ್ರುಗಳನ್ನು ಹಣ್ಣು ಮಾಡಲಾಗುವದು, ಮಿತ್ರ ಸುಖ ಉತ್ತಮ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ ಮೃಗಾದ ೪ ನೆ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು ತಾ. ೨೨, ೨೩, ೨೬, ೨೭, ಅನುಕೂಲ.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ, ಆದರೆ ಮಕ್ಕಳಲ್ಲಿ ಒಬ್ಬರಿಗೆ ಕ್ಲೇಶ ಇಲ್ಲವೆ ವ್ಯಾವಹಾರಿಕ ತೊಂದರೆ ಬಹಳಾಗುವ ಸಂಭವ ಪ್ರಯೋಜನದಲ್ಲಿ ಸುಖ ಮತ್ತು ಉತ್ಕರ್ಷ ಬೆಳೆವಂಥ ಸಂಗತಿ. ಉದ್ಯೋಗದಲ್ಲಿ ಪ್ರಗತಿ ಜೋರಾದದ್ದು. ಪ್ರತಿಷ್ಠೆ ಹೆಚ್ಚು. ಮತ್ತು ಲಾಭ ಅದಕಿಂತ ಹೆಚ್ಚು ಆದರೆ ಸರಕಾರಿ ಜನರಿಂದ ಗುಪ್ತರೀತಿಯಿಂದ ಬಹಳ ತೊಂದರೆಯಾಗುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆಸು ಸ್ಥಿತಿ. ಮಿತ್ರ ಸುಖ ಅನುಕೂಲ, ಪ್ರವಾಸಾದಿ ಕೆಲಸ ಹಿತದ್ದು ಪುಷ್ಯದ ೪ ನೆ ಮತ್ತು ಆಶ್ಲೇಷದ ಮೊದಲನೆ ೩ ನೇ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೨, ೨೩, ೨೪, ೨೫, ಅನುಕೂಲ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಬಹಳ ಕ್ಲೇಶ ಉಳಿದ ವಿಷಯಗಳಲ್ಲಿ ಪ್ರಾಪಂಚಿಸುಖ ಸುಖ ಸಾಧಾರಣ ಅನುಕೂಲ. ಪ್ರತಿಯೊಂದು ಕೆಲಸದಲ್ಲಿ ಇಮ್ಮಡಿತೊಂದರೆ. ಮತ್ತು ಮುಮ್ಮಡಿ ವೆಚ್ಚ ಆಗಿಯ ೩ ಅದು ಪೂರ್ಣ ಮತ್ತು ಮನಸಿನಂತೆ ಆಗಬೇಕಾದರೆ ಸಾಕುಬೇಕಾಗಿ ಹೋಗುವದು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಚನ್ನಾಗಿ ಉಳಿದರೂ ಲಾಭದ ದೃಷ್ಟಿಯಿಂದ ಪೂಜಿಯೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಮಿತ್ರರಲ್ಲಿ ವಿರೋಧ ಮೇಲಿಂದ ಮೇಲೆ ಅಶುಭ ಶಕುನ ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ ಮಘಾದ ೪ ನೇ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೨, ೨೩, ೨೪, ೨೫ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವಿದೆ, ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ವೆಚ್ಚ ಹೆಚ್ಚು. ನಿರರ್ಥಕ ಸಂಗತಿಗಳಲ್ಲಿ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಸ್ವಲ್ಪ ಅವಚಿತ ಲಾಭದ ಸಂಭವವೂ ಇದೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಕೃತ್ತಿಕೆಯ ೪ನೇ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೪ ೨೭ ೨೮ ಅನುಕೂಲ.

ತುಲಾ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಉಳಿದ ಪ್ರಾಪಂಚಿಕ ಸಂಗತಿಗಳಲ್ಲಿ ಅತಿಶಯ ತೊಂದರೆ. ಎಲ್ಲದರಲ್ಲಿಯೂ ಇಮ್ಮಡಿ ವೆಚ್ಚ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಅನುಕೂಲ ಆದರೆ ಹಿತವಿರೋಧಿಗಳಿಂದ ಕಾಲಕಾಲಕ್ಕೆ ಅವಸಾನ ಘಾತ ಮತ್ತು ದುಃಸಾಧ್ಯ ಅಡಚಣಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ ಚಿತ್ರಾದ ೪ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೨ ೨೩ ೨೬ ೨೭ ಅನುಕೂಲ.

ವೃಶ್ಚಿಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಸಮಾಧಾನ ಕಡಮೆ. ಆದರೆ ಎಲ್ಲ ವಿಷಯಗಳಲ್ಲಿ ಔತ್ಸುಕ್ಯ ನೆಟ್ಟಗೆ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಐಪತ್ತಿಯಿಂದ ಹೆಚ್ಚು ವೆಚ್ಚವಾಗುವ ಪ್ರಸಂಗ. ಮಿತ್ರಸುಖ ಉತ್ತಮ, ಎಲ್ಲದರಲ್ಲಿಯೂ ಅನಾಯಾಸವಾಗಿ ಯಶಸ್ಸು ಇಲ್ಲವೆ ದೊಡ್ಡ ಸ್ಥಾನ ಸಿಕ್ಕುವ ಯೋಗ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ ಇಲ್ಲವೆ ಮಾನ್ಯ ಒಡಂಬಡಿಕೆ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಅನುರಾಧೆಯ ೪ನೆ ಮತ್ತು ಜೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೪ ೨೫ ೨೮ ಅನುಕೂಲ.

ಧನು

ಪ್ರಕೃತಿ ಉತ್ತಮ. ಆದರೆ ಹೆಂಡತಿಯದು ಕೆಡುವ ಇಲ್ಲವೆ ಕೆಲ ಕಾರಣದಿಂದ ಸ್ತ್ರೀಸುಖದಲ್ಲಿ ವಿರಸ ಇಲ್ಲವೆ ಅಂತರ ಬೀಳುವ ಸಂಭವ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆ ವಿಪರೀತ. ಆದರೆ ಮಕ್ಕಳ ಉತ್ಕರ್ಷಕ್ಕೆ ಉಚಿತವಾದ ಕೆಲಸಂಗತಿಗಳನ್ನು ಮಾಡುವರು ಪ್ರತಿಯೊಂದು ಕೆಲಸದಲ್ಲಿ ಆತ್ಮವಿಶ್ವಾಸದ ಪೂರ್ಣ ಅಭಾವ. ಉದ್ಯೋಗದಲ್ಲಿ ಲಾಭ ಅನುಕೂಲ ಆದರೆ ಪ್ರಗತಿ ಮತ್ತು ಪ್ರತಿಷ್ಠೆಯು ಮೋರೆ ಹಿಮ್ಮೆಟ್ಟದ್ದು, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಆದರೆ ಶತ್ರುಗಳ ಜೋರು ಒಳಗಿಂದಲೆ ಬಹಳ ಕುಂದುತ್ತ ನಡೆದದ್ದು ಪ್ರವಾಸಾದಿ ಕೆಲಸ ಹಿತದ್ದು, ಮೂಲಾದ ೪ನೆ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ ತಾ. ೨೨ ೨೩, ೨೬ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವಿ ಆದರೆ ನೆರೆಯವರಿಂದ ಮತ್ತು ಆಪ್ತರಿಂದ ಆಶ್ಚರ್ಯಕರ ರೀತಿಯಲ್ಲಿ ಸಹಾಯ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆಗೆ ಮಾತ್ರ ಸ್ವಲ್ಪ ಕುಂದು ಮಿತ್ರಸುಖ ಉತ್ತಮ. ಮಕ್ಕಳಲ್ಲಿ ಒಬ್ಬರ ಉತ್ಕರ್ಷವಾದರೆ ಎರಡನೆಯವರ ಅಪಕರ್ಷ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ ಉತ್ತರಾಷಾಢಾದ ೪ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ ೨೪ ೨೫ ೨೮ ಅನುಕೂಲ.

ಕುಂಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಕೆಡುವದು. ನೋಡನೋಡುವಷ್ಟರಲ್ಲಿ ಅನೇಕ ವಿಘ್ನಗಳು ಉತ್ಪನ್ನವಾಗುವ ಅಂಜಿಕೆ. ಹೆಂಡತಿ ಮತ್ತು ಮಕ್ಕಳಿಂದ ಅವಹೇಲನೆ, ಪ್ರತಿಯೊಂದರಲ್ಲಿ ಮನಸ್ಸಿನ ವಿರುದ್ಧ ಕೃತಿ ಮಾಡಬೇಕಾಗುವಂತೆ ಯಾರಿಂದಲಾದರೂ ಒತ್ತಾಯ ಬರುವದು, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಆದರೆ ವೆಚ್ಚದ ದಶಮುಖಗಳು ಒಮ್ಮೆಲೆ ತೆರೆಯುವ ಅಂಜಿಕೆ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳು ಅಷ್ಟೇ ಹಿಂದೆ ಸರಿಯುವವು ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ, ಧನಿಷ್ಠಾದ ೪ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ಬಹಳ ತೊಂದರೆ. ತಾ. ೨೨ ೨೩ ೨೬ ಅನುಕೂಲ.

ಹಿಂದುಸ್ಥಾನದಲ್ಲೆಲ್ಲ ಅಂಚೆ ಪೇದೆ, ಮತ್ತು ಕೆಳನೌಕರರ ಸಂಪು

ಲಕ್ಷಾಂತರ ಪತ್ರಗಳು ಹಂಚದೆ ಉಳಿದಿವೆ

ಸರಕಾರದ ಉದ್ಧತ ವೃತ್ತಿ

ಅಖಿಲ ಹಿಂದುಸ್ಥಾನದಲ್ಲಿ ಅಲ್ಲಲ್ಲಿ ತಾ ೧೦ ಮಧ್ಯರಾತ್ರಿಯಿಂದ ಪ್ರಾರಂಭವಾದ ಅಂಚೆ ಖಾತೆಯ ಕೆಳವರ್ಗದ ನೌಕರ ಮತ್ತು ಅಂಚೆ ಪೇದೆಗಳ ಸಂಪಿನಿಂದ ಇಡಿ ಅಂಚೆ ಖಾತೆಯ ನರ ಸುಕ್ಕಿ ಹೋದಂತಾಗಿದೆ. ಮುಂಬಯಿ ಮೊದಲಾದ ನಗರಗಳಲ್ಲಿ ಇದರಿಂದ ಅತ್ಯಂತ ಅನಾನುಕೂಲತೆ ಒದಗಿದ್ದು ತಾತ್ಪೂರ್ತಿಕವಾಗಿ ಸೇರಿಸಿಕೊಂಡ ಅಂಚೆ ಪೇದೆ ಮೊದಲಾದವರು ಕೂಡ ಕೆಲಸ ಸಾಗಿಸುತಿರುವಾಗ ಸಂಪುಹೂಡಿದ ಅಂಚೆ ಜನರು ಯಶಸ್ವಿಯಾಗಿ ನಿರೋಧ ನಡೆಸುವದರಿಂದ ಕಾಗದ ಅಸಂಖ್ಯ ಪತ್ರಗಳು ಹಂಚದೆ ಉಳಿದುಬಿಟ್ಟಿವೆ. ಸಂಪು ಪ್ರಾರಂಭವಾಗುವ ಮೊದಲೇ ಅಂಚೆ ಖಾತೆಯವರು ರಿಜಿಸ್ಟೇಶನ್ ಮನಿಯಾರ್ಡರ ಇನ್‌ಶೂರ ಮೊದಲಾದ ಬೆಲೆಯುಳ್ಳ ನೊಂದಣಿಯಾಗುವ ವಸ್ತುಗಳನ್ನು ಸ್ವೀಕರಿಸುವದನ್ನು ಬಿಟ್ಟುಬಿಟ್ಟಿದ್ದರು. ತಾ ೧೪ ಮಧ್ಯರಾತ್ರಿಯಿಂದ ತಂತಿಖಾತೆಯ ಲಾಯನಮನ್ನರು ಕೂಡ ಸಂಪು ಹೂಡಿರುವದರಿಂದ ತಂತಿಗಳು ಬರಹೋಗುವದೂ ತೊಂದರೆಯದಾಗಿದೆ.

ಅಂಚೆ ಮತ್ತು ತಂತಿಖಾತೆಯ ಕೆಳದರ್ಜೆಯ ನೌಕರರ ಮತ್ತು ಅಂಚೆ ಪೇದೆಗಳ ಸಂಘದ ಗೌರವಕಾರ್ಯದರ್ಶಿಗಳಾದ ದಳವಿಯವರು ತಾ ೨೬ ಕ್ಕೆ ಅಂಚೆ ಖಾತೆಯವರಿಗೆ ಕಳಿಸಿದ ನೋಟೀಸಿನನ್ವಯ ಸಂಪು ತಾ ೧೦ ಮಧ್ಯರಾತ್ರಿಗೆ ಪ್ರಾರಂಭವಾಯಿತು. ಮುಂಬಯಿ, ಪುಣೆ, ಕಲಕತ್ತೆ, ಅಲಹಾಬಾದ, ಬನಾರಸ, ಬೆಂಗಳೂರು, ದಿಲ್ಲಿ, ಪಾಟ್ನಾ, ಮೊದಲಾದ ಕಡೆಗಳಲ್ಲಿ ಮೊದಲನೆಯ ದಿನವೇ ಒಳ್ಳೆ ಹುರುಪಿನಿಂದ ಪ್ರಾರಂಭವಾಯಿತು ಮುಂದೆ ಅದು ಮದ್ರಾಸ, ಲಾಹೋರ ಕಡೆಗಳಿಗೂ ಹಬ್ಬಿ ಪ್ರಚಂಡ ರೂಪ ತಳೆಯಿತು.

ಬೆದರಿಕೆ ವ್ಯರ್ಥವಾಯಿತು

ಸಂಬಳದ ಹೆಚ್ಚಳ ರಜೆ ಸವಲತ್ತು ಮತ್ತು ಆಡಚಣೆಯನ್ನು ಬೇಡಿ ಸಂಪಿನ ನೋಟೀಸ ಬಂದಂದಿನಿಂದಲೂ ಸರಕಾರದ ಅರ್ಥಾತ್ ಹಿಂದುಸ್ಥಾನ ಸರಕಾರದ ಅಂಚೆ ತಂತಿ ಖಾತೆಯ ನಿರ್ದೇಶಕರಾದ ಶ್ರೀ ಕೃಷ್ಣ ಪ್ರಸಾದರ ನೀತಿ ಹೆದರಿಕೆ ಹಾಕುವದೇ ಆಗಿತ್ತು. ಈ ಸಂಪು ಅಕ್ರಮವಾಗುವದೆಂದು ಅವರು ಸಾಧಿಸತೊಡಗಿದರು. ಸಂಪು ಪ್ರಾರಂಭವಾದರೆ ಮಿಲಟರಿಯವರ ಸಹಾಯ ಪಡೆದು ಪತ್ರಗಳ ಹಂಚುವಳಿ ನಡೆಸುವದಾಗಿಯೂ ಸರಕಾರದವರು ಬೆದರಿಸಿದರು. ಮುಂಬಯಿ ಪೋಸ್ಟಮಾಸ್ಟರ ಜನರಲ್ಲರು ಸಂಪುಗಾರರಿಗೆ ಕೊನೆಯ ಎಚ್ಚರಿಕೆಕೊಟ್ಟು ೭೨ ತಾಸು ಕೆಲಸದಿಂದ ತಪ್ಪಿಸಿದ ಅಂಚೆ ಜನರನ್ನು ಕೆಲಸದಿಂದ ತಳ್ಳಿಹಾಕಲಾಗುವದೆಂದೂ ಹೊಸಬರನ್ನು ನೇಮಿಸಲಾಗುವದೆಂದೂ ಸಾರಿದರು. ತಾತ್ಕಾಲಿಕ ಕೆಲಸಗಾರರನ್ನು ಸ್ವಯಂಸೇವಕರನ್ನೂ ಸೇರಿಸಿಕೊಳ್ಳುವ ಪ್ರಯತ್ನವೂ ನಡೆಯಿತು. ವಾಹನಗಳಲ್ಲಿ ಪತ್ರಗಳನು ಸಾಗಿಸಿ ಹಂಚುವಳಿ ಕೇಂದ್ರಗಳ ಮೂಲಕ ಪತ್ರ ಹಂಚುವದೂ ಆಯಿತು.

ಆದರೆ ಸಂಪುಗಾರರು ಅತ್ಯಂತ ದೃಢತೆಯಿಂದ ವರ್ತಿಸಿದರು. ಕರಿಗಾಲಿನವರನ್ನು ನಿರೋಧಿಸುವದರಲ್ಲಿಯೂ ಸಾರ್ವಜನಿಕ ಬೆಂಬಲ ಪಡೆಯುವದರಲ್ಲಿಯೂ ಅವರು ಯಶಸ್ವಿಯಾದರು. ಪಂಡಿತ ಜವಾಹರಲಾಲರು ಈ ಜನರ ಬೇಡಿಕೆಯನ್ನು ಮಧ್ಯಸ್ಥಿಗೊಪ್ಪಿಸಬೇಕೆಂದು ಸರಕಾರಕ್ಕೆ ಒತ್ತಾಯ ಮಾಡಿದ್ದಾರೆ. ನೀವು ಶಾಂತ ರೀತಿಯಿಂದ - ಸಂಪು ಸಾಗಿಸಿದರೆ ಯಶಸ್ವಿಯಾಗುವಿರಿ ಎಂದು ಗಾಂಧೀಜಿಯವರು ಆಶೀರ್ವದಿಸಿದರು. ಮೊನ್ನೆ ಮೊನ್ನೆ ಸರದಾರ ವಲ್ಲಭಭಾಯಿಯವರು ಅಧಿಕಾರಿಗಳ ಮೊಂಡತನವನ್ನು ಟೀಕಿಸಿ ಇದನ್ನು ಹೀಗೆಯೆ ಬಿಟ್ಟರೆ ಈ ಸಂಪು ಬೇರೆ ಕಡೆಗಳಿಗೂ ಹಬ್ಬಬಹುದೆಂದು ಎಚ್ಚರಿಸಿದ್ದಾರೆ. ಮಿಲಿಟರಿಯವರಿಂದಾಗಲಿ ಕರಿಗಾಲಿನವರಿಂದಾಗಲಿ ಅಥವಾ ಸ್ವಯಂಸೇವಕರಿಂದಾಗಲಿ ಕೆಲಸ ಸ್ವಲ್ಪಾಂಶವೂ ಸಾಧಿಸಲಿಲ್ಲ. ೩೦ ಲಕ್ಷ ಹಂಚುವಳಿಯಾಗದ ಪತ್ರಗಳು ಮೊದಲ ದಿನಗಳಲ್ಲೇ ಮುಂಬಯಿಯಲ್ಲಿ ರಾಶಿಬಿದ್ದವು.

ಹಾದಿಗೆ ಬಂದರು

ಇಷ್ಟರಲ್ಲಿ ಶ್ರೀ ಕೃಷ್ಣಪ್ರಸಾದರ ಉದ್ಧತ ವೃತ್ತಿಯಿಂದಲೇ ಪರಿಸ್ಥಿತಿ ಇಷ್ಟು ಹದಗೆಟ್ಟಿತೆಂದು ಜನರು ಬಹಿರಂಗವಾಗಿ ನುಡಿಯತೊಡಗಿದರು. ಅದ್ದರಿಂದ ಪ್ರಸಾದರು ಮುಂಗಾಣದೆ 'ಅನಧಿಕೃತ' ರೀತಿಯಲ್ಲಿ ಸಂಪುಗಾರರ ಮುಂದಾಳುಗಳೊಡನೆ ಮಾತುಕತೆ ನಡೆಸಲು ಸಿದ್ಧರಾದರು. ಇದಲ್ಲದೆ ನ್ಯಾಯಮೂರ್ತಿ ರಾಜಾಧ್ಯಕ್ಷರ ಮಧ್ಯಸ್ಥಿಕೆಗೆ ಮೊದಲೆ ಒಪ್ಪಿಸಲ್ಪಟ್ಟ ಅಂಚೆ ಜನರ ಕೆಲವು ಬೇಡಿಕೆಗಳ ಬಗ್ಗೆ ಅವರ ತೀರ್ಪು ಕೈಸೇರಿದೊಡನೆ ಅದನ್ನು ಒಡನೆ ಯೋಗ್ಯವಾಗಿ ಪರಿಶೀಲಿಸುವದಾಗಿ ಸರಕಾರ ಆಶ್ವಾಸನವಿತ್ತಿತು. ಈ ತೀರ್ಪು ಈಗಾಗಲೆ ಸರಕಾರದ ಕೈಸೇರಿದೆ. ಅದರಲ್ಲಿ ಅಂಚೆ ಜನರ ಪಗಾರದಲ್ಲಿ ನೂರಕ್ಕೆ ೫ ರಿಂದ ೫೦ ರ ವರೆಗೆ ಹೆಚ್ಚಳವಾಗಬೇಕೆಂದು ಅವರು ತೀರ್ಮಾನಿಸಿದ್ದಾರೆ. ಮಾತುಕತೆ ನಡೆಸುವ ವಿಷಯದಲ್ಲಿ ಸಂಘದವರನ್ನು ಅಧಿಕೃತವಾಗಿ ಕರೆದರೆ ಮಾತ್ರ ತಾವು ಸಿದ್ಧರಿರುವದಾಗಿ ಶ್ರೀ ದಳವಿಯವರು ಜಳಜಳ ಹೇಳಿಬಿಟ್ಟಿದ್ದಾರೆ. ಅ. ಭಾ. ಅಂಚೆ ನೌಕರರ ಸಂಘಗಳ ಸಂಯುಕ್ತ ಮಂಡಲದ ಅಧ್ಯಕ್ಷರಾದ ಶ್ರೀ ದಿವಾಣ ಚಮನಲಾಲರು ಮಾತುಕತೆಯ ಪ್ರಯತ್ನ ನಡೆಸಿದ್ದಾರೆ. ಆದರೆ ದಳವಿಯವರು ಅವರ ಅಧಿಕಾರವನ್ನು ಅಲ್ಲಗಳೆದು (ದಳವಿಯವರ ಸಂಘ ಅ. ಭಾ. ಮಂಡಲಕ್ಕೆ ಸೇರಿಲ್ಲ) ಸಂಪಿನ ಸಮಿತಿಯೇ ಮಾತುಕತೆ ನಡೆಸಲು ಅಧಿಕೃತವಾದುದಲ್ಲವೆಂದು ಸಾರಿದ್ದಾರೆ. ಇದರಿಂದ ಅಂಚೆ ಜನರ ಮುಂದಾಳುಗಳಲ್ಲೆ ಒಡಕುಂಟಾಗಿದೆ. ಇದೊಂದೇ ಈ ವರೆಗೆ ಈ ಸಂಪಿನಲ್ಲಿ ಕಂಡುಬಂದ ದೌರ್ಬಲ್ಯ.

(೪ ನೇ ಪುಟದಿಂದ ಮುಂದರಿದುದು)

ನಾಲ್ವರು ನಾಲ್ಕು ಪ್ರಾಂತಿಕ ಕಾಂಗ್ರೆಸ ಕಮಿಟಿಗಳ ಅಧ್ಯಕ್ಷರು. ಡಿಸೌಜಾರವರು ಕ್ರಿಶ್ಚನ್‌ರು ಮಸಾನಿಯವರು ಪಾರ್ಸಿ ಪ್ರತಿನಿಧಿಗಳು. ಹಂಸಾ ಮೇಥಾ ಸ್ತ್ರೀ ಮತ್ತು ನಲವಡೆ ಹಾಗೂ ಮಾನೆಯವರು ಹರಿಜನಪ್ರತಿನಿಧಿಗಳು. ಖಂಡೂಭಾಯರು ಕೂಲಿಕಾರ ಪ್ರತಿನಿಧಿಗಳು. ಮುಂದಿನನಾಲ್ವರ ಹೆಸರುಗಳನ್ನು ಮುಂಬಯಿ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯಕಾರೀ ಮಂಡಳದವರು ಸೂಚಿಸಿದ್ದರು ಇವೆಲ್ಲ ಹೆಸರುಗಳಿಗೆ ಕಾಂ. ಪಕ್ಷದಒಮ್ಮತದ ಒಪ್ಪಿಗೆಯಿದೆ. ಇನ್ನು ಕೊನೆಯವರಲ್ಲಿ ಅರ್. ಅರ್. ಭೋಳೆಯವರು ಅಂಬೇಡಕರ ಪಕ್ಷದವರು ಥತೆ ಮತ್ತು ಕರಂದೀಕರರುಹಿಂದೂ ಮಹಾಸಭೆಯವರು ದಳವಿಯವರು ರಾಯ ಪಕ್ಷದವರು. ಈ ಪ್ರತಿನಿಧಿಗಳ ಚುನಾವಣೆ ೨೦ ನೇ ತಾರೀಖಿಗೆ ಜರುಗಿದ್ದಕ್ಕೆ ಪರಿಣಾಮ ಹೊರಬೀಳುವದು. ಮುಸಲ್ಮಾನರ ಪರವಾಗಿರುವ ೨ ಸ್ಥಳಗಳಿಗೆ ಮುಸ್ಲಿಂ ಲೀಗಿನ ಶ್ರೀ ಅಯ ಎನ್ ಚುಂದ್ರಿಗಾರರು ಮತ್ತು ಅಬ್ದುಲ್‌ಕಾದರ ಶೇಖರು ನಿಂತಿರುವರು.

ಬೆಂಗಳೂರು ಬಸವನಗುಡಿಯಲ್ಲಿ ಸ್ಥಾಪಿತವಾಗಿರುವ ಮಹಿಳಾ ಇಂಟರಮೀಡಿಯೇಟ ಕಾಲೇಜಿಗಾಗಿ ಈಗಾಗಲೆ ೫೦೦೦೦ ರೂಪಾಯಿ ದಾನ ಮಾಡಿರುವ ಶ್ರೀ ಬಿ ಎಂ. ಶ್ರೀನಿವಾಸಯ್ಯನವರು ಪುನಃ ೫೦೦೦೦ ರೂಪಾಯಿ ದಾನ ಮಾಡಿದ್ದಾರೆ.

ಮೀನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖವೂ ಸಾಧಾರಣವೆ, ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ಮನಸಿನ ವಿರುದ್ಧ ಕೆಲಸದಲ್ಲಿ ವೆಚ್ಚದ ಯೋಗ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು ಆದರೆ ಆ ಬಗ್ಗೆ ಜನರಲ್ಲಿ ಮನಬಂದಂತೆ ಸುದ್ದಿಗಳು ಹಬ್ಬುವವು. ಮಿತ್ರರಲ್ಲಿ ಕ್ಲೇಶ, ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ, ಉತ್ತರಾಭಾದ್ರಪದದ ೪ನೆ ಮತ್ತು ರೇವತಿಯ ೧ನೆ ಚರಣಗಳಿಗೆ ತೊಂದರೆ ಕಡಮೆ. ತಾ. ೨೨ ೨೩ ೨೪ ೨೫ ಅನುಕೂಲ.

ಜೀವನ ಮತ್ತು ವಿಜ್ಞಾನ

ಬಂಗಾರಕ್ಕಿಂತ ಹೆಚ್ಚು ಬೆಲೆಯುಳ್ಳ ಅನಿಲ

ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ಹೈದರಾಬಾದು (ದ.)

ಸಾಮಾನ್ಯವಾಗಿ, ಬಂಗಾರ ಮತ್ತು ಮಹಾರಜತ (Platinum) ಗಳೆರಡೇ ಬಹಳ ಬೆಲೆ ಬಾಳುವ ವಸ್ತುಗಳೆಂದು ಜನರ ತಿಳುವಳಿಕೆ. ಆದರೆ ಇವುಗಳಿಗಿಂತಲೂ ಹೆಚ್ಚು ಬೆಲೆ ಬಾಳುವ ಕೆಲವು ಅನಿಲಗಳು (ಅರ್ಗನ್, ನೀಯಾನ್, ಹೀಲಿಯಂ) ಗಾಳಿಯಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿಯೂ ತೇವವಾದ ಗಾಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿಯೂ ಸಿಕ್ಕುತ್ತವೆ. ಸಮುದ್ರದ ನೀರಿನಲ್ಲಿ ಕರಗಿದ ಗಾಳಿಯಲ್ಲಿ ವಾಯುಮಂಡಲಕ್ಕಿಂತ ಮೂರು ಪಟ್ಟು ಹೆಚ್ಚು ಈ ಬೆಲೆಯುಳ್ಳ ಅನಿಲಗಳು ಇರುತ್ತವೆ. ಇವುಗಳಲ್ಲಿ ಎಲ್ಲಕ್ಕೂ ಹೆಚ್ಚು ಉಪಯೋಗವಾಗುವ ಅನಿಲವೇ ಹೀಲಿಯಂ.

೧೮೬೮ ರಲ್ಲಿ ಈ ಅನಿಲ (ಹೀಲಿಯಂ) ವನ್ನು ಸೂರ್ಯಮಂಡಲದಲ್ಲಿ ವರ್ಣದರ್ಶಕದ ಸಹಾಯದಿಂದ ಕಂಡುಹಿಡಿಯಲಾಯಿತು. ಇತ್ತೀಚಿನ ೨೩ ವರ್ಷಗಳ ಪರಿಶ್ರಮದಿಂದ 'ಪೆಕ್ಸಾಸ್' 'ಎನಾರಿಲೊ' ಎಂಬ ಸ್ಥಳಗಳಲ್ಲಿ ಈ ಅನಿಲವು ಪ್ರಕೃತಿದತ್ತರೂಪದಲ್ಲಿ ಅಪರಿಮಿತವಾಗಿ ಸಿಕ್ಕುತ್ತದೆಂದು ತಿಳಿದುಬಂದಿದೆ.

ಹೀಲಿಯಂ ಒಂದು ಅಸಾಧಾರಣ ಅನಿಲವಾಗಿದ್ದು ಜಲಜನಕ್ಕಿಂತಲೂ ಹಗುರಾಗಿದೆ. ಇದು ಜ್ವಾಲಾಗ್ರಾಹಿಯೂ ಅಲ್ಲ ಸ್ಫೋಟಕವೂ ಅಲ್ಲ. ಒಂದುವೇಳೆ ವಿಮಾನಗಳಲ್ಲಿ ಉಪಯೋಗಿಸಲಿಕ್ಕೆ ಜಲಜನಕದ ಬದಲಾಗಿ ಇದು ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕಿದ್ದರೆ, ಅನೇಕ ದೊಡ್ಡ ಅಪಘಾತಗಳು ದೂರವಾಗಿ ಆಕಾಶಯಾನದ ಇತಿಹಾಸವು ಬೇರೆ ಸ್ವರೂಪವನ್ನು ಹೊಂದುತಿತ್ತು. ಆದರೆ ವಿಮಾನಗಳು ಹೆಚ್ಚು ಪ್ರಗತಿಯನ್ನು ಹೊಂದುವ ಕಾಲದಲ್ಲಿ ಹೀಲಿಯಂ ಅನಿಲವು ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕುತ್ತಿರಲಿಲ್ಲ. ಸಿಕ್ಕರು ಕೂಡ ಒಂದು ಕ್ಯೂಬಿಕ್ ಫೂಟಿಗೆ ೫೦೦ ಪೌಂಡು ತೆತ್ತಬೇಕಾಗುತಿತ್ತು. ಹೀಗಾಗಿ ಈ ಅನಿಲದ ಉಪಯೋಗವು ವಿಮಾನಗಳಲ್ಲಿ ಅಸಾಧ್ಯವಾಗಿತ್ತು.

ಸದ್ಯ ಹೀಲಿಯಂ ಸಾಕಷ್ಟು ದೊರೆತುದರಿಂದ ಇದು ನೆಲಮನೆಗಳಲ್ಲಿ ಸಂಯುಕ್ತ ರಾಷ್ಟ್ರದವರಿಂದ ಸಂಗ್ರಹಿಸಲಾಗಿದೆ. ಹೀಗೆ ಕೂಡಿಟ್ಟ ಅನಿಲದಲ್ಲಿ ಹೀಲಿಯಂ ಹೆಚ್ಚಿನ ಪ್ರಮಾಣದಲ್ಲಿದ್ದು ಇದನ್ನು ಬೇಕಾದಾಗ ಉಪಯೋಗಿಸಿಕೊಳ್ಳಬಹುದಾಗಿದೆ. ಉಪಯೋಗ ಮಾಡುವದಕ್ಕಿಂತ ಮೊದಲು ಅದರ ಶುದ್ಧೀಕರಣ ಅವಶ್ಯಕ.

ಈಚೆಗೆ ಇದನ್ನು ವಿಮಾನಗಳ ಕೆಳಗಿರುವ ಚಕ್ರಗಳಲ್ಲಿ ಗಾಳಿಯ ಬದಲಾಗಿ ತುಂಬುತ್ತಿದ್ದಾರೆ ಗಾಳಿಯಿಂದ ತುಂಬಿದ ಟೈರುಗಳ ಒಟ್ಟು (weight) ೨೦೦ ಪೌಂಡು ಇದ್ದರೆ, ಹೀಲಿಯಂ ತುಂಬಿದ ಟೈರುಗಳ ಒಟ್ಟು ತೂಕ ೧೫೦ ಪೌಂಡು ಇರತ್ತದೆ. ಹೀಲಿಯಂ ಉಪಯೋಗಿಸಿದಲ್ಲಿ ೫೦ಪೌಂಡು ಒಟ್ಟು ಕಡಿಮೆಯಾಗಿ ವಿಮಾನವು ಇನ್ನೊಬ್ಬನನ್ನು ಸುಲಭವಾಗಿ ತಗೆದುಕೊಂಡು ಹೋಗಬಹುದಾಗಿದೆ.

ಸಾರಜನಕದ ಬದಲಾಗಿ ಹೀಲಿಯಂ ಅನಿಲವನ್ನು ಅಮ್ಲಜನಕ (oxgen) ದೊಂದಿಗೆ (⅓:⅓) ಬೆರಿಸಿ, ತಯಾರಾದ ಕೃತಕ ಗಾಳಿಯನ್ನು ಉಸಿರಾಡಿಸಲಿಕ್ಕೆ ಕೊಟ್ಟರೆ ದಮ್ಮಿನಿಂದ ಬಳಲುವ ರೋಗಿಗಳು ಗುಣ ಹೊಂದಬಹುದೆಂದು ಡಾಕ್ಟರ್ ಎಲೊಬಿನ್ ಎಲ್ ಬಾರಖ್‌ರವರು ಪ್ರಯೋಗಗಳಿಂದ ಸಿದ್ಧಿಸಿ ತೋರಿಸಿದ್ದಾರೆ. ಇದಲ್ಲದೆ ಇದು ಪಕ್ಕೆಯ ಹಾಗೂ ಶ್ವಾಸಕೋಶದ ಅನೇಕ ಜಾಡ್ಯಗಳನ್ನು ದೂರಮಾಡುವದಕ್ಕೆ ಉಪಯೋಗವಾಗುತ್ತಿದೆ.

ಇದು ಒಂದು ಜಡ ಅನಿಲವಿದ್ದು ಹೆಚ್ಚು ಒತ್ತಡದ ಮೇಲೆ ಮೂಲ ವಸ್ತುಗಳ ಸಂಗಡ ಬೆರೆಯದೆ ಇದ್ದ ಮೂಲಕ, ಇದನ್ನು ಇತ್ತೀಚೆಗೆ ಎಣ್ಣೆಯ ಗುಪ್ತ ಸ್ಥಳಗಳನ್ನು ಗೊತ್ತು ಹಚ್ಚುವದರಲ್ಲಿ 'ಪತ್ತೆದಾರ' ನಂತೆ ಉಪಯೋಗಿಸುತ್ತಿದ್ದಾರೆಂದ ಮೇಲೆ ಇದರ ಮಹತ್ವದ ವಿಷಯಕ್ಕೆ ಹೆಚ್ಚಿಗೆ ಹೇಳಬೇಕಾಗಿಲ್ಲ.

ಅಘಟಿತ ವಸ್ತ್ರಾಪಹರಣ

ಕದ್ದು ಕೇಳಿದ್ದು

ಲೇಖಕ:— ವೆಂಕಣ್ಣಾಚಾರ್ಯ ಪಪ್ಪು, ಬಿ. ಎ., ಎಲ್ ಎಲ್. ಬಿ., ವಕೀಲ ಹುಬ್ಬಳ್ಳಿ

ತಿರುಗಲತಿಪ್ಪಾ:— ಮೊನ್ನೆ ಏನ ಹೇಳ್ಲಿ, ಒಂದು ಜೋಡಿ ಧೋತರಾ ಕಾಯಿದೆಶೀರ ಖರೀದಿ ಮಾಡಿಕೊಂಡು ಕ್ಷಾಮದೇವಿ ರೋಡಿನಿಂದಾ ಬರತಿದ್ದೆ. ಭೆಟ್ಟಿ ಆದವರೆಲ್ಲಾ ಕೇಳೊವ್ರು ಎಲ್ಲಿ ತಗೊಂಡ್ರಿ, ಎಲ್ಲಿ ತಗೊಂಡ್ರಿ?

ಓಡಾಡಿ:— ಇನ್ನು ನಿನ್ನ ಪುಣ್ಯಾ, ! ನಾನು ಮರ್ಸರಾಯಿಜ್ಡ ಧೋತರಾ- ಪರಮಿಟ್ಟಿನವ್ರು ಉಟಗೊಂಡು ಹೊರಟಿದ್ದೆ. ದಾದಿ ಬಡಿಯೊರಂಥಾ ಒಂದು ಗುಂಪು ಕೂಡಿತು. ನನಗ ಅಂಜಿಕಿ ಎಲ್ಲಿ ಮೈಮ್ಯಾಲಿನ ಧೋತರಾ ಕಸಕೊಂಡು ಓಡತಾರೊ ಅಂತ.

ತಿ:— ಓಡಾಡಿ ವಸ್ತ್ರಾಪಹರಣ ಆಗುತ್ತಿತ್ತನ್ನು.

ಓ:— ನಿನಗೇನು ನಗಿ! ರೇಶನ್ ಅಫೀಸಿನಿಂದ ೫ ಆಗೇದ-

ತಿ:— ನಂದು ಅಗಲಕ್ಕೆ ಒಂದು ಗತ್ತು ಮಾಡೇವಿ.

ಓ:— ಏನಪಾ ನಿಮ್ಮ ಗತ್ತು? ಗತ್ತಿನ ಯುಗಾ ಇದು!

ತಿ:— ಈಗ ಮಹಾಸಮುದಾಯದಾಗ ನಾವು ಊಟಕ್ಕೆ ಕೂತ ಕಡೆ ಬಡಸೊವರು ಬರುದಿಲ್ಲಾ, ಅಂತ ಹ್ಯಾಂಗ ನಮ್ಮ ಪೈಕಿ ಒಬ್ಬಬ್ಬರ್ನ ಬಡನಲಿಕ್ಕೆ ಹಚ್ಚತೇವಿ....

ಓ:— ಹಾಂಗ ರೇಶನ್ ಆಫೀಸಿನ್ಯಾಗ ನಿಮ್ಮ ಕಂಗಾಲರಾಯುಗ ನೌಕರಿ ಕೊಡಸೀರಿ ಕಾಣತದ

ತಿ:— ಅದ್ಯಾಕ, ನಮ್ಮ ಕ್ಷುಧಾ ಅಲ್ಲೇ ಟಾಯಿಪಿಸ್ಟ ಇದ್ದಾಳ.

ಓ:— ಅಂತ ೫ ನೀ ಏನು ಪರಮಿಟ್‌ಕಿಂಗ! ಇದಲ್ಲದೆ ಇದ್ರ ತೋರಸತಿದ್ದೆ, ಕಳ್ಳ ಪ್ಯಾಟಿಗಿನ ಕೆಣದ ಮ್ಯಾಲಿನ ಮಂಜರಪಾಟು- ಕದ್ದು ತಂದಿರತಾರಲ್ಲಾ, ಅದನ್ನ ಉಟಗೋಬೇಕಾಗುತ್ತಿತ್ತು.

ತಿ:— ಹಾಂಗೇನಿಲ್ಲಾ, ಒಮ್ಮೆ ಪ್ಯಾಟ್ಯಾಗ ಶೀರಿ ಪತ್ತಲಾ ಇವ ೫ ಬರತಾವ, ಆಗ ಗಂಡಸರು ಹೆಂಗಸರು ಎಲ್ಲರೂ ಪತ್ತಲಾ ೫ ನ ಉಡೋದು; ಮತ್ತೊಮ್ಮೆ ಪ್ಯಾಟಿ ತುಂಬೆಲ್ಲಾ ಬರಿ ಧೋತರಾ. ಅವಾಗ ಎಲ್ಲರೂ ಧೋತರಾ ಉಡೋದ..

ಓ:— ಏನ ತಪ್ಪದ ಅದರಾಗ?, ಬಟ್ಟಿ ಬರಗಾಲವಕ್ಕಿಂತಾ ಮೊದ್ಲ ೫ ಹೆಂಗಸರು ಗಂಡಸರ್ಹಾಂಗ ಶರ್ಟು ಕೋಟು ಚೊಣ್ಣಾ ತೊಟಗೋತಿದ್ದರು.

ತಿ:— ಅದು ಖರೇ ಗಂಡಸರು ಪತ್ಲಾ ಶೀರಿ ಉಡೋದ ಮಾತ್ರ ಈಗ ಬಂದದ. ನಾಟಕದಾಗಷ್ಟೇ ಗಂಡಸರು ಹೆಂಗಸರ ಪಾರ್ಟ ಹಾಕತಿದ್ದರು ಸ್ತ್ರೀಮಿಶ್ರಿತ ನಾಟಕ ಬರೋದಕಿಂತ ಮೊದ್ಲ.

ಓ:— ಈ ಬರಗಾಲ ೫ ಬಹಳ ವಿಚಿತ್ರ! ಕಾಲಚಕ್ರ ತಿರುಗಿ ಎಲೆ ತೊಪ್ಪಲ ಉಟಗೊಂಡು ಗಡ್ಡಿ ಗೆಣಸ ತಿಂಕೋತ ಟಾರ್ಝನ್ ಸಂಸ್ಕೃತಿ ಕಡೆ ಹೋಗತೇವೊ ! ವಾಸ್ತವಿಕ ಬರಗಾಲ ಬರ ೫ ಬಾರದು. ನಿಬಂಧದಾಗ ಬರೀಲಿಕ್ಕೆ ಕಲತಿದ್ದವೀ- ಮೋಟರು ರೇಲ್ವೆ ವಿಮಾನ ಇದರಿಂದ ಯುಕ್ರೇನದ ಕಾಳಿನ ಕಣಜಾ, ಮ್ಯಾಂಚೆಸ್ಟರ ಬಟ್ಟಿಗುಡ್ಡಾ, ಜಗತ್ತಿನ ಬೇಕಾದ್ದ ಬಾಜಾರಕ ರವಾನಿಸಲಿಕ್ಕೆ ಬರತ್ತದ. ಅಟಂ ಶಕ್ತಿ ಉಪಯೋಗಿಸಿದರಂತೂ ಆಹಾರ ಪದಾರ್ಥ ಬಟ್ಟಿ ಕಣ್ಮುಚ್ಚಿ ಕಣ್ಣು ತೆರೆಯೋದರೊಳಗ ಹನುಮಂತಾ ಸಂಜೀವಿನಿ ಕಡ್ಡಿ ಗುಡ್ಡಾ ತಂದ್ಹಾಂಗ ತರಸಬಹುದು.

ತಿ:— ಈ ಬರಗಾಲ ನಿಸರ್ಗನಿರ್ಮಿತ ಅಲ್ಲಾ ಈಶನಿರ್ಮಿತ ಅಲ್ಲಾ. ಇದು ಮಾನವಕೃತ ಅಹಾರಾಭಾವ. ಅದ ಕೂಡಲೇ ಗಾಳಿತುಂಬಿದ ಅಕಳುಕರುವಿನ್ಹಂಗ ಸರಕಾರ "ಧಾನ್ಯ ಬೆಳೀರಿ" "ಹತ್ತಿ ಬಿತ್ತಿ ಹಾಳಾಗ ಬ್ಯಾಡ್ರಿ" ಅಂತಾ ಹೇಳತಾ ಹೊರಡತಾರ, ಬಟ್ಟಿ ಬರಗಾಲ ತರತಾರ

ಓ:— ಏಕಾದಶಿ ಮಹತ್ವಾ, ದಿಗಂಬರ ಪ್ರಸಾರ, ಆಕಾಶವಾಣಿ ಕಡಿಯಿಂದ ಬೊಗಳಸತಾರ ದಿನ್ ಬಟ್ಟಿ, ನಿರಾಹಾರಿ ಸಾಧೂನ ಚಿತ್ರಾ ತೋರಿಸಿ "ಅವನನ್ನ ಅನುಕರಣಮಾಡಿರಿ'' ಅಂತಾರ.

ತಿ:— ಹತ್ತಿ ಬೆಳಿಗೊಡದಿದ್ದರ ಹತ್ತಿಕಾಳಿಲ್ಲ. ಹತ್ತಿಕಾಳಿಲ್ಲದ್ದಕ್ಕೆ ಎತ್ತ ಸತ್ತವಂದರ ಏನ ಆಹಾರ ಬೇಕೀರಿ? ನಿರಾಹಾರ. "ಹೊಟ್ಟಿಗಾಗಿ ಗೇಣು ಬಟ್ಟಿಗಾಗಿ" ಅಂತ ಗೀಗಿಪದಾ ಹೇಳಿಕೋತ ಮೋಕ್ಷ ಪಡೀಬೇಕಾಗತದ.

ಓ:— ನಿನ್ನ ತರ್ಕದ ಸರಪಳಿ ಮುಂದರಸು ಎತ್ತ ಸತ್ತ ಮ್ಯಾಲೆ ಎತ್ತೂ ಇಲ್ಲಾ ಗೊಬ್ಬರಾನೂ ಇಲ್ಲಾ. ಯಂತ್ರದಿಂದ ರಂಟೆ ಕುಂಟೆ ಹೊಡೆಯೋದು ರಾಸಾಯನಿಕ ಗೊಬ್ಬರಾ ಹಾಕೊದು. ಅಂದ್ರ ಭೂಮಿ ಎಲ್ಲಾ ಉಪ್ಪಾಗಿ ಸಹರಾ ಅಗತ ೫ ದ.

ತಿ:— ಇಷ್ಟಾದ್ರೂ ಮಂದಿ ಬದಕಿದ್ರ ಈಗ ಕೃತ್ರಿಮ ಹಾಲಿನ ಪುಡಿ ಆಹಾರ ಸತ್ವದ ಗುಳಿಗಿ ಕೊಟ್ಟ್ಹಾಂಗ ಯಾವದಾರ ಗಿರಣ್ಯಾಗ ಕೃತ್ರಿಮ ಅಕ್ಕಿ, ಕೃತಕ ಜೋಳಾ ತಯಾರಿಸಿ ಕೊಡತಾರ ಏನೊ ಕಾಳಜಿ ಬ್ಯಾಡ. ವ್ಯಾಪಾರ ಒಕ್ಕಲತನಾ ಎಲ್ಲಾದರಾಗೂ ಸರಕಾರದ ಕೈ, ಅದಕ ಹಿಂಗ ಆಗತ ೫ ದ. ಜನರೂ ಹಂಗ ಪಡಾಡತಾರ. ಈಗ ನೋಡು ನಿಮ್ಮ ಅಪ್ಪನ ಅಪ್ಪಾ ಅಘಾರಕ ಅಜ್ಜಾರ ಮರಸರಾಯಿಜ್ಡ ಧೋತರಾ ಉಟ್ಟಿದ್ನ? ಯಾಕಪಾ ನಿನಗೆ? ಕಾಜಿನ ಬಟ್ಟಿ ನೂರು ರೂಪಾಯಿಗೆ ಒಂದು ಗಜಾ ಅಂತ ಹಚ್ಚಿದರೂ ಖಂತರಿ ಮಂದಿ ಸಾಲಕ ೫ ಕಾರ್ಡ ಹಿಡಕೊಂಡು ಏನ ಮಂದ್ಯಪಾ! ರೇಶನ್‌ದಾಗ ಸಾಳಿ ದಿಳಿ ಅಕ್ಕಿ ಕೊಡತಾರಂದ್ರ ಗುದ್ದ ಡಬ್ಬಿ ಹಾಂಗ ನಿಂತ್ರ ಒಬ್ಬರಿಂದೊಬ್ಬರು.

ಓ:— ಇದಕೆಲ್ಲಾ ದುಡ್ಡು ಕಾರಣಾ. ಎಂಥೆಂಥವರ ಕೈಯೂಗ ದುಡ್ಡಾಗೇದ! ಈ ಯುದ್ಧದ ಮಹಾಪರ್ವಣಿ ವಳಗೆ ದುಡ್ಡು ಮಾಡದೇ ಇದ್ದವನ ೫ ಪಾಪಿ!

ತಿ:— ಏನ ದುಡ್ಡು! ಕಾಗದೀ ಕಾಂಚನ, ಕೃತಿಮ ಅಹಾರ, ಕಂಟ್ರೋಲರಾಮ, ಅಂದ ಬಳಿಕ ಈ ಗ್ರಹದ ಮ್ಯಾಲೆ ಬರೇ ಕಾಲ್ಪನಿಕ ಮನುಷ್ಯರೆ ಅಗತಾರೊ ಏನೊ ?

Reg. No. B. 3148

LICENCE No 3
Licenced to Post without Prepayment

KARMAVEER 22-7-46

AC. 51. —X

"ನಾವು ಕೈಲಾದಷ್ಟು ಪ್ರಯತ್ನಿಸೋಣ"

—ಶ್ರೀ. ಜಿನ್ನಾ

"ಸರ್ವರಿಗೆ ಈಗ ಒದಗಿದ ದುರ್ಧರ ಪ್ರಸಂಗದಿಂದ ಯಾರೂ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಯಾವದೇ ಲಾಭವನ್ನು ಪಡೆಯತಕ್ಕದ್ದಲ್ಲವೆಂಬ ವ್ಹಾಯಿಸರಾಯರ ಹೇಳಿಕೆಯನ್ನು ನಾನು ಪುನಃ ಉಚ್ಚರಿಸುತ್ತೇನೆ. ಭಿನ್ನ ಪಕ್ಷಗಳ ಬಡಿದಾಟಕ್ಕಿಂತ ಆಹಾರದ ಪ್ರಶ್ನೆಯು ಮಿಗಿಲಾಗಿದೆ. ನಾವು ಸಹಾಯ ಮಾಡತಕ್ಕದ್ದು. ಸದ್ಯಕ್ಕೆ ನಮ್ಮನ್ನು ಎದುರಿಸಿದ ಈ ಕಠಿಣ ಪ್ರಸಂಗದಲ್ಲಿ ನಾವು ಸಹಕರಿಸಲು ಕೈಲಾದಷ್ಟು ಪ್ರಯತ್ನ ಮಾಡೋಣ."

—ಫೆಬ್ರುವರಿ ೧೭ಕ್ಕೆ ಕೊಟ್ಟ ಹೇಳಿಕೆ.

ನಮ್ಮ ಪ್ರತಿಜ್ಞೆ ಮತ್ತು ಬಿನ್ನಹ

ಕೊರತೆಯ ಭಾಗಗಳಲ್ಲಿರುವವರಿಗೆ ನಾವು ಸಂಪೂರ್ಣ ಬೆಂಬಲ ನೀಡುವ ಬಗ್ಗೆ ಪ್ರತಿಜ್ಞೆ ಮಾಡುತ್ತೇನೆ. ದೇಶದ ಯಾವತ್ತೂ ಸಾಧನ ಸಾಮಗ್ರಿಯನ್ನು ಒಂದುಗೂಡಿಸಿ ಅವರಿಗೆ ತ್ವರಿತವಾಗಿ ನೆರವನ್ನು ನೀಡಲಾಗುತ್ತಿದೆ. ಅವರಿಗಿರುವ ಆಹಾರದ ಕೊರತೆಯಲ್ಲಿ ದೇಶದ ಉಳಿದ ಭಾಗವು ಪಾಲು ವಹಿಸುವದಲ್ಲದೆ ಸಮಪಾಲು ವಹಿಸುವದು. ಪ್ರತಿಯೊಬ್ಬನಿಗೆ ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯುವಂತೆ ಮಾಡುವದಕ್ಕಾಗಿ ಶೀದಾ ಪದ್ಧತಿಯನ್ನು ವಿಸ್ತರಿಸಲಾಗುತ್ತಿದೆ. ಬೆಲೆ ನಿಯಂತ್ರಣವನ್ನು ತಪ್ಪದೆ ಸಾಗಿಸಲಾಗುವುದು. ಶಾಂತತೆ ಮತ್ತು ಆತ್ಮ ವಿಶ್ವಾಸದಿಂದ ನಡೆದುಕೊಳ್ಳಿರಿ. ನಿಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಕೊಂಡುಕೊಳ್ಳಬೇಡಿರಿ. ಲಾಭಬಡಕರೊಡನೆ ಯಾವದೇ ತರಹ ಸಂಬಂಧವನ್ನಿಟ್ಟುಕೊಳ್ಳಬೇಡಿರಿ.

ಹೆಚ್ಚುಳಿದ ಭಾಗಗಳಲ್ಲಿರುವವರಿಗೆ ಸಂಪೂರ್ಣ ಸಹಾಯವನ್ನು ಒದಗಿಸಬೇಕೆಂದು ನಾವು ಅವರಿಗೆ ಬಿನ್ನವಿಸಿಕೊಳ್ಳುತ್ತೇವೆ. ನಿಮ್ಮಲ್ಲಿ ಹೆಚ್ಚಾಗಿ ಇರುವ ಕಾಳನ್ನು ನೀವು ಕೊಟ್ಟುಬಿಡಬೇಕಾಗಿದ್ದರೂ ನಿಮಗೆ ಸಾಕಷ್ಟು ಕಾಳು ಉಳಿಯುವುದು. ನಿಮ್ಮ ಪಟ್ಟಣದಲ್ಲಿ ಶೀದಾ ಕ್ರಮವನ್ನು ಬಳಕೆಯಲ್ಲಿ ತಂದರೆ ನಿಮ್ಮ ದೇಶಬಾಂಧವರಿಗೆ ನೆರವಾಗುವುದಕ್ಕಾಗಿ ಹೀಗೆ ಮಾಡಲಾಗಿದೆಯೆಂದು ನೆನಪಿನಲ್ಲಿಡಿರಿ. ಇಷ್ಟೆಲ್ಲ ಆಗಿಯೂ ನಿಮ್ಮ ಹತ್ತರ ಸಾಕಷ್ಟು ಉಳಿಯುವುದು. ಸ್ವಲ್ಪಾದರೂ ಕೂಡಿಹಾಕಿ ಇಡಬೇಡಿರಿ. ಅಧಿಕಾರಿಗಳೊಡನೆ ಸಹಕರಿಸಿರಿ.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಹುಮ್ಮಸ್ಸಿನಿಂದ ದುಡಿಯಿರಿ ಎಲ್ಲರೂ ಪಾಲುಗಾರರಾಗಿರಿ

ವ್ಯಾಪಾರಿಗಳಿಗೆ ಮತ್ತು ಬೆಳೆಯುವವರಿಗೆ ಸಂದೇಶ

ನಿಮಗೆ ಶಕ್ಯವಿದ್ದಷ್ಟು ಕಾಳನ್ನೆಲ್ಲ ಹೊರಗೆಡವಿರಿ; ನೀವು ಕೂಡಿಡುವ ಪ್ರತಿಯೊಂದು ಮಣ ಕಾಳು ಒಬ್ಬ ದೇಶ ಬಾಂಧವನ ಮರಣಕ್ಕೆ ಕಾರಣವಾಗುವುದು. ನಿಯಂತ್ರಿತ ಬೆಲೆಗಳಿಗಷ್ಟೇ ಮಾರಿರಿ—ಅವು ನಿಮಗೆ ಹಾಗೂ ಗ್ರಾಹಕರಿಗೆ ಇಬ್ಬರಿಗೂ ಯೋಗ್ಯವಾಗಿವೆ. ಎರಡನೇಯವರಿಗೆ ದುಃಖ ಕೊಟ್ಟು ಹಣ ಗಳಿಸುವುದು ಪಾಪವೆಂದು ತಿಳಿಯತಕ್ಕದ್ದು.

ಲಾಭಬಡಕರನ್ನು ಮತ್ತು ಕಳ್ಳಪೇಟೆಗಾರರನ್ನು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಿ ಹತ್ತಿಕ್ಕಬೇಕೆಂದು ಸರಕಾರ ಹಾಗೂ ಜನತೆಯು ನಿಶ್ಚಯಿಸಿರುತ್ತದೆ. ಕಳ್ಳಪೇಟೆಯನ್ನು ತಪ್ಪಿಸಿರಿ; ಅದು ಅಪರಾಧವಾಗಿದೆ.

ಹಿಂದುಸ್ಥಾನ ಸರಕಾರದ ಆಹಾರ ಖಾತೆ, ಹೊಸದಿಲ್ಲಿ, ಇವರ ಪ್ರಕಟಣೆ।

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟಿತವಾಯಿತು